ಶುಕ್ರವಾರ, ಫೆಬ್ರುವರಿ 26, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ವಿರೋಧಿಸಿ ಭಾರತೀಯ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್ ವಾದ) ಬೆಂಬಲಿಗರು ದೆಹಲಿಯ ಜಂತರ್ ಮಂತರ್‌ನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು
–ಪಿಟಿಐ ಚಿತ್ರ



ಬಾಗಲಕೋಟೆಯ ಎಸ್‌.ಎನ್‌.ಮೆಡಿಕಲ್ ಕಾಲೇಜಿನ ತಜ್ಞರಿಂದ ಯಶಸ್ವಿ ಪ್ರಯೋಗ ● ದೇಶದಲ್ಲಿಯೇ ಮೊದಲ ಬಾರಿಗೆ ಈ ವಿಧಾನ ಬಳಕೆ

ಶಸ್ತ್ರಚಿಕಿತ್ಸೆ ಕಲಿಕೆ: ನಿರ್ಜೀವ ಮಿದುಳಿಗೆ ಕೃತಕ ಜೀವ!

• ವೆಂಕಟೇಶ ಜಿ.ಎಚ್

ಪ್ರಜಾವಾಣಿ ವಿಶೇಷ

ಬಾಗಲಕೋಟೆ: ಸತ್ತ ವ್ಯಕ್ತಿಯ ಮಿದುಳನ್ನು ಕೃತಕವಾಗಿ ಸಕ್ರಿಯಗೊಳಿಸಿ ಪ್ರಾಯೋಗಿಕ ಕಲಿಕೆಗೆ ಬಳಸುವ ಪ್ರಯೋಗ ಇಲ್ಲಿನ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಎಸ್‌.ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನ ಅಂಗರಚನಾ ಶಾಸ್ತ್ರ ವಿಭಾಗದಲ್ಲಿ ಯಶಸ್ವಿಯಾಗಿ ನಡೆದಿದೆ.

ಸಾಮಾನ್ಯವಾಗಿ ಶಸ್ತ್ರಚಿಕಿತ್ಸೆ ಕಲಿಕೆಗೆ ಮೃತದೇಹಗಳನ್ನು ಬಳಸಲಾಗುತ್ತ- ದೆ. ಆದರೆ ಈ ಪ್ರಯೋಗದಲ್ಲಿ ಸತ್ತ ಮಿದುಳನ್ನು ಕೃತಕವಾಗಿ ಸಕ್ರಿಯಗೊಳಿಸಲಾಗಿದೆ.

ಮಿದುಳು ಮತ್ತು ನರಗಳ ಶಸ್ತ್ರಚಿಕಿತ್ಸೆಯ ಅಧ್ಯಯನದ ಭಾಗವಾಗಿ ದೇಶದಲ್ಲಿಯೇ ಮೊದಲ ಬಾರಿಗೆ ಈ ವಿಧಾನ ಬಳಕೆಯಾಗಿದೆ. ಈ ಹಿಂದೆ 2017ರಲ್ಲಿ ಮೊದಲ ಬಾರಿಗೆ ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ನರರೋಗ ಶಸ್ತ್ರಚಿಕಿತ್ಸ- ಕರು ಈ ಪ್ರಯೋಗ ಮಾಡಿ ಯಶಸ್ಸು ಸಾಧಿಸಿದ್ದರು ಎಂದು ಕಾಲೇಜಿನ ಅಂಗರಚನಾ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸಂಜೀವ್ ಕೊಳಗಿ ಹೇಳುತ್ತಾರೆ.

ಮನುಷ್ಯನ ಮಿದುಳಿನ ಒಳ ಮತ್ತು ಹೊರಭಾಗದಲ್ಲಿ (ಮಿದುಳು ಹಾಗೂ ಬುರುಡೆಯ ನಡುವೆ) ಸಿ.ಎಸ್‌.ಎಫ್



ಬಾಗಲಕೋಟೆಯ ಎಸ್‌.ಎನ್‌.ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ತಜ್ಞರಿಂದ ಮಿದುಳಿನ ಶಸ್ತ್ರಚಿಕಿತ್ಸೆಯ ಪ್ರಾಯೋಗಿಕ ಪಾಠದ ನೋಟ

(cerebro spinal fluid) ಎನ್ನುವ ದ್ರವ ಸದಾ ಚಲಿಸುತ್ತಿರುತ್ತದೆ. ಈ ದ್ರವ ಮಿದುಳನ್ನು ಸಂರಕ್ಷಿಸುತ್ತದೆ. ಮೃತದೇಹದ ಮಿದುಳಿನಲ್ಲಿ ಸಿ.ಎಸ್‌.ಎಫ್ ಸಂಚಾರ ಸ್ಥಗಿತಗೊಂಡಿರುತ್ತದೆ.

ಡಾ.ಸಂಜೀವ ಕೊಳಗಿ ಹಾಗೂ ಬೆಂಗಳೂರಿನ ಅಪೋಲೊ ಆಸ್ಪತ್ರೆಯ ನರ ಶಸ್ತ್ರಚಿಕಿತ್ಸಾ ತಜ್ಞರೂ ಆದ



ಡಾ.ಅಜಯ್ ಹೆರೂರ

ಕಾಲೇಜಿನ ಸಂದರ್ಶಕ ಪ್ರಾಧ್ಯಾಪಕ ಡಾ.ಅಜಯ್ ಹೆರೂರ ಅವರ ತಂಡ, ಮೃತ ದೇಹದ ಮಿದುಳಿನಲ್ಲಿ ಕೃತಕವಾಗಿ ದ್ರವ ಸಂಚರಿಸುವಂತೆ ಮಾಡಿ, ನಂತರ ಅದನ್ನು ಶಸ್ತ್ರಚಿಕಿತ್ಸೆ ಕುರಿತ ಕಲಿಕೆಗೆ ಬಳಸಿಕೊಂಡಿದೆ.

'ಸಿ.ಎಸ್‌.ಎಫ್ ಸಂಚಾರ ಇಲ್ಲದ ಮಿದುಳನ್ನು ಶಸ್ತ್ರಚಿಕಿತ್ಸೆಯ ತರಬೇತಿಗೆ ಬಳಸಿದರೆ ಸಹಜ ಮತ್ತು ಸಜೀವ ಅನುಭವ ವಿದ್ಯಾರ್ಥಿಗಳಿಗೆ ಸಿಗುವುದಿಲ್ಲ. ಹೀಗಾಗಿ ಕೃತಕವಾಗಿ, ಈ ದ್ರವವನ್ನು ಮಿದುಳಿನಲ್ಲಿ ಸಕ್ರಿಯಗೊಳಿಸುವ ಪ್ರಯೋಗಕ್ಕೆ ಮುಂದಾದೆವು' ಎಂದು ಡಾ.ಸಂಜೀವ್ ಕೊಳಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸಿ.ಎಸ್‌.ಎಫ್ ಮಾದರಿಯ ದ್ರಾವಣವನ್ನು (ಸಲೈನ್) ನೀಡಿ ಅದು ಸಂಚರಿಸುವಂತೆ ಮಾಡಲಾಯಿತು. ಈ ಪ್ರಯೋಗವನ್ನು ಫೆ 13ರಂದು ಅಮೆರಿಕದ ಎನ್‌ಎಎಸ್‌ಎಸ್ ಸಂಸ್ಥೆ (North American Skullbase Society) ಆಯೋಜಿಸಿದ್ದ ವರ್ಚ್ಯುವಲ್ ಕಾರ್ಯಾಗಾರದಲ್ಲಿ ಪ್ರಸ್ತುತಪಡಿಸಲಾಯಿತು. ದೇಶ–ವಿದೇಶದ 30 ಮಂದಿ ಕಲಿಕಾರ್ಥಿಗಳು ಪಾಲ್ಗೊಂಡು ಅದನ್ನು ನೇರವಾಗಿ ವೀಕ್ಷಿಸಿದರು' ಎಂದು ಡಾ.ಸಂಜೀವ್ ತಿಳಿಸಿದರು.

ಅತ್ಯುತ್ತಮ ಶಸ್ತ್ರಚಿಕಿತ್ಸಕರಾಗಿ ರೂಪಿಸಲು ನೆರವು



ಡಾ.ಸಂಜೀವ್ ಕೊಳಗಿ

'ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳನ್ನು ಅತ್ಯುತ್ತಮ ನರಶಸ್ತ್ರಚಿಕಿತ್ಸಕರನ್ನಾಗಿ ರೂಪಿಸಲು ಈ ವಿಧಾನ ನೆರವಾಗಲಿದೆ. ಮಿದುಳಿನ ಶಸ್ತ್ರಚಿಕಿತ್ಸೆಯ ಪ್ರಾಯೋಗಿಕ ಕಲಿಕೆಗೆ ಜೀವಂತ ರೋಗಿಗಳನ್ನು ಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಕಲಿಕಾರ್ಥಿಗಳಿಗೆ ನೈಜ ಅನುಭವ ಸಿಗಲಿ ಎಂಬ ಕಾರಣಕ್ಕೆ ಪ್ರಯೋಗಕ್ಕೆ ಮುಂದಾದೆವು' ಎಂದು ಎಸ್‌.ಎನ್‌.ಮೆಡಿಕಲ್ ಕಾಲೇಜು ಅಂಗರಚನಾ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸಂಜೀವ್ ಕೊಳಗಿ ಹೇಳುತ್ತಾರೆ.

ಮಿದುಳಿನ ಎಂಡೊಸ್ಕೋಪಿಕ್ (ಕೀ ಹೋಲ್) ಸರ್ಜರಿಯಂತಹ ಕ್ಲಿಷ್ಟಕರ ಚಿಕಿತ್ಸೆ ಕಲಿಯಲು ವೈದ್ಯ ವಿದ್ಯಾರ್ಥಿಗಳಿಗೆ ಈ ರೀತಿಯ ತರಬೇತಿ ಅನುಕೂಲವಾಗಲಿದೆ. ಈ ಪ್ರಯೋಗವನ್ನು ಎನ್‌ಎಎಸ್‌ಎಸ್ ಸಂಸ್ಥೆಯ ಜರ್ನಲ್‌ನಲ್ಲಿ ಪ್ರಕಟಿಸಲು ಸಿದ್ಧತೆ ನಡೆಸಿದ್ದೇವೆ ಎಂದು ತಿಳಿಸಿದರು.

ಡಿಜಿಟಲ್ ವೇದಿಕೆ, ಪೋರ್ಟಲ್‌ಗಳಿಗೆ ಮೂಗುದಾರ

ಸಾಮಾಜಿಕ ಜಾಲತಾಣ, ಒಟಿಟಿ ವೇದಿಕೆ, ಸುದ್ದಿ ಪೋರ್ಟಲ್‌ಗಳ ನಿಯಂತ್ರಣಕ್ಕೆ ನಿಯಮ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಮಾಜಿಕ ಮಾಧ್ಯಮ, ಒಟಿಟಿ ವೇದಿಕೆಗಳು ಮತ್ತು ಡಿಜಿಟಲ್ ಸುದ್ದಿ ಪೋರ್ಟಲ್‌ಗಳನ್ನು ನಿಯಂತ್ರಿಸಿ, ಅವುಗಳ ಮೇಲಿನ ಹಿಡಿತ ಬಿಗಿಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ಗುರುವಾರ ಪ್ರಕಟಿಸಿದೆ. ದೂರು ನಿರ್ವಹಣಾ ವ್ಯವಸ್ಥೆಗಳನ್ನು ಸ್ಥಾಪಿಸುವಂತೆ ಈ ಕ್ಷೇತ್ರಗಳ ಸಂಸ್ಥೆಗಳಿಗೆ ಸೂಚಿಸಿದೆ.

ಸಾಮಾಜಿಕ ಮಾಧ್ಯಮ ವೇದಿಕೆಗಳ ವ್ಯಾಪಕ ದುರ್ಬಳಕೆಯ ದೂರುಗಳ ಕಾರಣಕ್ಕೆ ಸರ್ಕಾರವು 'ಮಾಹಿತಿ ತಂತ್ರಜ್ಞಾನ (ಮಧ್ಯಸ್ಥ ಸಂಸ್ಥೆಗಳಿಗೆ ಮಾರ್ಗಸೂಚಿ ಮತ್ತು ಡಿಜಿಟಲ್ ನೀತಿ ಸಂಹಿತೆ) ನಿಯಮಗಳು 2021' ಅನ್ನು ರೂಪಿಸಿದೆ. ಸರ್ಕಾರವು 'ಸೌಮ್ಯ ಮಟ್ಟದ ನಿಯಂತ್ರಣ ಧೋರಣೆ' ಅನುಸರಿಸಿದೆ. ಸಾಮಾನ್ಯ ಬಳಕೆದಾರರ ದೂರುಗಳನ್ನು ಆಲಿಸಿ, ಸಕಾಲದಲ್ಲಿ ಪರಿಹಾರ ಒದಗಿಸಲು ದೂರು ನಿರ್ವಹಣಾ ವ್ಯವಸ್ಥೆ ಸ್ಥಾಪನೆ ಅಗತ್ಯ ಎಂದು ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಹೇಳಿದ್ದಾರೆ.



ರವಿಶಂಕರ್ ಪ್ರಸಾದ್ ಮತ್ತು ಪ್ರಕಾಶ್ ಜಾವಡೇಕರ್ ಅವರು ಹೊಸ ನಿಯಮಗಳ ಬಗ್ಗೆ ಮಾಧ್ಯಮಗೋಷ್ಠಿಯಲ್ಲಿ ವಿವರಣೆ ನೀಡಿದರು ಪಿಟಿಐ ಚಿತ್ರ

ವಾಟ್ಸ್‌ಆ್ಯಪ್, ಫೇಸ್‌ಬುಕ್, ಟ್ವಿಟರ್‌ನಂತಹ ಸಾಮಾಜಿಕ ಜಾಲತಾಣಗಳು, ನೆಟ್‌ಫ್ಲಿಕ್ಸ್, ಯೂಟ್ಯೂಬ್ ಮತ್ತು ಅಮೆಜಾನ್ ಪ್ರೈಮ್ ವಿಡಿಯೊದಂತಹ ಒಟಿಟಿ ವೇದಿಕೆಗಳು ಮತ್ತು ಡಿಜಿಟಲ್ ಸುದ್ದಿ ಪೋರ್ಟಲ್‌ಗಳಿಗೆ ಈ ನಿಯಮಗಳು ಅನ್ವಯ ಆಗಲಿವೆ.

ಚಿತ್ರಮಂದಿರ ಮತ್ತು ಟಿ.ವಿ. ಮೂಲಕ ಕಾರ್ಯಕ್ರಮ ವೀಕ್ಷಣೆ ಮತ್ತು ಇಂಟರ್‌ನೆಟ್ ಮೂಲಕ ವೀಕ್ಷಣೆಯ ನಡುವಣ ವ್ಯತ್ಯಾಸವನ್ನು ಗಮನದಲ್ಲಿ ಇರಿಸಿಕೊಂಡೇ ಒಟಿಟಿ ವೇದಿಕೆ ನಿಯಂತ್ರಣದ ಮಾರ್ಗಸೂಚಿಯನ್ನು ರೂಪಿಸಲಾಗಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ.

ಈ ನಿಯಮಗಳು ತಕ್ಷಣದಿಂದಲೇ ಜಾರಿಗೆ ಬರುತ್ತವೆ. ಸಾಮಾಜಿಕ ಮಾಧ್ಯಮದ ಪ್ರಮುಖ ಸಂಸ್ಥೆಗಳು (ಬಳಕೆದಾರರ ಸಂಖ್ಯೆಯ ಆಧಾರದಲ್ಲಿ) ಈ ನಿಯಮಗಳನ್ನು ಪಾಲಿಸಲು ಮೂರು ತಿಂಗಳ ಗಡುವು ನೀಡಲಾಗಿದೆ.

ಬಳಕೆದಾರರ ಸಂಖ್ಯೆ				
53 ಕೋಟಿ	44.8 ಕೋಟಿ	41 ಕೋಟಿ	21 ಕೋಟಿ	1.75 ಕೋಟಿ
ವಾಟ್ಸ್‌ಆ್ಯಪ್	ಯೂಟ್ಯೂಬ್	ಫೇಸ್‌ಬುಕ್	ಇನ್‌ಸ್ಟಾಗ್ರಾಂ	ಟ್ವಿಟರ್

1. ಸಾಮಾಜಿಕ ಮಾಧ್ಯಮಗಳ ನಿಯಂತ್ರಣಕ್ಕೆ ಮಾಹಿತಿ ತಂತ್ರಜ್ಞಾನ ಸಚಿವಾಲಯ ಮೇಲುಸ್ತುವಾರಿ

1.2 ಸಾಮಾಜಿಕ ಮಾಧ್ಯಮ ಮಧ್ಯಸ್ಥ ಸಂಸ್ಥೆ

ಕಡಿಮೆ ಬಳಕೆದಾರರು ಇರುವ ಸಾಮಾಜಿಕ ಮಾಧ್ಯಮಗಳು ದೂರ ನಿರ್ವಹಣಾ ಘಟಕವನ್ನು ಸ್ಥಾಪಿಸಬೇಕು. ಆದರೆ ಈ ಬಳಕೆದಾರರ ಸಂಖ್ಯೆಯನ್ನು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಇನ್ನೂ ನಿಗದಿ ಮಾಡಿಲ್ಲ. ಬೃಹತ್ ಸಾಮಾಜಿಕ ಮಾಧ್ಯಮ ಮಧ್ಯಸ್ಥ ಸಂಸ್ಥೆಗಳಿಗೆ ಅನ್ವಯವಾಗುವ ಎಲ್ಲಾ ನಿಯಮಗಳು ಇವಕ್ಕೆ ಅನ್ವಯವಾಗುವುದಿಲ್ಲ.

1.3 ಬೃಹತ್ ಸಾಮಾಜಿಕ ಮಾಧ್ಯಮ ಮಧ್ಯಸ್ಥ ಸಂಸ್ಥೆ

ಹೆಚ್ಚು ಬಳಕೆದಾರರು ಇರುವ ಸಾಮಾಜಿಕ ಮಾಧ್ಯಮಗಳು ದೂರ ನಿರ್ವಹಣಾ ಘಟಕವನ್ನು ಸ್ಥಾಪಿಸಬೇಕು. ಆದರೆ ಬಳಕೆದಾರರ ಸಂಖ್ಯೆಯನ್ನು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಇನ್ನೂ ನಿಗದಿ ಮಾಡಿಲ್ಲ.

- ನಿಯಮ ಪಾಲನಾ ಅಧಿಕಾರಿ ನೇಮಕ ಮಾಡಬೇಕು. ಸಾಮಾಜಿಕ ಮಾಧ್ಯಮಗಳಿಗೆ ಅನ್ವಯವಾಗುವ ಎಲ್ಲಾ ನಿಯಮಗಳ ಪಾಲನೆಯ ಹೊಣೆ ಈ ಅಧಿಕಾರಿಯದ್ದು. ಪ್ರಧಾನ ಸಂಪರ್ಕ ಅಧಿಕಾರಿಯನ್ನು ನೇಮಕ ಮಾಡಬೇಕು. ಸರ್ಕಾರಕ್ಕೆ ಬಂದಿರುವ ದೂರುಗಳ ಸಂಬಂಧ ಸಾಮಾಜಿಕ ಮಾಧ್ಯಮಗಳ ಮಧ್ಯಸ್ಥ ಸಂಸ್ಥೆಯನ್ನು ಸಂಪರ್ಕಿಸಲು ಪ್ರಧಾನ ಸಂಪರ್ಕ ಅಧಿಕಾರಿಯು ದಿನದ 24 ಗಂಟೆಯೂ ಲಭ್ಯವಿರಬೇಕು. ದೂರು ಪರಿಹಾರ ಅಧಿಕಾರಿಯನ್ನು ನೇಮಕ ಮಾಡಬೇಕು. ಈ ಎಲ್ಲ ಅಧಿಕಾರಿಗಳು ಭಾರತದಲ್ಲಿಯೇ ನೆಲೆಸಿರಬೇಕು
- ಕಂಟೆಂಟ್‌ಗಳನ್ನು (ಚಿತ್ರ, ಫೋಟೊ, ವಿಡಿಯೊ ಸೇರಿದಂತೆ ಯಾವುದೇ ಕಾರ್ಯಕ್ರಮ) ತೆರವು ಮಾಡಬೇಕು ಎಂದು ಸರ್ಕಾರವಾಗಲೀ, ನ್ಯಾಯಾಲಯವಾಗಲೀ ಆದೇಶ ನೀಡಿದ 24 ಗಂಟೆಗಳ ಒಳಗೆ ಅದನ್ನು ಅನುಷ್ಠಾನಕ್ಕೆ ತರಬೇಕು
- ದೂರು ಮತ್ತು ಪರಿಹಾರಗಳ ಬಗ್ಗೆ ಪ್ರತಿ ತಿಂಗಳೂ ವರದಿ ಪ್ರಕಟಿಸಬೇಕು
- ಕಂಟೆಂಟ್‌ಗಳು ಮತ್ತು ಸುಳ್ಳುಸುದ್ದಿಗಳ ಮೂಲ ಯಾರು ಎಂಬುದನ್ನು ಪತ್ತೆಮಾಡಬೇಕು. ತನಿಖೆಯ ಕಾರಣಕ್ಕೆ ಈ ಮಾಹಿತಿಯನ್ನು ತನಿಖಾ ಸಂಸ್ಥೆಗಳ ಜತೆ ಹಂಚಿಕೊಳ್ಳಬೇಕು
- ರಾಷ್ಟ್ರೀಯ ಏಕತೆ, ಸಾರ್ವಭೌಮತೆ, ರಾಷ್ಟ್ರೀಯ ಭದ್ರತೆ, ವಿದೇಶಿ ಸಂಬಂಧ, ಕಾನೂನು ಸುವ್ಯವಸ್ಥೆ ಪಾಲನೆಗೆ ಧಕ್ಕೆ ತರುವಂತಹ ಮತ್ತು ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತಹ ಕಂಟೆಂಟ್‌ಗಳಿಗೆ ಸಂಬಂಧಿಸಿದಂತೆ ಈ ನಿಯಮ ಅನ್ವಯ
- ದೂರು, ತನಿಖೆಗೆ ಸಂಬಂಧಿಸಿದಂತೆ ಕಂಟೆಂಟ್‌ನ ಮೂಲಕರ್ತೃವಿಗೆ ಮಾಹಿತಿ ನೀಡುವ ಅವಶ್ಯಕತೆ ಇಲ್ಲ
- ಬಳಕೆದಾರರು ತಮ್ಮನ್ನು ತಾವು ದೃಢೀಕರಿಸಿಕೊಳ್ಳಲು ವ್ಯವಸ್ಥೆ ಇರಬೇಕು; ದೃಢೀಕರಣ ಆಗಿದೆ ಎಂಬುದು ಬಳಕೆದಾರರಿಗೆ ಸ್ಪಷ್ಟವಾಗಿ ಅರಿವಾಗುವ ವ್ಯವಸ್ಥೆ ಇರಬೇಕು
- ಸಾಮಾಜಿಕ ಜಾಲತಾಣದ ಖಾತೆಯಿಂದ ಯಾವುದೇ ಕಂಟೆಂಟ್ ಅನ್ನು ಸಂಸ್ಥೆಯು ಅಳಿಸಿ ಹಾಕುವುದಕ್ಕೆ ಮುಂಚೆ, ಬಳಕೆದಾರರಿಗೆ ಆ ಬಗ್ಗೆ ಮಾಹಿತಿ ನೀಡಬೇಕು; ಅಳಿಸಿ ಹಾಕಲು ಕಾರಣವೇನು ಎಂಬ ವಿವರಣೆಯನ್ನೂ ನೀಡಬೇಕು. ಮಧ್ಯಸ್ಥ ಸಂಸ್ಥೆಯ ಕ್ರಮವನ್ನು ಪ್ರಶ್ನಿಸಲು ಬಳಕೆದಾರರಿಗೆ ನ್ಯಾಯಬದ್ಧ ಅವಕಾಶ ಮತ್ತು ಸಮಯವನ್ನೂ ನೀಡಬೇಕು

1.4 ದೂರು ಪರಿಹಾರ ವ್ಯವಸ್ಥೆ

- ಬಳಕೆದಾರರು ಮತ್ತು ಸಂತ್ರಸ್ತರು ದೂರು ನೀಡಲು ಅವಕಾಶವಿರಬೇಕು
- ದೂರು ಪರಿಹಾರ ಅಧಿಕಾರಿ ನೇಮಕ ಮತ್ತು ಸಂಪರ್ಕ ಸಂಖ್ಯೆಯನ್ನು ಬಹಿರಂಗಪಡಿಸಬೇಕು
- ದೂರು ಬಂದ 24 ಗಂಟೆಗಳ ಒಳಗೆ ಅದನ್ನು ಸ್ವೀಕರಿಸಬೇಕು
- ದೂರು ಬಂದ 15 ದಿನಗಳ ಒಳಗೆ ಪರಿಹರಿಸಬೇಕು

1.5 ಮಹಿಳೆಯ ಗೌರವ ರಕ್ಷಣೆ

- ಮಹಿಳೆಯ ಗೌರವ ರಕ್ಷಣೆಗೆ ಆದ್ಯತೆ ನೀಡಬೇಕು. ಬೆತ್ತಲೆ, ಅರೆಬೆತ್ತಲೆ, ಲೈಂಗಿಕಕ್ರಿಯೆಗಳ ಚಿತ್ರ ಮತ್ತು ವಿಡಿಯೊಗಳಿಗೆ ಸಂಬಂಧಿಸಿದ ದೂರುಗಳ ವಿಭಾಗ
- ದೂರು ಬಂದ 24 ಗಂಟೆಗಳ ಒಳಗೆ ಕಂಟೆಂಟ್‌ಗಳನ್ನು ತೆರವು ಮಾಡಬೇಕು
- ಸಂತ್ರಸ್ತೆ ನೇರವಾಗಿ ಅಥವಾ ಸಂತ್ರಸ್ತೆಯ ಪರವಾಗಿ ದೂರು ನೀಡಬಹುದು

2. ವಾರ್ತಾ ಮತ್ತು ಪ್ರಸಾರ ಸಚಿವಾಲಯ

2.2 ಒಟಿಟಿ ಪ್ಲಾಟ್‌ಫಾರಂಗಳು

- ಕಂಟೆಂಟ್ ನಿರ್ಮಾಣ ಮತ್ತು ಪ್ರಸಾರದಲ್ಲಿ ಒಟಿಟಿ ಪ್ಲಾಟ್‌ಫಾರಂಗಳು ಸ್ವಯಂನಿಯಂತ್ರಣ ವ್ಯವಸ್ಥೆ ರೂಪಿಸಿಕೊಳ್ಳಬೇಕು
- ಕಂಟೆಂಟ್‌ಗಳನ್ನು ವಯಸ್ಸು ಆಧರಿತ ವರ್ಗೀಕರಣ ಮಾಡಬೇಕು. ಯು, ಯು/ಎ 7+, ಯು/ಎ 13+, ಯು/ಎ 16+ ಮತ್ತು ಎ (ವಯಸ್ಕ) ಕಂಟೆಂಟ್‌ಗಳೆಂದು ವರ್ಗೀಕರಣ ಮಾಡಬೇಕು
- ಯು/ಎ 13+ ಮತ್ತು ಅದಕ್ಕಿಂತ ಹೆಚ್ಚಿನ ಕಂಟೆಂಟ್‌ಗಳಿಗೆ ಹೆತ್ತವರು ಲಾಕ್ ಮಾಡಲು ಸಾಧ್ಯವಾಗುವ ವ್ಯವಸ್ಥೆ ಇರಬೇಕು
- ಎ (ವಯಸ್ಕ) ಕಂಟೆಂಟ್‌ಗಳಿಗೆ ವಯಸ್ಸು ದೃಢೀಕರಣ ವ್ಯವಸ್ಥೆಯನ್ನು ರೂಪಿಸಬೇಕು; ಇದು ವಿಶ್ವಾಸಾರ್ಹವಾಗಿರಬೇಕು

2.3 ಡಿಜಿಟಲ್ ನ್ಯೂಸ್ ಪೋರ್ಟಲ್‌ಗಳು

- ಭಾರತೀಯ ಪ್ರೆಸ್ ಕೌನ್ಸಿಲ್‌ನ ನಿಯಮಗಳು ಮತ್ತು ಕೇಬಲ್ ಟಿವಿ ನೆಟ್‌ವರ್ಕ್ ನಿಯಂತ್ರಣ ಕಾಯ್ದೆಯ ಕಾರ್ಯಕ್ರಮ ಸಂಹಿತೆಗಳು ಡಿಜಿಟಲ್ ನ್ಯೂಸ್ ಅನ್ವಯ.
- ಪೋರ್ಟಲ್‌ಗಳ ಮಾಲೀಕತ್ವವನ್ನು ಬಹಿರಂಗಪಡಿಸಬೇಕು
- ಪಬ್ಲಿಷರ್‌ಗಳು ಸ್ವಯಂ ನಿಯಂತ್ರಣ ವ್ಯವಸ್ಥೆಯನ್ನು ಜಾರಿಗೆ ತರಬೇಕು. ದೂರು ಪರಿಹಾರ ಅಧಿಕಾರಿಯನ್ನು ನೇಮಕ ಮಾಡಬೇಕು. ದೂರು ಬಂದ 15 ದಿನಗಳ ಒಳಗೆ, ಅವುಗಳಿಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳಬೇಕು
- ಹಲವು ಪಬ್ಲಿಷರ್‌ಗಳು ಸೇರಿ, ಎರಡನೇ ಹಂತದ ಸ್ವಯಂ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಗಣ್ಯವ್ಯಕ್ತಿಗಳು ಈ ಮಂಡಳಿಯಲ್ಲಿ ಇರಬೇಕು. ಪಬ್ಲಿಷರ್ ಸ್ವಯಂ ನಿಯಂತ್ರಣ ವ್ಯವಸ್ಥೆಯು 15 ದಿನಗಳ ಒಳಗೆ ಪರಿಹರಿಸದ ದೂರುಗಳನ್ನು, ಈ ಮಂಡಳಿಯು ಪರಿಹರಿಸಬೇಕು.

ನಿಯಂತ್ರಣದ ಹಿಂದಿನ ಕಾರಣವೇನು?

ನವದೆಹಲಿ: ರೈತರ ಪ್ರತಿಭಟನೆಗೆ ಬೆಂಬಲವಾಗಿ 'ಪ್ರಚೋದನಕಾರಿ' ಎಂದು ಹೇಳಲಾದ ಟ್ವೀಟ್‌ಗಳಿಗೆ ಸಂಬಂಧಿಸಿ ಟ್ವಿಟರ್ ಮತ್ತು ಸರ್ಕಾರದ ನಡುವೆ ಇತ್ತೀಚೆಗೆ ಜಟಾಪಟಿ ನಡೆದಿತ್ತು. ಸರ್ಕಾರ ಸೂಚಿಸಿದ 1,500 ಟ್ವೀಟ್‌ಗಳು ಅಥವಾ ಖಾತೆಗಳನ್ನು ಅಳಿಸಿ ಹಾಕಲು ಟ್ವಿಟರ್ ಆರಂಭದಲ್ಲಿ ಹಿಂದೇಟು ಹಾಕಿತ್ತು. ಕಾನೂನು ಕ್ರಮದ ಬೆದರಿಕೆ ಒಡ್ಡಿದ ನಂತರವೇ ಸರ್ಕಾರದ ಆದೇಶವನ್ನು ಟ್ವಿಟರ್ ಪಾಲಿಸಿತ್ತು. ಟ್ವಿಟರ್‌ಗೆ ಪರ್ಯಾಯವಾಗಿ 'ಕೂ' ಎಂಬ ಆ್ಯಪ್ ಅನ್ನು ಕೇಂದ್ರದ ಹಲವು ಸಚಿವರು ಬೆಂಬಲಿಸಿದ್ದರು.

ಅಮೆಜಾನ್ ಪ್ರೈಮ್ ವಿಡಿಯೊದಲ್ಲಿ ಪ್ರಸಾರವಾದ 'ತಾಂಡವ್' ಸರಣಿಯಲ್ಲಿ ಹಿಂದೂ ದೇವ–ದೇವತೆಗಳನ್ನು ಅವಹೇಳನ ಮಾಡಲಾಗಿದೆ ಎಂಬ ಆರೋಪ ಕೇಳಿ ಬಂದಿತ್ತು. ಅವಹೇಳನಕಾರಿಯಾಗಿರುವ ಭಾಗಗಳನ್ನು ಕತ್ತರಿಸಬೇಕು ಎಂದು ಅಧಿಕಾರಿಗಳು ಆದೇಶಿಸಿದ್ದರು. ಈ ಕಾರಣಗಳಿಂದಾಗಿಯೇ ಸರ್ಕಾರವು ನಿಯಂತ್ರಣದ ನಿಯಮಗಳನ್ನು ರೂಪಿಸಿದೆ ಎಂದು ಹೇಳಲಾಗುತ್ತಿದೆ.

ಈಗ ರೂಪಿಸಿರುವ ನಿಯಮಗಳು ಬಳಕೆದಾರರ ಖಾಸಗಿತನವನ್ನು ಕುಗ್ಗಿಸುತ್ತದೆ ಮತ್ತು ಸೆನ್ಸಾರ್‌ಶಿಪ್ ಅನ್ನು ಹೆಚ್ಚಿಸುತ್ತದೆ ಎಂದು ವಾಕ್ ಸ್ವಾತಂತ್ರ್ಯದ ಹಕ್ಕಿನ ಪ್ರತಿಪಾದಕರು ಮತ್ತು ತಂತ್ರಜ್ಞಾನ ವ್ಯಾಪಾರ ಗುಂಪುಗಳು ಟೀಕಿಸಿವೆ.



ಎಲ್ಲಾ ಸಾಮಾಜಿಕ ಮಾಧ್ಯಮಗಳು ಭಾರತದ ಕಾನೂನುಗಳಿಗೆ ಬದ್ಧವಾಗಿರಬೇಕು. ಇಂದು ಹೊಸ ನಿಯಮಗಳನ್ನು ಘೋಷಿಸಲಾಗಿದೆ. ದೂರು ಪರಿಹಾರ ವ್ಯವಸ್ಥೆಗೆ ಸಾಂಸ್ಥಿಕ ರೂಪ ನೀಡಿರುವ ಕಾರಣ ಬಳಕೆದಾರರಿಗೆ ಹೆಚ್ಚು ಅನುಕೂಲವಾಗಲಿದೆ. ಡಿಜಿಟಲ್ ಮಾಧ್ಯಮಗಳ ಮೇಲೆ ನೀತಿ ಸಂಹಿತೆ ಜಾರಿ ಮಾಡಿರುವುದು ಮತ್ತು ಮೂರು ಹಂತದ ನಿಯಂತ್ರಣ ವ್ಯವಸ್ಥೆ ರೂಪಿಸಿರುವದು ಸ್ವಾಗತಾರ್ಹ ಕ್ರಮ

– ಅಮಿತ್ ಶಾ, ಕೇಂದ್ರ ಗೃಹ ಸಚಿವ

ಅಸಭ್ಯ, ಅಶ್ಲೀಲ ಕಂಟೆಂಟ್‌ಗಳನ್ನು ಪ್ರಸಾರ ಮಾಡುತ್ತಿದ್ದ ಒಟಿಟಿ ಪ್ಲಾಟ್‌ಫಾರಂಗಳ ಮೇಲೆ ಇಂತಹ ನಿಯಂತ್ರಣದ ಅವಶ್ಯಕತೆ ಇತ್ತು

@SrivastvaSaloni

ಸುಳ್ಳು ಸುದ್ದಿಗಳನ್ನು ನಿಯಂತ್ರಿಸಲೆಂದೇ ಸರ್ಕಾರ ಈ ನಿಯಮಗಳನ್ನು ರೂಪಿಸಿದೆ. ಇದು ಸ್ವಾಗತಾರ್ಹ. 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಸುಳ್ಳನ್ನು ಸರ್ಕಾರವೇ ಸೃಷ್ಟಿಸಿದೆ. ಈ ಸುಳ್ಳಿನ ಮೂಲಕರ್ತೃವನ್ನು ಸರ್ಕಾರವು ಶಿಕ್ಷಿಸಲಿದೆ

@3Eamiya

ನಮ್ಮ ಅಭಿವ್ಯಕ್ತಿ ಮತ್ತು ವೀಕ್ಷಿಸುವ ಹಕ್ಕೂ ಈಗ ಸರ್ಕಾರದ ಕೈಯಲ್ಲಿದೆ. ಇದು ದುರಂತ

@SoultakerAsura

ಸರ್ಕಾರದ ಸುಳ್ಳುಗಳನ್ನು ಬಹಿರಂಗಪಡಿಸುತ್ತಿದ್ದ ಸ್ವತಂತ್ರ ಪತ್ರಕರ್ತರನ್ನು ನಿಯಂತ್ರಿಸಲು ಈ ನಿಯಮಗಳನ್ನು ರೂಪಿಸಲಾಗಿದೆ. ಆದರೆ ಸುಳ್ಳುಸುದ್ದಿಗಳನ್ನು ಹರಡುವ ಬಿಜೆಪಿಯ ಐಟಿ ವಿಭಾಗಕ್ಕೆ ಮಾತ್ರ ರಕ್ಷಣೆ ನೀಡಲಾಗಿದೆ

@haris__016

ಗೂಗಲ್, ಫೇಸ್‌ಬುಕ್ ವೇದಿಕೆಯಲ್ಲಿ ಪ್ರಸಾರವಾಗುವ ವರದಿ

ಸುದ್ದಿಗೆ ಶುಲ್ಕ ಕಾನೂನಿಗೆ ಆಸ್ಟ್ರೇಲಿಯಾ ಅನುಮೋದನೆ

ಕ್ಯಾನ್‌ಬೆರಾ (ಎಪಿ): ಗೂಗಲ್ ಮತ್ತು ಫೇಸ್‌ಬುಕ್‌ಗಳು ತಮ್ಮ ಪ್ಲಾಟ್‌ಫಾರಂಗಳಲ್ಲಿ ಪ್ರಸಾರ ಮಾಡುವ ಸುದ್ದಿಗಳಿಗೆ ಶುಲ್ಕ ಪಾವತಿ ಮಾಡುವುದನ್ನು ಕಡ್ಡಾಯಗೊಳಿಸುವ ಕಾನೂನಿಗೆ ಆಸ್ಟ್ರೇಲಿಯಾ ಸಂಸತ್ತು ಗುರುವಾರ ಅನುಮೋದನೆ ನೀಡಿದೆ. ಇದರ ಜತೆಯಲ್ಲೇ, ಆಸ್ಟ್ರೇಲಿಯಾದಲ್ಲಿ ಬಳಕೆಯಾಗುವ ಸುದ್ದಿಗಳಿಗೆ ಪಾವತಿ ಮಾಡಲು ಫೇಸ್‌ಬುಕ್ ಒಪ್ಪಿಗೆ ನೀಡಿದೆ.

'ಯಾವ ಮಾಧ್ಯಮಸಂಸ್ಥೆಗಳ ಜತೆಗೆ ಒಪ್ಪಂದ ಮಾಡಿಕೊಳ್ಳಬೇಕು ಎಂಬ ಆಯ್ಕೆಯ ಸ್ವಾತಂತ್ರ್ಯ ಫೇಸ್‌ಬುಕ್‌ಗೆ ಇದೆ. ಇದನ್ನು ವಿವೇಚನೆಯಿಂದ ಬಳಸಲಾಗುತ್ತದೆ. ದೊಡ್ಡ ಮಾಧ್ಯಮಸಂಸ್ಥೆಗಳು ಮಾತ್ರವಲ್ಲದೆ, ಸಣ್ಣ ಮಾಧ್ಯಮಸಂಸ್ಥೆಗಳ ಜತೆಯೂ ಒಪ್ಪಂದ ಮಾಡಿಕೊಳ್ಳುವುದನ್ನು ನಾವು ಪರಿಗಣಿಸುತ್ತೇವೆ' ಎಂದು ಫೇಸ್‌ಬುಕ್ ಹೇಳಿದೆ.

ಕಾನೂನಿಗೆ ಸಂಸತ್ತಿನ ಅನುಮೋದನೆ ದೊರೆತಿರುವುದನ್ನು ಮಾಧ್ಯಮಸಂಸ್ಥೆಗಳು ಸ್ವಾಗತಿಸಿವೆ. ಆದರೆ, ಈ ವ್ಯವಸ್ಥೆಯಿಂದ ದೊಡ್ಡ ಮಾಧ್ಯಮಸಂಸ್ಥೆಗಳಿಗೆ ಮಾತ್ರವೇ ಅನುಕೂಲವಾಗಲಿದೆ. ಸಣ್ಣ ಮಾಧ್ಯಮಸಂಸ್ಥೆಗಳು ಈ ವ್ಯವಸ್ಥೆಯಿಂದ ಹೊರಗೆ ಉಳಿಯುವ ಅಪಾಯ ಇದೆ ಎಂಬ ಕಳವಳ ವ್ಯಕ್ತವಾಗಿದೆ.

ಆಸ್ಟ್ರೇಲಿಯಾದಲ್ಲಿ ಬಳಕೆಯಾಗುವ ಸುದ್ದಿಗಳಿಗೆ ಪಾವತಿ ಮಾಡಲು ಗೂಗಲ್ ಈಗಾಗಲೇ ಒಪ್ಪಿಕೊಂಡಿದೆ. ಆಸ್ಟ್ರೇಲಿಯಾದ ಪ್ರಮುಖ 50 ಸುದ್ದಿಸಂಸ್ಥೆಗಳ ಜತೆಗೆ ಈಗಾಗಲೇ ಈ ಸಂಬಂಧ ಒಪ್ಪಂದ ಮಾಡಿಕೊಂಡಿದೆ. ವಿಶ್ವದಾದ್ಯಂತ 500 ಮಾಧ್ಯಮ ಸಂಸ್ಥೆಗಳ ಜತೆಗೆ ಒಪ್ಪಂದ ಮಾಡಿಕೊಂಡಿದೆ.

₹ 7,200 ಕೋಟಿ ಮೀಸಲು: ಸುದ್ದಿ ಮಾಧ್ಯಮಗಳಿಗೆ ಪಾವತಿ ಮಾಡಲು ಮುಂದಿನ ಮೂರು ವರ್ಷದಲ್ಲಿ 100 ಕೋಟಿ ಅಮೆರಿಕನ್ ಡಾಲರ್ (ಅಂದಾಜು ₹ 7,268 ಕೋಟಿ) ವೆಚ್ಚ ಮಾಡುತ್ತೇವೆ ಎಂದು ಫೇಸ್‌ಬುಕ್ ಹೇಳಿದೆ.

ಗೂಗಲ್‌ಗೆ ಐಎನ್‌ಎಸ್ ಪತ್ರ

ನವದೆಹಲಿ (ಪಿಟಿಐ): ಗೂಗಲ್ ಪ್ಲಾಟ್‌ಫಾರಂಗಳಲ್ಲಿ ದಿನಪತ್ರಿಕೆಗಳ ಸುದ್ದಿಗಳಿಗೆ ಬರುವ ಜಾಹೀರಾತು ವರಮಾನದಲ್ಲಿ, ದಿನಪತ್ರಿಕೆಗಳ ಪಾಲನ್ನು ಶೇ 85ಕ್ಕೆ ಏರಿಸಬೇಕು. ಜಾಹೀರಾತು ವರಮಾನದಲ್ಲಿ ಗೂಗಲ್ ಮತ್ತಷ್ಟು ಪಾರದರ್ಶಕತೆ ಪ್ರದರ್ಶಿಸಬೇಕು ಎಂದು ಇಂಡಿಯನ್ ನ್ಯೂಸ್‌ಪೇಪರ್ಸ್ ಸೊಸೈಟಿ (ಐಎನ್‌ಎಸ್), ಗುರುವಾರ ಗೂಗಲ್ ಇಂಡಿಯಾಗೆ ಪತ್ರ ಬರೆದಿದೆ.

ಗೂಗಲ್ ಪ್ಲಾಟ್‌ಫಾರಂನಲ್ಲಿ ಬಳಕೆಯಾಗುವ ಸುದ್ದಿಗಳಿಗೆ ಶುಲ್ಕ ಪಾವತಿ ಮಾಡುವ ಒಪ್ಪಂದಗಳಿಗೆ ಫ್ರಾನ್ಸ್, ಬ್ರಿಟನ್, ಐರೋಪ್ಯ ಒಕ್ಕೂಟದ ರಾಷ್ಟ್ರಗಳು ಮತ್ತು ಆಸ್ಟ್ರೇಲಿಯಾದಲ್ಲಿ ಗೂಗಲ್ ಸಹಿ ಹಾಕಿದೆ. ಭಾರತೀಯ ಸುದ್ದಿಪತ್ರಿಕೆಗಳ ಸುದ್ದಿಗಳೂ ಗೂಗಲ್‌ನಲ್ಲಿ ಬಳಕೆಯಾಗುತ್ತಿವೆ. ಇದಕ್ಕೆ ನೀಡುತ್ತಿರುವ ಜಾಹೀರಾತು ವರಮಾನದ ಪಾಲು ಅತ್ಯಂತ ಕಡಿಮೆ ಇದೆ. ಅಲ್ಲದೆ, ಜಾಹೀರಾತು ವರಮಾನ ಹಂಚಿಕೆಯು ಪಾರದರ್ಶಕವಾಗಿಲ್ಲ ಎಂದು ಐಎನ್‌ಎಸ್ ತನ್ನ ಪತ್ರದಲ್ಲಿ ವಿವರಿಸಿದೆ.

ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಸುಳ್ಳುಸುದ್ದಿಗಳು ಪ್ರಸಾರವಾಗುತ್ತಿವೆ. ಆದರೆ ದಿನಪತ್ರಿಕೆಗಳು ನೈಜಸುದ್ದಿಗಳನ್ನು ಪ್ರಕಟಿಸುತ್ತಿವೆ. ಈ ಸುದ್ದಿಗಳ ವರದಿಗಾರಿಕೆ, ಸಂಗ್ರಹ, ಪರಿಶೀಲನೆಗೆ ಭಾರಿ ವೆಚ್ಚವಾಗುತ್ತದೆ. ಅಲ್ಲದೆ, ಸಾವಿರಾರು ಪತ್ರಕರ್ತರು ಇದಕ್ಕಾಗಿ ದುಡಿಯುತ್ತಿದ್ದಾರೆ. ಹೀಗೆ ಸಿದ್ಧವಾದ ಸುದ್ದಿಗಳನ್ನು ಗೂಗಲ್ ಪ್ಲಾಟ್‌ಫಾರಂಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಆದರೆ, ಗೂಗಲ್ ಜತೆಗೆ ಜಾಹೀರಾತು ವರಮಾನ ಹಂಚಿಕೆಯಲ್ಲಿ ಸುದ್ದಿಪತ್ರಿಕೆಗಳ ಪಾಲು ಕುಗ್ಗುತ್ತಿದೆ. ಗೂಗಲ್‌ಗೆ ಸಿಂಹಪಾಲು ದೊರೆಯುತ್ತಿದೆ. ಹೀಗಾಗಿ ಜಾಹೀರಾತು ಆದಾಯದಲ್ಲಿ ಸುದ್ದಿಪತ್ರಿಕೆಗಳ ಪಾಲನ್ನು ಏರಿಕೆ ಮಾಡಬೇಕು ಎಂದು ಐಎನ್‌ಎಸ್ ಆಗ್ರಹಿಸಿದೆ.

'ಕೋವಿಡ್ ಎರಡನೇ ಅಲೆ ಸಾಮಾನ್ಯ'

ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ವಿ. ರವಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೇ ಅಲೆ ಕಾಣಿಸಿಕೊಳ್ಳುವುದು ಸಾಮಾನ್ಯ. ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ, ಲಸಿಕೆಯಿಂದಾಗಿ ಇಲ್ಲಿ ಎರಡನೇ ಅಲೆ ಕಾಣಿಸಿಕೊಂಡರೂ ಅದರ ತೀವ್ರತೆ ಕಡಿಮೆ ಇರಲಿದೆ' ಎಂದು ವೈರಾಣು ತಜ್ಞ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಡಾ.ವಿ. ರವಿ ತಿಳಿಸಿದರು.

ನ್ಯೂಬರ್ಗ್ ಡಯಾಗ್ನಾಸ್ಟಿಕ್ ಆನ್‌ಲೈನ್ ವೇದಿಕೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಕೊರೊನಾ ವೈರಾಣು–ರೂಪಾಂತರ ಮತ್ತು ಲಸಿಕೆ' ಎಂಬ ವಿಷಯದ ಕುರಿತ ಚರ್ಚೆಯಲ್ಲಿ ಅವರು ಮಾತನಾಡಿದರು. 'ಯಾವುದೇ ಹೊಸ ವೈರಾಣು ಈಗಲ್ಲದಿದ್ದರೂ ಮುಂದಿನ ದಿನಗಳಲ್ಲಿ ಪ್ರತಿಯೊಬ್ಬರ ದೇಹದ ಮೇಲೂ ದಾಳಿ ನಡೆಸಲಿದೆ. ಕೊರೊನಾ ವೈರಾಣು ಕೂಡ ಅದೇ ಮಾದರಿಯದು' ಎಂದು ಹೇಳಿದರು.

'ವೈರಾಣು ಕಾಯಿಲೆ ನಿಯಂತ್ರಣಕ್ಕೆ ಬರಬೇಕಾದರೆ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ನಡೆಸುವುದರ ಜತೆಗೆ ಸಂಪರ್ಕಿತರನ್ನು ಪತ್ತೆ ಮಾಡಬೇಕಾಗುತ್ತದೆ. ಜನರಲ್ಲಿ ಕೂಡ ಜಾಗೃತಿ ಮೂಡುತ್ತಿದ್ದು, ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಲಾರಂಭಿಸಿದ್ದಾರೆ. ಲಸಿಕೆ ವಿತರಣೆ ಅಭಿಯಾನ ಕೂಡ ವೇಗವಾಗಿ ನಡೆಯುತ್ತಿರುವುದು ಎರಡನೇ ಅಲೆಗೆ ತಕ್ಕಮಟ್ಟಿನ ತಡೆಯೊಡ್ಡಿದೆ' ಎಂದರು.

ಅಪೋಲೊ ಆಸ್ಪತ್ರೆಯ ಸೋಂಕು ರೋಗಗಳ ತಜ್ಞ ಡಾ.ವಿ. ರಾಮಸುಬ್ರಹ್ಮಣ್ಯನ್, 'ಲಸಿಕೆ ಪಡೆದ ಬಳಿಕವೂ ಮುಖಗವಸು ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ವಿವಿಧ ಮಾರ್ಗಸೂಚಿಗಳನ್ನು ಪಾಲಿಸಬೇಕಿದೆ. ಲಸಿಕೆ ಬಗ್ಗೆ ಹರಡಿದ ವದಂತಿಗಳಿಗೆ ಕಿವಿಗೊಡಬಾರದು. ಯಾವುದೇ ಲಸಿಕೆ ಪಡೆದರೂ ಸಣ್ಣ ಪ್ರಮಾಣದಲ್ಲಿ ಅಡ್ಡ ಪರಿಣಾಮಗಳು ಗೋಚರಿಸುತ್ತವೆ. ಹಾಗಂತ ಹೆದರಬೇಕಿಲ್ಲ' ಎಂದು ಹೇಳಿದರು.

ನ್ಯೂಬರ್ಗ್ ಡಯಾಗ್ನಾಸ್ಟಿಕ್‌ನ ಸೂಕ್ಷ್ಮ ಜೀವಶಾಸ್ತ್ರಜ್ಞೆ ಡಾ. ಶರಣ್ಯ ನಾರಾಯಣ ಮಾತನಾಡಿ, 'ಮಹಾರಾಷ್ಟ್ರ, ಕೇರಳ ಸೇರಿದಂತೆ ಕೆಲ ರಾಜ್ಯಗಳಲ್ಲಿ ಮತ್ತೆ ಪ್ರಕರಣಗಳ ಸಂಖ್ಯೆ ಏರಿಕೆ ಕಾಣುತ್ತಿದೆ. ಹಾಗಾಗಿ, ಈ ಸಂದರ್ಭದಲ್ಲಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿದೆ. ಸೋಂಕು ಲಕ್ಷಣ ಕಾಣಿಸಿಕೊಂಡವರು ಪರೀಕ್ಷೆ ಮಾಡಿಸಿಕೊಳ್ಳದಿರುವುದು ಹಾಗೂ ಬೇಕಾಬಿಟ್ಟಿ ಎಲ್ಲೆಂದರಲ್ಲಿ ಓಡಾಡುತ್ತಿರುವುದರಿಂದಾಗಿ ಕೋವಿಡ್ ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ಹರಡಲು ಪ್ರಾರಂಭಿಸಿದೆ' ಎಂದರು.

ಮಹಾರಾಷ್ಟ್ರದಲ್ಲಿ ಒಂದೇ ಹಾಸ್ಟೆಲ್‌ನ 229 ವಿದ್ಯಾರ್ಥಿಗಳಿಗೆ ಕೋವಿಡ್(ಮುಂಬೈ ವರದಿ): 'ಮಹಾರಾಷ್ಟ್ರದ ವಾಶಿಮ್ ಜಿಲ್ಲೆಯ ಸರ್ಕಾರಿ ಶಾಲೆಯ ಹಾಸ್ಟೆಲ್‌ವೊಂದರಲ್ಲಿ 229 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ' ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

'ಲಾಕ್‌ಡೌನ್ ಕೊನೆಯ ಅಸ್ತ್ರ'

'ವಿದೇಶಗಳಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡಿದೆ. ನಮ್ಮ ದೇಶದಲ್ಲಿ ಕೂಡ ಕೆಲವೆಡೆ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದೆ. ಈ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಮತ್ತು ಸಂಪರ್ಕ ಪತ್ತೆ ನಡೆಸಬೇಕಿದೆ. ಇಲ್ಲಿ ಎರಡನೇ ಅಲೆ ಕಾಣಿಸಿಕೊಂಡರೂ ಈ ಮೊದಲಿನಷ್ಟು ತೀವ್ರತೆ ಹೊಂದಿರುವುದಿಲ್ಲ. ಯಾವುದೇ ಸಾಂಕ್ರಾಮಿಕ ಕಾಯಿಲೆಯು ತುರ್ತು ಪರಿಸ್ಥಿತಿ ನಿರ್ಮಿಸಿದ ಸಂದರ್ಭದಲ್ಲಿ ಲಾಕ್‌ಡೌನ್ ಕೊನೆಯ ಅಸ್ತ್ರವಾಗಿರುತ್ತದೆ. ಸದ್ಯ ಅದರ ಅಗತ್ಯವಿಲ್ಲ' ಎಂದು ಡಾ.ವಿ. ರವಿ ತಿಳಿಸಿದರು.

ಗಡಿಯಲ್ಲಿ ಜನತಾ ಕರ್ಫ್ಯೂ

ಬೀದರ್: ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಲಾತೂರ ಜಿಲ್ಲೆಯಲ್ಲಿ ಶನಿವಾರ ಹಾಗೂ ಭಾನುವಾರ ಜನತಾ ಕರ್ಫ್ಯೂ ಜಾರಿಗೊಳಿಸಲಾಗಿದೆ. ಹೀಗಾಗಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಜನತಾ ಕರ್ಫ್ಯೂ ವೇಳೆ ಅಗತ್ಯ ವಸ್ತುಗಳ ಪೂರೈಕೆಗೆ ಯಾವುದೇ ನಿರ್ಬಂಧ ಇರುವುದಿಲ್ಲ. ಆದರೆ, ಸಾರಿಗೆ ಸಂಚಾರ, ವಾಣಿಜ್ಯ ಮಳಿಗೆಗಳು ಹಾಗೂ ಮಾರುಕಟ್ಟೆ ಪ್ರದೇಶ ಸಂಪೂರ್ಣವಾಗಿ ಬಂದ್ ಇರಲಿದೆ ಎಂದು ಲಾತೂರ ಜಿಲ್ಲಾಧಿಕಾರಿ ಪೃಥ್ವಿರಾಜ್ ಬಿ.ಪಿ. ತಿಳಿಸಿದ್ದಾರೆ.

ಬಸವಕಲ್ಯಾಣ ತಾಲ್ಲೂಕಿನ ಚಂಡಕಾಪುರದ ಚೆಕ್‌ಪೋಸ್ಟ್‌ನಲ್ಲಿ ರ‍್ಯಾಪಿಡ್ ಆ್ಯಂಟಿಜೆನ್ ಟೆಸ್ಟ್ ಶುರು ಮಾಡಲಾಗಿದೆ. ಥರ್ಮಲ್ ಸ್ಕ್ರೀನಿಂಗ್ ಮಾಡಿದ ಸಂದರ್ಭದಲ್ಲಿ ಜ್ವರ ಇರುವುದು ಖಚಿತವಾದರೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಗುರುವಾರ ಮಹಾರಾಷ್ಟ್ರದಿಂದ ಬಂದ ಒಬ್ಬ ಪ್ರಯಾಣಿಕನಿಗೆ ಕೋವಿಡ್ ದೃಢಪಟ್ಟಿದ್ದು, ಅವರನ್ನು ಮಹಾರಾಷ್ಟ್ರದ ಉಮರ್ಗಾ ಆಸ್ಪತ್ರೆಗೆ ಕಳಿಸಿ ಕೊಡಲಾಗಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.


ನಿರ್ಧಾರ ಕೈಗೊಳ್ಳಲು ಬ್ರಿಟನ್ ಗೃಹ ಸಚಿವರಿಗೆ ಎರಡು ತಿಂಗಳ ಕಾಲಾವಕಾಶ

ನೀರವ್ ಮೋದಿ ಹಸ್ತಾಂತರಿಸಲು ಲಂಡನ್ ಕೋರ್ಟ್ ಸಮ್ಮತಿ

ಲಂಡನ್(ಎಎಫ್‌ಪಿ, ರಾಯಿಟರ್ಸ್, ಪಿಟಿಐ: ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ (ಪಿಎನ್‌ಬಿ) ₹ 13,500 ಕೋಟಿ ವಂಚಿಸಿರುವ ಆರೋಪ ಎದುರಿಸುತ್ತಿರುವ ವಜ್ರದ ವ್ಯಾಪಾರಿ ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಲಂಡನ್‌ನ ನ್ಯಾಯಾಲಯ ಒಪ್ಪಿಗೆ ಸೂಚಿಸಿದೆ.

ಭಾರತದಲ್ಲಿ ನೀರವ್ ಮೋದಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ಸಾಕಷ್ಟು ಸಾಕ್ಷ್ಯಾಧಾರಗಳಿವೆ ಎಂದು ಲಂಡನ್‌ನ ವೆಸ್ಟ್‌ಮಿನ್‌ಸ್ಟರ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ಜಿಲ್ಲಾ ನ್ಯಾಯಾಧೀಶ ಸ್ಯಾಮ್ ಗೂಜ್ ಆದೇಶದಲ್ಲಿ ತಿಳಿಸಿದ್ದಾರೆ.

2018ರಲ್ಲಿ ನೀರವ್ ಮೋದಿ ಭಾರತದಿಂದ ಪರಾರಿಯಾಗಿದ್ದರು. ಜಗತ್ತಿನಾದ್ಯಂತ ಐಷಾರಾಮಿ ಆಭರಣ ಷೋರೂಮ್‌ಗಳನ್ನು ಹೊಂದಿದ್ದ 49 ವರ್ಷದ ನೀರವ್ ಮೋದಿ, ಹಾಲಿವುಡ್ ಮತ್ತು ಬಾಲಿವುಡ್ ತಾರೆಯರು ಪ್ರಮುಖ ಗ್ರಾಹಕರಾಗಿದ್ದರು. 2019ರ ಮಾರ್ಚ್ 19ರಂದು ಲಂಡನ್‌ನಲ್ಲಿ ಮೋದಿ ಅವರನ್ನು ಬಂಧಿಸಲಾಗಿತ್ತು. ವಂಡ್ಸ್‌ವರ್ತ್ ಕಾರಾಗೃಹದಲ್ಲಿರುವ ನೀರವ್ ಮೋದಿ ಅವರನ್ನು ವಿಡಿಯೊ ಲಿಂಕ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.



ನೀರವ್ ಮೋದಿ

ಮುಖ್ಯಾಂಶಗಳು

- ವಂಡ್ಸ್‌ವರ್ತ್ ಕಾರಾಗೃಹದಲ್ಲಿರುವ ನೀರವ್ ಮೋದಿ
- ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು 14 ದಿನಗಳ ಕಾಲಾವಕಾಶ

'ಭಾರತವು ಸಾಕಷ್ಟು ಸಾಕ್ಷ್ಯಾಧಾರಗಳನ್ನು ಒದಗಿಸಿದೆ. ವಂಚನೆ ಪ್ರಕರಣದ ಬಗ್ಗೆ ನೀರವ್ ಮೋದಿ ಉತ್ತರಿಸಬೇಕಾಗಿದೆ. ಸಾಕ್ಷ್ಯಗಳ ಬಗ್ಗೆ ನನಗೆ ತೃಪ್ತಿ ಇದೆ. ಇದರಿಂದ ವಂಚನೆ ಪ್ರಕರಣದಲ್ಲಿ ತಪ್ಪಿತಸ್ಥರಾಗುವ ಸಾಧ್ಯತೆಗಳಿವೆ. ಮೇಲ್ನೋಟಕ್ಕೆ ವಂಚನೆ ನಡೆದಿರುವುದು ಕಂಡು ಬಂದಿದೆ' ಎಂದು ನ್ಯಾಯಾಧೀಶರು ಹೇಳಿದರು.

ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇಡಿ) ಒದಗಿಸಿದ ಸಾಕ್ಷ್ಯಗಳನ್ನು ನ್ಯಾಯಾಧೀಶರು ಪರಿಗಣಿಸಿದರು.

ಮಾನಸಿಕ ಆರೋಗ್ಯದ ದೃಷ್ಟಿಯಿಂದ ಹಸ್ತಾಂತರ ಬೇಡ ಎನ್ನುವ ಮೋದಿ ಪರ ವಕೀಲರ ವಾದವನ್ನು ನ್ಯಾಯಾಧೀಶರು ತಿರಸ್ಕರಿಸಿದರು.

ಭಾರತದಲ್ಲಿನ ಕಾರಾಗೃಹದ ಪರಿಸ್ಥಿತಿಯ ಬಗ್ಗೆ ಒದಗಿಸಲಾದ ಸಾಕ್ಷ್ಯಗಳನ್ನು ಸಹ ನ್ಯಾಯಾಧೀಶರು ಪರಿಗಣಿಸಿದರು. ಮೋದಿ ಅವರನ್ನು ಮುಂಬೈನ ಅರ್ಥರ್ ರೋಡ್ ಜೈಲಿನಲ್ಲಿರಿಸಲಾಗುವುದು ಮತ್ತು ಅಲ್ಲಿನ ಪರಿಸ್ಥಿತಿಯ ಬಗ್ಗೆ ನಿಖರವಾದ ವಿವರಗಳನ್ನು ವಿಡಿಯೊ ಸಮೇತ ನೀಡಲಾಗುವುದು ಎಂದು ಭಾರತ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು.

ಬ್ರಿಟನ್ ಕಾನೂನಿನ ಅನ್ವಯ ಹಸ್ತಾಂತರ ಆದೇಶಕ್ಕೆ ಸಂಬಂಧಿಸಿದಂತೆ ಮುಂದಿನ ಕ್ರಮ ಕೈಗೊಳ್ಳುವಂತೆ ಗೃಹ ಸಚಿವರಾದ ಪ್ರೀತಿ ಪಟೇಲ್ ಅವರಿಗೆ ಕೋರಲಾಗುವುದು ಎಂದು ತಿಳಿಸಿದರು.

ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಗೃಹ ಸಚಿವರಿಗೆ ಎರಡು ತಿಂಗಳು ಕಾಲಾವಕಾಶವಿದೆ. ನ್ಯಾಯಾಲಯಗಳ ಆದೇಶದ ವಿರುದ್ಧ ಗೃಹ ಸಚಿವರು ನಿರ್ಧಾರ ಕೈಗೊಳ್ಳುವುದು ಅಪರೂಪ ಎಂದು ವಿಶ್ಲೇಷಿಸಲಾಗಿದೆ. ನ್ಯಾಯಾಲಯ ನೀಡಿರುವ ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಮೋದಿ ಅವರಿಗೆ 14 ದಿನಗಳ ಕಾಲಾವಕಾಶವಿದೆ.

ಶುಕ್ರವಾರ, ಫೆಬ್ರುವರಿ 26, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದ್ರಾಕ್ಷಿ ಮೇಳ
ಬೆಂಗಳೂರಿನಲ್ಲಿ ಗುರುವಾರ ನಡೆದ ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ಮೇಳದಲ್ಲಿ ಮಹಿಳೆಯೊಬ್ಬರು ದ್ರಾಕ್ಷಿ ಗೊಂಚಲನ್ನು ವೀಕ್ಷಿಸಿದರು



ಸರೋಜಿನಿ ಮಹಿಷಿ ವರದಿ ಜಾರಿಗೆ ಹಿಂದೇಟು– ಸಿ ಗುಂಪಿನ 85 ಹುದ್ದೆ ಅನ್ಯರಾಜ್ಯದವರ ಪಾಲು?

ಐಐಎಸ್ಸಿ ಹುದ್ದೆ: ಕನ್ನಡಿಗರಿಗೆ ಮತ್ತೆ ಅನ್ಯಾಯ!

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್ಸಿ) ಸಿ ಗುಂಪಿನ 85 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಿದ್ದು, ಈ ಹುದ್ದೆಗಳು ಕನ್ನಡಿಗರ ಪಾಲಿಗೆ ಕನ್ನಡಿಯೊಳಗಿನ ಗಂಟಾಗಿವೆ. ಸರೋಜಿನಿ ಮಹಿಷಿ ವರದಿ ಪ್ರಕಾರ ಕೇಂದ್ರ ಸರ್ಕಾರದ ಅಧೀನದ ಸಂಸ್ಥೆಗಳಲ್ಲೂ ಸಿ ಮತ್ತು ಡಿ ಗುಂಪಿನ ಹುದ್ದೆಗಳನ್ನು ಕಡ್ಡಾಯವಾಗಿ ಕನ್ನಡಿಗರಿಗೆ ಮೀಸಲಿಡಬೇಕು. ಆದರೆ, ಈ ಅಂಶ ಕಡೆಗಣಿಸಿ ನೇಮಕಾತಿ ಮಾಡಿಕೊಳ್ಳಲು ಐಐಎಸ್ಸಿ ಸಿದ್ಧತೆ ನಡೆಸಿದೆ.

ಐಐಎಸ್ಸಿಯು ಆಡಳಿತ ಸಹಾಯಕರ 85 ಹುದ್ದೆಗಳ ಭರ್ತಿಗೆ 2020ರ ಅ.1ರಂದು ಅಧಿಸೂಚನೆ ಹೊರಡಿಸಿತ್ತು. 'ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು 15 ವರ್ಷಗಳಿಂದ ಕರ್ನಾಟಕದಲ್ಲೇ ನೆಲೆಸಿರಬೇಕು, ಲಿಖಿತ ಪರೀಕ್ಷೆಗಳಲ್ಲಿ ಕನಿಷ್ಠ ಒಂದು ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕೆಂಬ ಷರತ್ತನ್ನು ವಿಧಿಸಬೇಕು. ಇದು ಈ ನೆಲಕ್ಕೆ, ಈ ಸಂಸ್ಥೆಗೆ ಉದಾರವಾಗಿ ಜಾಗ ನೀಡಿದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರಿಗೂ ಸಲ್ಲಿಸುವ ಗೌರವ' ಎಂದು ಸಂಸ್ಥೆಯ ಕನ್ನಡ ಅಭಿವೃದ್ಧಿ ಕೋಶದವರು ರಿಜಿಸ್ಟ್ರಾರ್‌ಗೆ ಪತ್ರ ಬರೆದಿದ್ದರು.

ಸಿ ಗುಂಪಿನ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡದ ಬಗ್ಗೆ ದೂರು ಕೇಳಿ ಬಂದಿದ್ದರಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ಪ್ರಾಧಿಕಾರದ ಸದಸ್ಯರೊಂದಿಗೆ ಐಐಎಸ್ಸಿಗೆ ಭೇಟಿ ನೀಡಿ ಕನ್ನಡ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಿದ್ದರು. ಸಿ ಮತ್ತು ಡಿ ಗುಂಪಿನ ಹುದ್ದೆಗಳನ್ನು ಕಡ್ಡಾಯವಾಗಿ ಕನ್ನಡಿಗರಿಗೇ ಮೀಸಲಿಡಬೇಕು ಎಂದೂ ತಾಕೀತು ಮಾಡಿದ್ದರು. ಅಲ್ಲದೇ 2021ರ ಜ.8ರಂದು ಸಂಸ್ಥೆಯ ನಿರ್ದೇಶಕರಿಗೆ ನೆನಪೋಲೆ ಬರೆದು 'ಈ ನೆಲದ ಕಾನೂನು ಪಾಲಿಸುವ ಹೊಣೆ ಕೇಂದ್ರ ಸರ್ಕಾರದ ಸಂಸ್ಥೆಗಳಿಗೂ ಇದೆ' ಎಂದು ಸ್ಪಷ್ಟಪಡಿಸಿದ್ದರು.

'ಸಿ ಗುಂಪಿನ 85 ಹುದ್ದೆಗಳಿಗೆ ಎಷ್ಟು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಪ್ರವೇಶ ಪರೀಕ್ಷೆಯಲ್ಲಿ ಎಷ್ಟು ಮಂದಿ ಹಾಜರಾಗಿದ್ದರು. ಅವರು ಯಾವ ರಾಜ್ಯದವರು, ಎಷ್ಟು ಮಂದಿ ತೇರ್ಗಡೆಯಾಗಿದ್ದಾರೆ ಎಂಬ ವಿವರ ನೀಡಬೇಕು. ಹುದ್ದೆಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಪ್ರತಿಯನ್ನೂ ಪ್ರಾಧಿಕಾರಕ್ಕೆ ನೀಡಬೇಕು. ಈ ದಾಖಲೆ ಒದಗಿಸುವವರೆಗೆ ನೇಮಕಾತಿ ಪ್ರಕ್ರಿಯೆ ತಡೆ ಹಿಡಿಯಬೇಕು' ಎಂದೂ ನಾಗಾಭರಣ ಸೂಚಿಸಿದ್ದರು.

ಐಐಎಸ್ಸಿ ಆಡಳಿತ ಮಂಡಳಿಯ ಸದಸ್ಯರಾಗಿರುವ ಸಂಸದ ಪಿ.ಸಿ. ಮೋಹನ್ ಹಾಗೂ ತೇಜಸ್ವಿ ಸೂರ್ಯ ಅವರೂ ಐಐಎಸ್ಸಿ ನಿರ್ದೇಶಕರಿಗೆ ಪತ್ರ ಬರೆದು ಸಿ ಗುಂಪಿನ ಹುದ್ದೆ ಭರ್ತಿ ಮಾಡುವಾಗ ಕನ್ನಡಿಗರನ್ನು ಕಡೆಗಣಿಸದಂತೆ ಸೂಚನೆ ನೀಡಿದ್ದರು.

ಸಂಸ್ಥೆಯ ಕನ್ನಡ ಸಂಘವೂ ಈ ವಿಚಾರವಾಗಿ ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಅವರಿಗೆ ಪತ್ರ ಬರೆದು ಕನ್ನಡಿಗರನ್ನು ಕಡೆಗಣಿಸಿರುವುದರಿಂದ ಈ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಕೋರಿತ್ತು.

'ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸೂಚನೆ, ಸಂಸದರ ಪತ್ರಗಳಿಗೆ ಸೊಪ್ಪು ಹಾಕದೆ ಐಐಎಸ್ಸಿ 85 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಅಂತಿಮಗೊಳಿಸುತ್ತಿದೆ. ಇದರಿಂದ ಕನ್ನಡಿಗರಿಗೆ ಅನ್ಯಾಯವಾಗಲಿದೆ' ಎಂದು ಸಂಸ್ಥೆಯ ಕನ್ನಡ ಸಂಘದ ಸತೀಶ್ ಜಿ.ವಿ. ಬೇಸರ ವ್ಯಕ್ತಪಡಿಸಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಂಸ್ಥೆಯ ರಿಜಿಸ್ಟ್ರಾರ್ ಕೆ.ವಿ. ಎಸ್.ಹರಿ, 'ನಮ್ಮದು ಕೇಂದ್ರ ಸರ್ಕಾರದ ಅನುದಾನದಿಂದ ನಡೆಯುವ ಸಂಸ್ಥೆ. ಹಾಗಾಗಿ ಕೇಂದ್ರದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇದಕ್ಕಿಂತ ಹೆಚ್ಚೇನೂ ಹೇಳಲು ಸಾಧ್ಯವಿಲ್ಲ' ಎಂದರು.

> ಐಐಎಸ್ಸಿ ಆಡಳಿತ ಸಹಾಯಕ ಹುದ್ದೆಗಳೆಲ್ಲವೂ ಕನ್ನಡಿಗರಿಗೇ ಸಿಗಬೇಕು. ಈ ಬಗ್ಗೆ ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಜೊತೆ ಮಾತನಾಡುತ್ತೇನೆ.
>
> **ಪಿ.ಸಿ.ಮೋಹನ್,** ಸಂಸದ, ಐಐಎಸ್ಸಿ ಆಡಳಿತ ಮಂಡಳಿ ಸದಸ್ಯ

> ಸಿ ಗುಂಪಿನ ಹುದ್ದೆಗಳನ್ನು ಕನ್ನಡಿಗರಿಗೆ ನೀಡದಿದ್ದರೆ ಕಾನೂನು ರೀತಿ ಕ್ರಮ ಕೈಗೊಳ್ಳುತ್ತೇವೆ. ಈ ನೆಲದ ನಿಯಮಗಳಿಗೆ ಬೆಲೆ ನೀಡದ್ದನ್ನು ಖಂಡಿಸುತ್ತೇವೆ
>
> **ಟಿ.ಎಸ್.ನಾಗಾಭರಣ**
> ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಪ್ರಜಾವಾಣಿ ವಿಶೇಷ

'ನೇಮಕಾತಿ ಪ್ರಕ್ರಿಯೆ ಹೊರಗುತ್ತಿಗೆ ಏಕೆ'

'ದೇಶದ ವಿವಿಧ ಸಂಸ್ಥೆಗಳು ನೇಮಕಾತಿ ಸಂದರ್ಶನ ನಡೆಸಲು ಐಐಎಸ್ಸಿಯ ಪ್ರಾಧ್ಯಾಪಕರನ್ನು ಕರೆಸಿಕೊಳ್ಳುತ್ತಾರೆ. ಹಾಗಿರುವಾಗ ಸಿ ಗುಂಪಿನ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಹೊರಗುತ್ತಿಗೆ ನೀಡಿದ್ದೇಕೆ. ಆಡಳಿತ ಸಹಾಯಕರ ನೇಮಕಾತಿ ನಡೆಸುವ ಯೋಗ್ಯತೆ ಈ ಸಂಸ್ಥೆಗಿಲ್ಲವೇ. ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ಹೊರಗಿನವರಿಂದ ಮಾಡಿಸಬೇಕೇ' ಎಂದು ಸಂಸ್ಥೆಯ ಸಿಬ್ಬಂದಿಯೊಬ್ಬರು ಪ್ರಶ್ನಿಸಿದರು.

'ಸಿ ಗುಂಪಿನ ಹುದ್ದೆಗಳ ನೇಮಕಾತಿಯಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ನಡೆದಿದೆ. ಈಗಿನ ಡೆಪ್ಯುಟಿ ರಿಜಿಸ್ಟ್ರಾರ್ ಸಂಬಂಧಿಕರಿಗೇ ಹುದ್ದೆಗಳನ್ನು ಕರುಣಿಸಲಾಗುತ್ತಿದೆ' ಎಂದು ಅವರು ಆರೋಪ ಮಾಡಿದರು.

ಸುದ್ದಿ 2 ನಿಮಿಷ

ವೈಮಾನಿಕ ತರಬೇತಿ ಶಾಲೆ ಪುನರಾರಂಭಕ್ಕೆ ಸೂಚನೆ

ಬೆಂಗಳೂರು: ಜಕ್ಕೂರಿನಲ್ಲಿರುವ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ತ್ವರಿತವಾಗಿ ಪುನರಾರಂಭಿಸಲು ಕ್ರಮ ಕೈಗೊಳ್ಳುವಂತೆ ಕ್ರೀಡೆ ಮತ್ತು ಯುವ ಸಬಲೀಕರಣ ಸಚಿವ ಕೆ.ಸಿ. ನಾರಾಯಣ ಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುರುವಾರ ಜಕ್ಕೂರು ವೈಮಾನಿಕ ತರಬೇತಿ ಶಾಲೆಗೆ ಭೇಟಿನೀಡಿ ಸ್ಥಳ ಪರಿಶೀಲನೆ ನಡೆಸಿದ ಅವರು, 'ಮೂರು ವರ್ಷಗಳಿಂದ ಶಾಲೆ ಸ್ಥಗಿತಗೊಂಡಿದೆ. ಬೋಧಕ ಸಿಬ್ಬಂದಿ ನೇಮಕಾತಿ ಸೇರಿದಂತೆ ಎಲ್ಲ ಅಗತ್ಯ ಕ್ರಮಗಳನ್ನೂ ತ್ವರಿತವಾಗಿ ಕೈಗೊಳ್ಳಬೇಕು' ಎಂದರು

ವೈಮಾನಿಕ ಶಾಲೆಗೆ 214 ಎಕರೆ ಜಮೀನು ಲಭ್ಯವಿದೆ. 'ಟ್ವಿನ್ ಎಂಜಿನ್' ಚಾಲನೆ ತರಬೇತಿಗೆ ಅಗತ್ಯವಿರುವ ರನ್‌ವೇ ನಿರ್ಮಾಣಕ್ಕೆ 10 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೀಘ್ರವಾಗಿ ಅದನ್ನು ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳಿದ್ದರೂ ಶಾಲೆ ನಡೆಸಲಾಗದ ಸ್ಥಿತಿ ಇರುವುದು ಸರಿಯಲ್ಲ. ಆದಷ್ಟು ಬೇಗ ವಿಮಾನ ಹಾರಾಟ ತರಬೇತಿ ಆರಂಭಕ್ಕೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಬರಬೇಕಿರುವ ₹ 10 ಕೋಟಿ ಪರಿಹಾರದ ಮೊತ್ತವನ್ನು ತ್ವರಿತವಾಗಿ ಪಡೆದುಕೊಳ್ಳಬೇಕು. ಖಾಸಗಿ ವಿಮಾನಗಳ ಪಾರ್ಕಿಂಗ್ ಬಾಬ್ತು ಬಾಕಿ ಇರುವ ₹ 1.5 ಕೋಟಿಯಷ್ಟು ಶುಲ್ಕವನ್ನೂ ವಸೂಲಿ ಮಾಡಬೇಕು. ಮುಂದಿನ ದಿನಗಳಲ್ಲಿ ವಿಮಾನಗಳ ಪಾರ್ಕಿಂಗ್ ಶುಲ್ಕ ಆಯಾ ತಿಂಗಳಲ್ಲೇ ಪಾವತಿ ಮಾಡುವಂತಹ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.ನಂತರ ವಿದ್ಯಾನಗರದಲ್ಲಿರುವ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



'ಹೊರಗಿನವರಿಗೆ ಟಿಕೆಟ್ ಇಲ್ಲ'

ಬೆಂಗಳೂರು: ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಯಲ್ಲಿ ಕ್ಷೇತ್ರ ಬಿಟ್ಟು ಹೊರಗಿನವರಿಗೆ ಟಿಕೆಟ್ ನೀಡುವ ಸಾಧ್ಯತೆ ಇಲ್ಲ ಎಂದು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದರು.

'ಲಕ್ಷ್ಮಣ ಸವದಿ, ವಿಜಯೇಂದ್ರ ಹೀಗೆ ಹಲವು ಹೆಸರುಗಳು ಚಾಲ್ತಿಯಲ್ಲಿವೆ. ಹೊರಗಿನವರನ್ನು ಕಣಕ್ಕೆ ಇಳಿಸುವುದಿಲ್ಲ. ಈಗಾಗಲೇ 18 ಆಕಾಂಕ್ಷಿಗಳು ಮುಂದೆ ಬಂದಿದ್ದು, ಅವರಲ್ಲಿ ಕೆಲವು ಹೆಸರುಗಳನ್ನು ಆಯ್ಕೆ ಮಾಡಿ ವರಿಷ್ಠರಿಗೆ ಕಳಿಸಲಾಗುವುದು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಕಡಿಮೆ ಅಂತರದಿಂದ ನಮ್ಮ ಪಕ್ಷದ ಅಭ್ಯರ್ಥಿ ಸೋತಿದ್ದರು. ಕಳೆದ ಬಾರಿ ಆಗಿದ್ದ ಲೋಪ ಈ ಬಾರಿ ಮರುಕಳಿಸುವುದಿಲ್ಲ. ಬಿಜೆಪಿ ಅಭ್ಯರ್ಥಿ ಗೆಲ್ಲುವುದು ಖಚಿತ. ಹೀಗಾಗಿ ಟಿಕೆಟ್ ಸಿಗಲಿ ಬಿಡಲಿ, ಎಲ್ಲ 18 ಆಕಾಂಕ್ಷಿಗಳು ಒಮ್ಮನಸ್ಸಿನಿಂದ ಕೆಲಸ ಮಾಡಲಿದ್ದಾರೆ' ಎಂದು ಅವರು ವಿವರಿಸಿದರು.

ಚುನಾವಣಾ ದಿನಾಂಕ ಯಾವುದೇ ಕ್ಷಣದಲ್ಲಾದರೂ ಪ್ರಕಟ ಆಗಬಹುದು. ನಾವು ಎಲ್ಲ ರೀತಿಯ ಸಿದ್ಧತೆ ಮಾಡಿ ಕೊಂಡಿದ್ದೇವೆ. ಗೆಲುವಿಗಾಗಿ ವಿಶೇಷ ಕಾರ್ಯತಂತ್ರಗಳನ್ನೂ ರೂಪಿಸಿದ್ದೇವೆ. ಆ ಪ್ರಕಾರವೇ ಕಾರ್ಯ ನಿರ್ವಹಿಸಿ, ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಹೇಳಿದರು.

ಟಿಕೆಟ್ ಆಕಾಂಕ್ಷಿಗಳ ಜತೆ ನಗರದಲ್ಲಿ ಬುಧವಾರ ಈಗಾಗಲೇ ಒಮ್ಮೆ ಚರ್ಚೆ ನಡೆಸಲಾಗಿದೆ. ಸಭೆಯಲ್ಲಿ ಒಮ್ಮತದ ಹೋರಾಟದ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದೂ ಸವದಿ ಹೇಳಿದರು.

ಸರ್ಕಾರಿ ನೌಕರರ ಒಕ್ಕೂಟದಿಂದ ಪ್ರತಿಭಟನೆ ಇಂದು

ಬೆಂಗಳೂರು: ರಾಜ್ಯ ಸರ್ಕಾರ ನೌಕರ ವಿರೋಧಿ ಧೋರಣೆ ಪ್ರದರ್ಶಿಸುತ್ತಿದೆ ಎಂದು ಆರೋಪಿಸಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಶುಕ್ರವಾರ (ಫೆ. 26) ಪ್ರತಿಭಟನೆ ಹಮ್ಮಿಕೊಂಡಿದೆ.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಹೆಚ್ಚಳವಾಗಿದೆ. ಜನ, ಸರ್ಕಾರಿ ನೌಕರರು ಸಂಕಷ್ಟದಲ್ಲಿ ದಿನ ಕಳೆಯುವಂತಾಗಿದೆ. 2.50ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ರಾಜ್ಯದಲ್ಲಿ ಖಾಲಿ ಇವೆ, ದಿನಗೂಲಿ, ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡದೆ ಶೋಷಿಸಲಾಗುತ್ತಿದೆ ಎಂದು ಒಕ್ಕೂಟ ದೂರಿದೆ.

'ಸರ್ಕಾರ ಜನ–ನೌಕರ ವಿರೋಧಿ ನೀತಿ ಖಂಡಿಸಿ ಒಕ್ಕೂಟದ ಎಲ್ಲ ಜಿಲ್ಲಾ, ತಾಲ್ಲೂಕು ಘಟಕಗಳು ಶುಕ್ರವಾರ ಮಧ್ಯಾಹ್ನ ಊಟದ ಅವಧಿಯಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ. ಬಳಿಕ ಜಿಲ್ಲಾಧಿಕಾರಿ, ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು' ಎಂದು ಒಕ್ಕೂಟದ ಗೌರವಾಧ್ಯಕ್ಷ ಮಹದೇವಯ್ಯ ಮಠಪತಿ ಮತ್ತು ಅಧ್ಯಕ್ಷ ಎನ್.ಇ. ನಟರಾಜನ್ ತಿಳಿಸಿದ್ದಾರೆ.

ಸದ್ಯವೇ ಬಿಎಂಟಿಸಿ ಪ್ರಯಾಣ ದರ ಏರಿಕೆ

ಶೇ 18ರಿಂದ ಶೇ 20ರಷ್ಟು ಏರಿಕೆ ಮಾಡಲು ಪ್ರಸ್ತಾವನೆ • ಮುಖ್ಯಮಂತ್ರಿ ಒಪ್ಪಿದರಷ್ಟೇ ಹೆಚ್ಚಳ

ಪ್ರಜಾವಾಣಿ ವಾರ್ತೆ



ಲಕ್ಷ್ಮಣ ಸವದಿ



ಬೆಂಗಳೂರು: ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ನಷ್ಟ ತುಂಬಿಕೊಳ್ಳಲು ಬಸ್ ಪ್ರಯಾಣ ದರ ಏರಿಸುವ ಚಿಂತನೆ ನಡೆಸಿದೆ.

ಇದಕ್ಕೆ ಸಂಬಂಧಿಸಿದಂತೆ ಬಿಎಂಟಿಸಿ ಪ್ರಸ್ತಾವನೆ ಸಲ್ಲಿಸಿದ್ದು, ಮುಖ್ಯಮಂತ್ರಿಯವರೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಸಾರಿಗೆ ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಿಎಂಟಿಸಿ ಶೇ 18 ರಿಂದ ಶೇ 20 ರಷ್ಟು ಏರಿಕೆ ಮಾಡಬೇಕು ಎಂದು ಪ್ರಸ್ತಾವನೆ ಸಲ್ಲಿಸಿದೆ. ಅಷ್ಟು ಪ್ರಮಾಣದಲ್ಲಿ ಏರಿಕೆ ಮಾಡಿ ಪ್ರಯಾಣಿಕರ ಮೇಲೆ ಹೊರೆ ಹಾಕುವುದಿಲ್ಲ. ಅಲ್ಪ ಪ್ರಮಾಣದಲ್ಲಿ ಏರಿಕೆ ಮಾಡಲು ಉದ್ದೇಶಿಸಲಾಗಿದೆ. ಮುಖ್ಯಮಂತ್ರಿ ಒಪ್ಪಿಗೆ ನೀಡಿದರೆ ಅಧಿವೇಶನದ ಸಂದರ್ಭದಲ್ಲಿ ಏರಿಕೆ ಮಾಡಲಾಗುವುದು' ಎಂದರು.

ಇತರ ಮೂರು ನಿಗಮಗಳ ಪ್ರಯಾಣ ದರ ಏರಿಕೆ ಕಳೆದ ವರ್ಷವೇ ಮಾಡಿದ್ದರಿಂದ ಈ ವರ್ಷ ಪ್ರಸ್ತಾವನೆ ಸಲ್ಲಿಸಿಲ್ಲ. ಹೀಗಾಗಿ ಆ ಮೂರು ಸಂಸ್ಥೆಗಳ ಪ್ರಯಾಣ ದರ ಏರಿಕೆ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದೂ ಸವದಿ ಹೇಳಿದರು.

ವಿದ್ಯಾರ್ಥಿಗಳ ರಿಯಾಯ್ತಿ ಬಸ್‌ಪಾಸ್‌ಗಳನ್ನು ಸೇವಾ ಸಿಂಧು ಮೂಲಕ ಇನ್ನೂ ಒಂದು ವರ್ಷ ವಿತರಿಸಲಾಗುವುದು. ಹೊಸ ಪದ್ಧತಿ ಜಾರಿಯಲ್ಲಿ ಕೆಲವು ತಾಂತ್ರಿಕ ತೊಂದರೆ ಆಗಿದೆ ಎಂದರು.

3000 ಬಸ್‌ಗಳ ಖರೀದಿ ಪ್ರಸ್ತಾಪ: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ 3000 ಬಸ್ ಖರೀದಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಾರಿಗೆ ಸಂಸ್ಥೆ ಬಳಿ ಹಣ ಇಲ್ಲದ ಕಾರಣ ಸರ್ಕಾರವೇ ಖರೀದಿಸಿ ಕೊಡಬೇಕು ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ ಎಂದರು.

ಬಿಎಂಟಿಸಿಗೆ 300 ಎಲೆಕ್ಟ್ರಿಕ್ ಬಸ್‌ಗಳ ಖರೀದಿಗೆ ಸಂಬಂಧಿಸಿದಂತೆ ಮಾರ್ಚ್ 6 ಕ್ಕೆ ಟೆಂಡರ್ ಸಲ್ಲಿಸಲು ಕೊನೆ ದಿನವಾಗಿದೆ. ಹಲವು ಸಂಸ್ಥೆಗಳು ಬಿಡ್ ಸಲ್ಲಿಸಿವೆ ಎಂದು ಹೇಳಿದರು.

ಎಲೆಕ್ಟ್ರಿಕ್ ಬಸ್ ಖರೀದಿಗೆ ಕೇಂದ್ರ ಸರ್ಕಾರ ₹55 ಲಕ್ಷ ಸಬ್ಸಿಡಿ ನೀಡುತ್ತಿದ್ದು, ಅದನ್ನು ₹1 ಕೋಟಿಗೆ ಹೆಚ್ಚಿಸುವಂತೆ ಮನವಿ ಮಾಡಲಾಗುವುದು ಎಂದೂ ಸವದಿ ತಿಳಿಸಿದರು.

ಸಾರಿಗೆ ಸಂಸ್ಥೆಗೆ ಒಟ್ಟು ₹2,780 ಕೋಟಿ ನಷ್ಟ

ಬಿಎಂಟಿಸಿ ಮತ್ತು ಇತರ ಮೂರು ಸಾರಿಗೆ ಸಂಸ್ಥೆಗಳಿಂದ ಕೋವಿಡ್ ಸಂದರ್ಭದಲ್ಲಿ ಒಟ್ಟು ₹2,780 ಕೋಟಿ ನಷ್ಟ ಸಂಭವಿಸಿದೆ ಎಂದು ಲಕ್ಷ್ಮಣ ಸವದಿ ತಿಳಿಸಿದರು.

ಕೋವಿಡ್ ಪೂರ್ವದಲ್ಲಿ ನಷ್ಟದ ಪ್ರಮಾಣ ₹1,508 ಕೋಟಿ ಇತ್ತು. ಸಾರಿಗೆ ಸಂಸ್ಥೆಗಳ ನಷ್ಟ ಸರಿದೂಗಿಸಲು ಸರ್ಕಾರ ವಿದ್ಯಾರ್ಥಿ ಪಾಸ್‌ಗಳ ಬಾಕಿ ₹2,980 ಕೋಟಿ ನೀಡಬೇಕು ಎಂದು ಅವರು ಹೇಳಿದರು.

ಲಾಕ್‌ಡೌನ್‌ನಿಂದ ಇಲ್ಲಿಯವರೆಗೆ ಸಾರಿಗೆ ಸಂಸ್ಥೆಗಳು ಒಟ್ಟು ₹4,000 ಕೋಟಿ ಕೊರತೆ ಅನುಭವಿಸುತ್ತಿದೆ. ಇದು ನಷ್ಟ ಅಲ್ಲ, ನಷ್ಟ ₹2,780 ಕೋಟಿ. ಕೋವಿಡ್ ಸಂದರ್ಭದಲ್ಲಿ ಆದಾಯ ಸಂಪೂರ್ಣ ನಿಂತು ಹೋಗಿದ್ದರೂ ಸಿಬ್ಬಂದಿಗೆ ಸಂಬಳ ನಿಲ್ಲಿಸಲಿಲ್ಲ. ಸರ್ಕಾರದಿಂದ ₹1,780 ಕೋಟಿ ಪಡೆದು 1.30 ಲಕ್ಷ ಸಿಬ್ಬಂದಿಗೆ ಸಂಬಳ ವಿತರಣೆ ಮಾಡಿದ್ದೇವೆ ಎಂದು ಅವರು ತಿಳಿಸಿದರು.

ಬಿಎಂಟಿಸಿ ಸಿಬ್ಬಂದಿಗೆ ಸಂಬಳ ಕೊಡಲು ಸರ್ಕಾರದಿಂದ ₹80 ಕೋಟಿ ಪಡೆಯಲಾಯಿತು. ಅಲ್ಲದೆ, ವೇತನ, ಬಿಡಿಭಾಗಗಳು, ನಿವೃತ್ತಿ ಸೌಲಭ್ಯಗಳನ್ನು ಕೊಡಲು ₹780 ಕೋಟಿ ಅಗತ್ಯವಿತ್ತು. ಅದಕ್ಕಾಗಿ ಬ್ಯಾಂಕ್‌ನಿಂದ ₹566 ಕೋಟಿ ಸಾಲ ಪಡೆಯಲಾಯಿತು ಎಂದು ಸವದಿ ಹೇಳಿದರು.

ಕೆಎಸ್‌ಆರ್‌ಟಿಸಿ, ವಾಯವ್ಯ ಮತ್ತು ಈಶಾನ್ಯ ಸಾರಿಗೆ ಸಂಸ್ಥೆಗಳ ಬಸ್ಸುಗಳಿಗೆ ಶೇ 85 ರಷ್ಟು ಮತ್ತು ಬಿಎಂಟಿಸಿಗೆ ಶೇ 60 ರಷ್ಟು ಪ್ರಯಾಣಿಕರು ಬರಲಾರಂಭಿಸಿದ್ದಾರೆ. ಕೋವಿಡ್ ಎರಡನೇ ಅಲೆ ಬಾಧಿಸದೇ ಇದ್ದರೆ, ಇನ್ನು ಎರಡು ತಿಂಗಳಲ್ಲಿ ಕೋವಿಡ್ ಪೂರ್ವದ ಸಹಜ ಸ್ಥಿತಿಗೆ ತಲುಪಲಿದೆ ಎಂದರು.

ಡೀಸೆಲ್ ಬೆಲೆ ಏರಿಕೆಯಿಂದ ಸಾರಿಗೆ ಸಂಸ್ಥೆಗೆ ಹೆಚ್ಚಿನ ಹೊರೆ ಆಗಿಲ್ಲ. ತೈಲ ಕಂಪನಿ ಜತೆ ಡೀಸೆಲ್ ಪೂರೈಕೆಗೆ ಒಪ್ಪಂದದ ಪ್ರಕಾರ ಮಾರುಕಟ್ಟೆ ದರಕ್ಕಿಂತ ₹3.20 ಕಡಿಮೆ ಬೆಲೆಗೆ ಪೂರೈಸುತ್ತಿವೆ ಎಂದು ಸವದಿ ತಿಳಿಸಿದರು.

ಸಾರಿಗೆ ಸಂಸ್ಥೆಗಳಿಂದ ಕಾರ್ಗೊ, ಪಾರ್ಸೆಲ್ ಸೇವೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಮತ್ತು ಈಶಾನ್ಯ ರಸ್ತೆ ಸಾರಿಗೆ ಸಂಸ್ಥೆಗಳು ಶುಕ್ರವಾರದಿಂದ ಕಾರ್ಗೊ, ಪಾರ್ಸೆಲ್ ಮತ್ತು ಹಗುರ ಪಾರ್ಸೆಲ್‌ಗಳ ಸೇವೆಗೆ ಚಾಲನೆ ನೀಡಲಿವೆ.

ಈ ಯೋಜನೆಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿಧಾನಸೌಧದಲ್ಲಿ ಚಾಲನೆ ನೀಡಲಿದ್ದಾರೆ ಎಂದು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ವ್ಯವಸ್ಥೆ ಜಾರಿ ಮಾಡುವುದರಿಂದ ಸಾರಿಗೆ ಸಂಸ್ಥೆಗೆ ವಾರ್ಷಿಕ ₹80 ಕೋಟಿಯಿಂದ ₹100 ಕೋಟಿ ಆದಾಯ ಸಿಗಲಿದೆ. ಮೊದಲ ಹಂತದಲ್ಲಿ ರಾಜ್ಯದೊಳಗೆ 88 ಬಸ್ ನಿಲ್ದಾಣಗಳಲ್ಲಿ ಮತ್ತು ಅಂತರರಾಜ್ಯಗಳ 21 ಬಸ್ ನಿಲ್ದಾಣಗಳು ಸೇರಿ ಒಟ್ಟು 109 ಬಸ್ ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ. ಎರಡನೇ ಹಂತದಲ್ಲಿ ಉಳಿದ ಬಸ್ ನಿಲ್ದಾಣಗಳಲ್ಲೂ ಈ ಯೋಜನೆ ಜಾರಿ ಬರಲಿದೆ ಎಂದು ಹೇಳಿದರು.

ಈಗ ಲಗೇಜ್ ಸಾಗಣೆಯಿಂದ ಮೂರು ಸಾರಿಗೆ ನಿಗಮಗಳು ಪ್ರತಿ ದಿನ ₹8.50 ಲಕ್ಷ ಆದಾಯಗಳಿಸುತ್ತಿದೆ. ಹೊಸ ವ್ಯವಸ್ಥೆ ಜಾರಿ ಆದ ಬಳಿಕ ಲಗೇಜ್ ಆದಾಯ ಎರಡು ಪಟ್ಟು ಹೆಚ್ಚಾಗಲಿದೆ ಎಂದರು.

ಈ ಯೋಜನೆಯ ಜಾರಿಗೆ 'ಮೆ. ಸ್ಟ್ರಾಟಜಿಕ್ ಔಟ್ ಸೋರ್ಸಿಂಗ್ ಪ್ರೈವೇಟ್ ಲಿಮಿಟೆಡ್' ಅನ್ನು ಟೆಂಡರ್ ಮೂಲಕ ಐದು ವರ್ಷಗಳ ಅವಧಿಗೆ ನಿರ್ವಹಣಾ ಸಂಸ್ಥೆಯನ್ನಾಗಿ ಆಯ್ಕೆ ಮಾಡಲಾಗಿದೆ ಎಂದರು.

ಈ ಕಂಪನಿಯವರೇ ಕೌಂಟರ್ ನಿರ್ವಹಿಸಲು ಮಾನವ ಶಕ್ತಿ ನಿಯೋಜನೆ, ಲಗೇಜ್ ಸ್ವೀಕರಿಸುವುದು, ಬಸ್ಸಿಗೆ ಲೋಡಿಂಗ್– ಅನ್ ಲೋಡಿಂಗ್ ಮಾಡುವುದು, ತಲುಪಿದ ಬಸ್ ನಿಲ್ದಾಣದಲ್ಲಿ ಗ್ರಾಹಕರಿಗೆ ಲಗೇಜ್ ವಿಲೇವಾರಿ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲಿದ್ದಾರೆ ಎಂದು ಹೇಳಿದರು.

ಈವ್ಯವಸ್ಥೆಗೆಅಗತ್ಯವಿರುವತಂತ್ರಾಂಶವನ್ನು ಸಾಫ್ಟ್‌ವೇರ್ ಪ್ರೊವೈಡರ್ ಅಭಿವೃದ್ಧಿಪಡಿಸಲಿದೆ. ಗ್ರಾಹಕರು ಪಾರ್ಸೆಲ್ ಬುಕ್ಕಿಂಗ್ ಸಂಬಂಧ ವಿಚಾರಣೆ ನಡೆಸಲು ಅಥವಾ ಅಹವಾಲಿನ ಬಗ್ಗೆ ದೂರು ನೀಡಲು ದಿನದ 24 ಗಂಟೆಗಳೂ ಕಾರ್ಯ ನಿರ್ವಹಿಸುವ ಕಾಲ್‌ಸೆಂಟರ್ ಸ್ಥಾಪಿಸಲಾಗಿದೆ ಎಂದು ಹೇಳಿದರು.

ಗ್ರಾಹಕರ ವಸ್ತುಗಳಿಗೆ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತದೆ ಎಂದು ಸವದಿ ತಿಳಿಸಿದರು.

ನೌಕರರ 6 ಬೇಡಿಕೆಗಳ ಈಡೇರಿಕೆ

ಸಾರಿಗೆ ಸಂಸ್ಥೆ ನೌಕರರ ಪ್ರತಿಭಟನೆ ಸಂದರ್ಭದಲ್ಲಿ 10 ಬೇಡಿಕೆಗಳ ಪೈಕಿ 9 ಕ್ಕೆ ಒಪ್ಪಿಕೊಂಡಿದ್ದೆವು. ಅದರಲ್ಲಿ 6 ಈಡೇರಿಸಲಾಗಿದೆ. ಉಳಿದ ಮೂರು ಈಡೇರಿಕೆ ಹಂತದಲ್ಲಿದೆ ಎಂದು ಲಕ್ಷ್ಮಣ ಸವದಿ ಹೇಳಿದರು.

ಜೀವ ವಿಮೆ ಅಳವಡಿಕೆ, ಕೋವಿಡ್ ಕರ್ತವ್ಯದಲ್ಲಿ ಮೃತಪಟ್ಟವರಿಗೆ ₹30 ಲಕ್ಷ ಪರಿಹಾರ ನೀಡುವ ವಿಚಾರದಲ್ಲಿ ಶುಕ್ರವಾರ ಮುಖ್ಯಮಂತ್ರಿಯವರು ಸಾಂಕೇತಿಕವಾಗಿ ಕೆಲವು ಕುಟುಂಬಗಳಿಗೆ ಪರಿಹಾರದ ಚೆಕ್ ನೀಡಲಿದ್ದಾರೆ. ಉಳಿದವರಿಗೆ 15 ದಿನಗಳಲ್ಲಿ ತಲುಪಿಸಲಾಗುವುದು. ಒಟ್ಟು 112 ಜನ ಕೋವಿಡ್ ಕರ್ತವ್ಯದ ಸಂದರ್ಭದಲ್ಲಿ ಕೋವಿಡ್‌ನಿಂದ ಮೃತಪಟ್ಟಿರುವುದನ್ನು ಗುರುತಿಸಲಾಗಿದೆ. ಈ ಕುಟುಂಬಗಳಿಗೆ ತಲಾ ₹30 ಲಕ್ಷ ಪರಿಹಾರ ನೀಡಲಾಗುವುದು ಎಂದರು.

ಬಸ್ ನಿರ್ವಾಹಕರು ಹಣವನ್ನು ಪಡೆಯದೇ ಟಿಕೆಟ್ ನೀಡದೇ ಇರುವ ಪ್ರಕರಣಗಳಲ್ಲಿ ದಂಡ ವಿಧಿಸದೇ ಇರಲು ತೀರ್ಮಾನ, ಘಟಕಗಳಲ್ಲಿ ನೌಕರರಿಗೆ ಅನಗತ್ಯ ಕಿರುಕುಳ ನಿಲ್ಲಿಸಲು ಕ್ರಮ, ಈ ಹಿಂದೆ ಕೊಡುತ್ತಿದ್ದಂತೆ ಭತ್ಯೆ ನೀಡಲು ಆರಂಭಿಸಲಾಗಿದೆ. ತರಬೇತಿ ಅವಧಿಯನ್ನು 2 ವರ್ಷದಿಂದ 1 ವರ್ಷಕ್ಕೆ ಇಳಿಸಬೇಕೆಂಬ ಬೇಡಿಕೆ ಜಾರಿ ಆಗುತ್ತದೆ ಎಂದು ಸವದಿ ಹೇಳಿದರು.

ಬೆಳಗಾವಿಗೆ ಹೋದ ಬೆಂಗಳೂರು ಸಿಂಹಗಳು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಮೂರು ಸಿಂಹಗಳನ್ನು ಪ್ರಾಣಿ ವಿನಿಮಯ ಯೋಜನೆಯಡಿ ಬೆಳಗಾವಿ ಭೂತರಾಮನಹಟ್ಟಿ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯಕ್ಕೆ ಹಸ್ತಾಂತರಿಸಲಾಗಿದೆ.

ಗಣೇಶ ಮತ್ತು ಪ್ರೇಕ್ಷಾ ಜೋಡಿಗೆ 2010ರಲ್ಲಿ ಜನಿಸಿದ್ದ ನಿರುಪಮಾ, ಕೃಷ್ಣ ಮತ್ತು ನಕುಲ ಎಂಬ 11 ವರ್ಷದ ಸಿಂಹಗಳನ್ನು ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯಕ್ಕೆ ನೀಡಲಾಗಿದೆ.

ಹೊಸದಾಗಿ ಪ್ರಾರಂಭವಾಗಿರುವ ಈ ಮೃಗಾಲಯಕ್ಕೆ ಬನ್ನೇರುಘಟ್ಟದಿಂದ ಸಿಂಹಗಳನ್ನು ನೀಡಿರುವುದು ವಿಶೇಷ. ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಅನುಮೋದನೆ ಪಡೆದು ಈ ಸಿಂಹಗಳನ್ನು ನೀಡಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 24 ಸಿಂಹಗಳಿದ್ದು ಮೂರು ಸಿಂಹಗಳನ್ನು ಹಸ್ತಾಂತರ ಮಾಡಿರುವುದರಿಂದ ಪ್ರಸ್ತುತ ಬನ್ನೇರುಘಟ್ಟದಲ್ಲಿ 21 ಸಿಂಹಗಳು ಉಳಿದಿವೆ.



ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ತೆರಳಿದ ಕೃಷ್ಣ

ಸಫಾರಿ ಆಕರ್ಷಣೆ ಬೆಳಗಾವಿಗೆ ವರ್ಗ

ಕೃಷ್ಣ, ನಕುಲ ಮತ್ತು ನಿರುಪಮಾ ಸಿಂಹಗಳು ಉದ್ಯಾನದ ಸಫಾರಿಯಲ್ಲಿದ್ದವು. ಸಫಾರಿಯಲ್ಲಿ ಐದು ಸಿಂಹಗಳ ಜೋಡಿಯಲ್ಲಿ ಪ್ರವಾಸಿಗರ ಕಣ್ಮನ ಸೆಳೆಯುತ್ತಿದ್ದವು.

ವಿ.ರಾಮಮೂರ್ತಿ, ಎಂ.ರಾಮಮೂರ್ತಿ, ದುರ್ಗಪ್ಪ ಎಂಬ ಪ್ರಾಣಿ ಪಾಲಕರು ಈ ಪ್ರಾಣಿಗಳನ್ನು ನೋಡಿಕೊಳ್ಳುತ್ತಿದ್ದರು. ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ವಿ.ರಾಮಮೂರ್ತಿ ಎಂಬ ಪ್ರಾಣಿಪಾಲಕರನ್ನು ಬೆಳಗಾವಿ ಕಿರು ಮೃಗಾಲಯಕ್ಕೆ ಕಳುಹಿಸಲಾಗಿದೆ.

ಪ್ರಾಣಿಗಳು ಹೊಂದಿಕೊಳ್ಳಲು ಮತ್ತು ಪಾಲನೆ ಮಾಡುವ ಬಗ್ಗೆ ಅಲ್ಲಿಯ ಪ್ರಾಣಿ ಪಾಲಕರಿಗೆ ಮಾರ್ಗದರ್ಶನ ನೀಡಲಿದ್ದಾರೆ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ವೈದ್ಯ ಡಾ.ಉಮಾಶಂಕರ್ ತಿಳಿಸಿದರು.

ವಾಟ್ಸ್ ಆ್ಯಪ್‌ಗಳಲ್ಲಿ ಹರಿದಾಡುತ್ತಿದೆ ಪತ್ರ– ಸರ್ಕಾರದ ಉತ್ತರದಿಂದ ಗೊಂದಲ

ಬಿಡಿಎ ಆಯುಕ್ತ ಮಹದೇವ್ ಅವಧಿ ವಿಸ್ತರಣೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ಎಚ್.ಆರ್.ಮಹದೇವ್ ಅವರ ಅವಧಿ ವಿಸ್ತರಣೆ ಆಗಲಿದೆಯೇ? ಇಂತಹದ್ದೊಂದು ಚರ್ಚೆ ಬಿಡಿಎ ಪ್ರಾಂಗಣದಲ್ಲಿ ಕೇಳಿ ಬರುತ್ತಿದೆ.

ಮಹದೇವ್ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಫೆ.19ರಂದು ಬರೆದಿದ್ದಾರೆ ಎನ್ನಲಾದ ಪತ್ರವೊಂದು ವಾಟ್ಸ್‌ಆ್ಯಪ್‌ಗಳಲ್ಲಿ ಹರಿದಾಡುತ್ತಿದೆ.

'ವಂಶ ವೃಕ್ಷದ ಪ್ರಕಾರ ಮತ್ತು ಜಾತಕ ಪತ್ರದಂತೆ ನನ್ನ ಜನ್ಮ ದಿನಾಂಕ 1962ರ ಸೆ 28. ಆದರೆ, ಸೇವಾ ದಾಖಲೆಗಳಲ್ಲಿ ಜನ್ಮ ದಿನಾಂಕವು 1961ರ ಏ. 8 ಎಂದು ನಮೂದಾಗಿದೆ. ಅದರ ಬದಲು 1962ರ ಸೆ.28 ಅನ್ನೇ ಜನ್ಮದಿನಾಂಕ ಎಂದು ಪರಿಗಣಿಸಿ ಸೇವೆಯಲ್ಲಿ ಮುಂದುವರಿಸುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಅವರಲ್ಲಿ 2020ರ ನ.7ರಂದು ಕೋರಿದ್ದೆ. ಅರ್ಜಿ ಸಲ್ಲಿಸಿದ ಮೂರು ತಿಂಗಳ ಬಳಿಕವೂ ನನ್ನ ಮನವಿ ಬಗ್ಗೆ ಕ್ರಮ ಕೈಗೊಳ್ಳದ ಕಾರಣ ಕೇಂದ್ರ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಲ್ಲಿಸಿ ಸೇವಾ ದಾಖಲೆಗಳಲ್ಲಿ 1962ರ ಸೆ.28 ಅನ್ನೇ ಜನ್ಮದಿನಾಂಕ ಎಂದು ನಮೂದಿಸಲು ಆದೇಶ ನೀಡುವಂತೆ ಕೋರಿದ್ದೆ. ಕೇಂದ್ರ ಆಡಳಿತ ನ್ಯಾಯಮಂಡಳಿಯು 2021ರ ಫೆ.01ರಂದು ನೀಡಿರುವ ಆದೇಶದಲ್ಲಿ 'ನನ್ನ ಮನವಿಯನ್ನು ಪರಿಗಣಿಸಿ ಜನ್ಮ ದಿನಾಂಕವನ್ನು ಸೇವಾ ದಾಖಲೆಗಳಲ್ಲಿ ತಿದ್ದುಪಡಿಗೊಳಿಸಿ ಸೇವೆಯಲ್ಲಿ ಮುಂದುವರೆಸಲು ಸೂಕ್ತ ಆದೇಶ ನೀಡಬೇಕು' ಎಂದು ನಿರ್ದೇಶನ ನೀಡಿದೆ. ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರಿಗೆ ನಿರ್ದೇಶನ ನೀಡಬೇಕು' ಎಂಬುದಾಗಿ ಮುಖ್ಯಮಂತ್ರಿ ಅವರನ್ನು ಮಹದೇವ್ ಅವರು ಕೋರಿರುವ ಒಕ್ಕಣೆ ಆ ಪತ್ರದಲ್ಲಿದೆ.

'ಕೇಂದ್ರ ಆಡಳಿತ ನ್ಯಾಯಮಂಡಳಿಯ ಆದೇಶದಂತೆ ಜನ್ಮದಿನಾಂಕದ ಬಗ್ಗೆ ಸೂಕ್ತ ಕ್ರಮಕ್ಕೆ ಸೂಚಿಸಿದೆ' ಎಂದು ಪತ್ರದಲ್ಲಿ ಮೇಲ್ಭಾಗದಲ್ಲಿ ಬರೆಯಲಾಗಿದ್ದು, ಅದರ ಕೆಳಗಡೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಹಿ ಹಾಗೂ ಮುದ್ರೆ ಇದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಎಚ್.ಆರ್.ಮಹದೇವ್, 'ಸೇವಾ ಅವಧಿ ವಿಸ್ತರಿಸುವಂತೆ ನಾನು ಯಾವುದೇ ಕೋರಿಕೆ ಸಲ್ಲಿಸಿಲ್ಲ. ಇವೆಲ್ಲ ಊಹಾಪೋಹಗಳು' ಎಂದರು.

'ಮಹದೇವ್ ಅವರು ಜನ್ಮ ದಿನಾಂಕದಲ್ಲಿ ವ್ಯತ್ಯಯ ಆಗಿರುವ ಬಗ್ಗೆ ಪತ್ರ ಬರೆದಿದ್ದು ನಿಜ. ಜನ್ಮ ದಿನಾಂಕ ಬದಲಾವಣೆ ಮಾಡಿ ಸೇವಾ ಅವಧಿ ವಿಸ್ತರಣೆಗೂ ಕೋರಿದ್ದಾರೆ. ಈ ಬಗ್ಗೆ ಸಚಿವ ಸಂಪುಟವೇ ತೀರ್ಮಾನ ಕೈಗೊಳ್ಳಲಿದೆ' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಅಂತರರಾಜ್ಯ ಜಲವಿವಾದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನೀರಾವರಿ ಯೋಜನೆಗಳ ಕಾಮಗಾರಿಗಳ ಪ್ರಗತಿ ಪರಿಶೀಲನೆ, ಅಂತರರಾಜ್ಯ ಜಲವಿವಾದಗಳು, ಸುಪ್ರೀಂ ಕೋರ್ಟ್‌ನಲ್ಲಿರುವ ದಾವೆಗಳ ಕುರಿತಂತೆ ಚರ್ಚಿಸಲು ಜಲಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ಶುಕ್ರವಾರ (ಫೆ.26) ನಡೆಯಲಿದೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಕೂಡಾ ಭಾಗವಹಿಸಲಿದ್ದಾರೆ.

ಗ್ರಾಮಾಭಿವೃದ್ಧಿ ಕನಸಿದ್ದರೆ ಸಿಗಲಿದೆ ಫೆಲೋಶಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶವನ್ನು ಆರ್ಥಿಕವಾಗಿ ಅಭಿವೃದ್ಧಿ ಮಾಡಲು ಬಯಸುವ ಆಸಕ್ತ ಅಭ್ಯರ್ಥಿಗಳಲ್ಲಿ ಅದಕ್ಕೆ ಬೇಕಾದ ಕೌಶಲ ಬೆಳೆಸಲು ಕೇಂದ್ರ ಸರ್ಕಾರವು 'ಮಹಾತ್ಮ ಗಾಂಧಿ ರಾಷ್ಟ್ರೀಯ ಫೆಲೋಶಿಪ್' ನೀಡುತ್ತಿದೆ.

ಕೇಂದ್ರ ಸರ್ಕಾರದ ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ ಹಾಗೂ ರಾಜ್ಯ ಕೌಶಲ ಅಭಿವೃದ್ಧಿ ಮಿಷನ್ ಸಹಯೋಗದಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದ್ದು, ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆಯು (ಐಐಎಂಬಿ) ಸಾಮಾನ್ಯ ಪ್ರವೇಶ ಪ್ರಕ್ರಿಯೆಯ ಜವಾಬ್ದಾರಿ ಹೊತ್ತಿದೆ. ದೇಶದ 9 ಐಐಎಂಗಳ ಮೂಲಕ ಎರಡನೇ ಹಂತದಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅರ್ಜಿ ಸಲ್ಲಿಸುವುದು ಹೇಗೆ ?: https://www.iimb.ac.in/mgnf ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಕೊನೆಯ ದಿನ ಮಾ.27.

'ಕೈ' ಹಿಡಿದ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೋಟೆ ಕ್ಷೇತ್ರದ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಅವರು ಕಾಂಗ್ರೆಸ್‌ಗೆ ತಮ್ಮ ಬಾಹ್ಯ ಬೆಂಬಲ ಘೋಷಿಸಿ, ಗುರುವಾರ ಆ ಪಕ್ಷದ ಸದಸ್ಯತ್ವ ಪಡೆದರು.


ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ನಿವಾಸದಲ್ಲಿ ನಡೆದ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಮತ್ತು ತಮ್ಮ ಅಭಿಮಾನಿಗಳ ಸಮ್ಮುಖದಲ್ಲಿ ಶರತ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, '30-40 ವರ್ಷದಿಂದ ನಾನು ಹೊಸಕೋಟೆಗೆ ಗಾಳ ಹಾಕುತ್ತಿದ್ದೆ. ಇಂದು ಶಾಸಕರು ಬಿದ್ದಿಲ್ಲ. ಆದರೆ, ನೀವೆಲ್ಲ ಬೆಂಬಲಿಗರು ಬಿದ್ದಿದ್ದೀರಿ. ನಿಮ್ಮಿಂದ ಬಹಳ ನಿರೀಕ್ಷೆ ಇದೆ. ನಿಮಗೆ ನಾವು ಸಹಕಾರ ನೀಡಲು ಸಿದ್ಧ. ಕ್ಷೇತ್ರದ ಯಾವುದೇ ಬೇಡಿಕೆ ಇದ್ದರೂ ಸರ್ಕಾರದ ಗಮನಕ್ಕೆ ತರೋಣ. ಜನರ ನೋವಿಗೆ ನಾವು ದನಿಯಾಗಬೇಕು' ಎಂದರು.

ಶರತ್ ಬಚ್ಚೇಗೌಡ ಮಾತನಾಡಿ, 'ಜನರ ಒಲವು ಸಿಕ್ಕರೆ ಮಾತ್ರ ರಾಜಕಾರಣಿ, ಶಾಸಕನಾಗಲು ಸಾಧ್ಯ. ನನ್ನ ನಿರ್ಧಾರ ಮತದಾರರ ನಿರ್ಧಾರ. ನಾನು ಪಕ್ಷೇತರ ಶಾಸಕನಾಗಿಯೇ ಇರುತ್ತೇನೆ. ನನಗೆ ಕಾಂಗ್ರೆಸ್ ಪಕ್ಷದ ಸಹಕಾರ ಸಿಗಲಿದೆ. ಬಿಜೆಪಿ ಜನ ವಿರೋಧಿ ಅಭಿಪ್ರಾಯಗಳನ್ನು ವಿರೋಧಿಸುತ್ತೇನೆ' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಪಕ್ಷೇತರರಾಗಿ ಗೆದ್ದವರು ಪಕ್ಷಕ್ಕೆ ಸೇರಿದರೆ ಪಕ್ಷಾಂತರ ನಿಷೇಧ ಕಾಯ್ದೆ ತೊಡಕಾಗಲಿದೆ. ಈ ಅವಧಿ ನಂತರ ಸೇರಬಹುದು. ಅಲ್ಲಿಯವರೆಗೂ ಬಾಹ್ಯ ಬೆಂಬಲ ಕೊಡಬಹುದು. ಸರ್ಕಾರದ ವಿರುದ್ಧ ನಮ್ಮ ಹೋರಾಟದ ಸಂದರ್ಭದಲ್ಲಿ ಶರತ್ ಬಚ್ಚೇಗೌಡ ನಮ್ಮನ್ನು ಬೆಂಬಲಿಸಬಹುದು' ಎಂದರು.

'ಪಕ್ಷೇತರನಾಗಿ ಏಕಾಂಗಿ ಹೋರಾಟ ಮಾಡುವ ಬದಲು ಅವರು ನಮ್ಮ ಬೆಂಬಲ ಕೋರಿದ್ದಾರೆ. ರಾಜ್ಯದಲ್ಲಿ ಸತ್ತ ಸರ್ಕಾರ ಇದೆ. ಯಡಿಯೂರಪ್ಪ ನಿಂತು ಹೋಗಿರುವ ಡಕೋಟಾ ಬಸ್‌ನಲ್ಲಿ ಕುಳಿತಿದ್ದಾರೆ. ನನ್ನ ಬದುಕಿನಲ್ಲಿ ಇಂಥ ಭ್ರಷ್ಟ ಸರ್ಕಾರವನ್ನು ಕಂಡಿರಲಿಲ್ಲ. ಇದನ್ನು ಕಿತ್ತೊಗೆಯಬೇಕು. ಅದಕ್ಕೆ ಶರತ್ ಬಚ್ಚೇಗೌಡ ಬೆಂಬಲ ನೀಡಬೇಕು' ಎಂದರು.



ಶರತ್ ಬಚ್ಚೇಗೌಡ ಅವರನ್ನು ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷಕ್ಕೆ ಸ್ವಾಗತಿಸಿದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್‌.ಆರ್. ಪಾಟೀಲ ಇದ್ದರು

ಪಂಚಮಸಾಲಿ ಸಭೆ: ಉಪವಾಸ ನಿರ್ಧಾರ ಕೈಬಿಡಲು ಭಕ್ತರ ಒತ್ತಾಯ

'ಹೋರಾಟ ರೂಪುರೇಷೆಗೆ ಸಮಿತಿ ರಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2 ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿ ಧರಣಿ ನಡೆಸುತ್ತಿರುವ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾರ್ಚ್ 4ರ ನಂತರ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ಪ್ರಕಟಿಸಿದ್ದರು. ಈ ನಿರ್ಧಾರವನ್ನು ವಾಪಸ್ ಪಡೆಯಬೇಕು ಎಂದು ಭಕ್ತರು ಒತ್ತಾಯಿಸಿದರು. ನಂತರ, ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸಲು ಹಿರಿಯರ ಸಲಹಾ ಸಮಿತಿ ರಚಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಹೋರಾಟದ ಮುಂದಿನ ರೂಪುರೇಷೆ ಕುರಿತು ಚರ್ಚಿಸಲು ಸಮುದಾಯದ ರಾಜ್ಯ ಮತ್ತು ರಾಷ್ಟ್ರದ ಪದಾಧಿಕಾರಿಗಳ ಸಭೆಯನ್ನು ಗುರುವಾರ ಕರೆಯಲಾಗಿತ್ತು. ಬೇಡಿಕೆ ಈಡೇರುವವರೆಗೂ ವಿವಿಧ ರೂಪದಲ್ಲಿ ಪ್ರತಿಭಟನೆ ತೀವ್ರಗೊಳಿಸಬೇಕು ಎಂದು ಹಲವು ಮುಖಂಡರು ಸಭೆಯಲ್ಲಿ ಒತ್ತಾಯಿಸಿದರು.

'4ರವರೆಗೆ ಧರಣಿ ಮುಂದುವರಿಸೋಣ. ಸರ್ಕಾರ ಆಗಲೂ ಬೇಡಿಕೆ ಈಡೇರಿಸದಿದ್ದರೂ ಸ್ವಾಮೀಜಿಯವರು ಉಪವಾಸ ಸತ್ಯಾಗ್ರಹ ಮಾಡುವುದು ಬೇಡ. ಬದಲಾಗಿ, ಸಮುದಾಯದ ಜಿಲ್ಲಾ ಮತ್ತು ತಾಲ್ಲೂಕು ಅಧ್ಯಕ್ಷರ ನೇತೃತ್ವದಲ್ಲಿ ಹೋರಾಟ ತೀವ್ರಗೊಳಿಸೋಣ' ಎಂದು ಸಮುದಾಯದ ನಾಯಕಿ ವೀಣಾ ಕಾಶಪ್ಪನವರ ಸಲಹೆ ನೀಡಿದರು.

ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಸ್ವಾಮೀಜಿಯವರಿಗೇ ಬಿಡಲಾಯಿತು.

ಅಧಿವೇಶನದಲ್ಲಿ ಧ್ವನಿ ಎತ್ತಿ: 'ಮಾರ್ಚ್ 4ರವರೆಗೆ ಧರಣಿ ಸತ್ಯಾಗ್ರಹ ಮುಂದುವರಿಸುತ್ತೇವೆ. ನಮ್ಮ ಬೇಡಿಕೆ ಈಡೇರಿಕೆ ಬಗ್ಗೆ ಅಧಿವೇಶನದಲ್ಲಿ ಸರ್ಕಾರವು ಸ್ಪಷ್ಟ ಭರವಸೆ ನೀಡಿದರೆ, ಧರಣಿ ಮುಂದುವರಿಸಬೇಕೋ, ಬೇಡವೋ ಎಂಬುದನ್ನು ನಂತರದಲ್ಲಿ ನಿರ್ಧರಿಸುತ್ತೇವೆ. ಈ ಬೇಡಿಕೆ ಎಲ್ಲ ಪಕ್ಷದ ನಮ್ಮ ಸಮುದಾಯದ ನಾಯಕರು ಅಧಿವೇಶನದಲ್ಲಿ ಧ್ವನಿ ಎತ್ತುವಂತೆ ಮನವಿ ಮಾಡಿಕೊಳ್ಳಲಾಗುವುದು' ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ರಾಷ್ಟ್ರೀಯ ಘಟಕದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

'ಸಮುದಾಯದ ನಾಯಕರು ಮಾತ್ರವಲ್ಲದೆ, ಎಲ್ಲ 224 ಶಾಸಕರಿಗೂ ಈ ಬಗ್ಗೆ ಧ್ವನಿ ಎತ್ತುವಂತೆ ಕೋರಲಾಗುವುದು' ಎಂದೂ ಅವರು ತಿಳಿಸಿದರು.

ಎಲ್ಲ ಮುಖಂಡರೂ ಸಮಾನ: 'ನನ್ನ ಮೇಲೆ ಕೆಲವರು ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಆದರೆ, ನಾನು ಯಾರ ಕಪಿಮುಷ್ಠಿಯಲ್ಲೂ ಇಲ್ಲ. ಮೀಸಲಾತಿ ಹೋರಾಟದಲ್ಲಿ ನಮಗೆ ಸಮಾಜದ ಎಲ್ಲ ಮುಖಂಡರೂ ಸಮಾನ' ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಸ್ಪಷ್ಟಪಡಿಸಿದರು.

ಹೋರಾಟದ ಮುಂಚೂಣಿಯಲ್ಲಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಭೆಯಲ್ಲಿ ಹಾಜರಿರಲಿಲ್ಲ.



ಸಭೆಯಲ್ಲಿ ವಿಜಯಾನಂದ ಕಾಶಪ್ಪನವರ ಮಾತನಾಡಿದರು. ಸಮಾಜದ ಮುಖಂಡರಾದ ಅರವಿಂದ ಬೆಲ್ಲದ, ಸಿದ್ದು ಸವದಿ, ಶಶಿಕಾಂತ್ ನಾಯಕ್, ಶಿವಶಂಕರ್, ಎಂ.ಪಿ. ನಾಡಗೌಡ ಇತರರು ಇದ್ದರು

ಶುಕ್ರವಾರ, ಫೆಬ್ರುವರಿ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 57 | ಪುಟ 14 + 4

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಆನಂದ್’ ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಕಾಲಿಟ್ಟ ಶಿವರಾಜ್‌ಕುಮಾರ್ ಹಾಗೂ ಸುಧಾರಾಣಿ ಅವರ ವೃತ್ತಿ ಬದುಕಿಗೆ 35 ವರ್ಷಗಳ ಸಂಭ್ರಮ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
51,039 ▲	15,097 ▲	₹47,900 (ಬೆಂಗಳೂರು)	₹72,300 (ಬೆಂಗಳೂರು)	72.43 ▼

ಆರ್‌ಡಿಪಿಆರ್ ಗಮನಕ್ಕೆ ತಾರದೇ 81 ಶಾಸಕರಿಗೆ ₹775 ಕೋಟಿ ಹಂಚಿದ ಸಿ.ಎಂ ಕಚೇರಿ

ಶಾಸಕರ ಓಲೈಕೆಗೆ ‘ಸುಮಾರ್ಗ’?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗದಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಿಸಲು ರೂಪಿಸಿರುವ ‘ಸುಮಾರ್ಗ’ ಯೋಜನೆಗೆ ಮೀಸಲಿಟ್ಟ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯ ಗಮನಕ್ಕೂ ತಾರದೇ ಮುಖ್ಯಮಂತ್ರಿ ಕಚೇರಿ ನೇರವಾಗಿ 81 ಶಾಸಕರಿಗೆ ಹಂಚಿಕೆ ಮಾಡಿರುವುದು ಬಿಜೆಪಿಯಲ್ಲೇ ಅಸಮಾಧಾನ ಹುಟ್ಟು ಹಾಕಿದೆ.

ಸಚಿವ ಸ್ಥಾನ, ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಸಿಗದಿರುವ ಕಾರಣಕ್ಕೆ ಸಿಟ್ಟಾಗಿರುವ, ತಮ್ಮ ಮಾತಿಗೆ ಬೆಲೆಯೇ ಸಿಗುತ್ತಿಲ್ಲ ಎಂದು ಆಕ್ರೋಶಗೊಂಡಿರುವ ಶಾಸಕರನ್ನು ಓಲೈಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈ ದಾರಿ ಹಿಡಿದಿದ್ದಾರೆ ಎಂಬ ಚರ್ಚೆ ಬಿಜೆಪಿ ‘ಗರ್ಭಗುಡಿ’ಯಲ್ಲೇ ಶುರುವಾಗಿದೆ.

ರಾಜ್ಯದಲ್ಲಿ ಐದು ವರ್ಷಗಳ ಅವಧಿಯಲ್ಲಿ 20 ಸಾವಿರ ಕಿ.ಮೀ ಸುವ್ಯವಸ್ಥಿತ ರಸ್ತೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ಯೋಜನೆ ರೂಪಿಸಿತ್ತು. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ರೀತಿಯ ಮಾನದಂಡಗಳನ್ನು ರೂಪಿಸಲಾಗಿತ್ತು. 2020–21ನೇ ಸಾಲಿನ ಬಜೆಟ್‌ನಲ್ಲಿ ಮೊದಲ ಕಂತು ₹ 780 ಕೋಟಿ ಮೀಸಲಿಡಲಾಗಿತ್ತು. ಆದರೆ, ಕೋವಿಡ್ ಸಂಕಷ್ಟದ ಕಾರಣಗಳನ್ನು ಮುಂದಿಟ್ಟು 10 ತಿಂಗಳು ಕಳೆದರೂ ಯೋಜನೆ ಅನುಷ್ಠಾನಕ್ಕೆ ಅನುಮೋದನೆ ನೀಡಿರಲಿಲ್ಲ. ಈಗ ಮುಖ್ಯಮಂತ್ರಿಯೇ ಖುದ್ದು ಆಸಕ್ತಿ ವಹಿಸಿ ಆದೇಶ ಹೊರಡಿಸಿ, ಹಣಕಾಸು ಇಲಾಖೆ ಮೂಲಕ ₹ 775 ಕೋಟಿಯನ್ನು 81 ಶಾಸಕರಿಗೆ ಹಂಚಿಕೆ ಮಾಡಿದ್ದಾರೆ. ಈ ಕುರಿತ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.



ಯಡಿಯೂರಪ್ಪ

ಅನುದಾನ ಸಿಗದ ಬಿಜೆಪಿ ಶಾಸಕರ ಸಿಟ್ಟು: ‘ಕೆಲವು ಜಿಲ್ಲೆಗಳಲ್ಲಿ ಬಿಜೆಪಿಯ ಹಲವು ಶಾಸಕರಿದ್ದರೂ ತಮಗೆ ಆಪ್ತರಾದ ಶಾಸಕರಿಗಷ್ಟೇ ಅನುಕೂಲ ಮಾಡಿಕೊಡಲಾಗಿದೆ. ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಉಡುಪಿ, ತುಮಕೂರು, ಕೊಪ್ಪಳ, ಹಾವೇರಿ, ರಾಮನಗರ, ಧಾರವಾಡ, ಬಾಗಲಕೋಟೆ, ವಿಜಯಪುರ, ಚಿಕ್ಕಮಗಳೂರು, ರಾಯಚೂರು ಮೊದಲಾದ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಮನ್ನಣೆ ನೀಡಲಾಗಿದೆ. ಉಳಿದ ಕ್ಷೇತ್ರಗಳನ್ನು ಕಡೆಗಣಿಸಲಾಗಿದೆ. ವಿರೋಧ ಪಕ್ಷಗಳಿಗೆ ನೀಡಿದ ಆದ್ಯತೆಯನ್ನೂ, ಹಲವು ಸ್ವಪಕ್ಷೀಯ ಶಾಸಕರಿಗೆ ಯಡಿಯೂರಪ್ಪ ನೀಡಿಲ್ಲ’ ಎಂದು ಹೆಸರು ಹೇಳಲು ಇಚ್ಛಿಸದ ಬಿಜೆಪಿ ಶಾಸಕರೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಬಾಕಿಯೇ ₹1,439 ಕೋಟಿ: ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಎರಡು ವರ್ಷಗಳ ಅವಧಿಯಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಗುತ್ತಿಗೆದಾರರಿಗೆ ಸರ್ಕಾರ ಕೊಡಬೇಕಿರುವ ಬಾಕಿಯೇ ₹ 1,439 ಕೋಟಿ ಇದೆ. ಹಣದ ಕೊರತೆಯ ಕಾರಣ ನೀಡಿ ಹಿಂದಿನ ವರ್ಷ ಮಳೆಗಾಲದಲ್ಲಿ ಸಂಭವಿಸಿದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೈಗೆತ್ತಿಕೊಂಡಿದ್ದ ಕಾಮಗಾರಿಗಳಿಗೂ ತಡೆ ನೀಡಿದೆ. ಪರಿಸ್ಥಿತಿ ಹೀಗಿದ್ದರೂ ₹ 775 ಕೋಟಿಯನ್ನು ನೇರವಾಗಿ ಹಂಚಿಕೆ ಮಾಡಲಾಗಿದೆ.

ಟೆಂಡರ್ ಇಲ್ಲದೆ ತುಂಡುಗುತ್ತಿಗೆ: ಮುಖ್ಯಮಂತ್ರಿ ಬಿಡುಗಡೆ ಮಾಡಿದ ಅಷ್ಟೂ ಮೊತ್ತಕ್ಕೂ ಟೆಂಡರ್ ಕರೆಯದೇ ತುಂಡು ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ‘ಸುಮಾರ್ಗ’ದ ಪರಿಕಲ್ಪನೆಗೆ ವಿರುದ್ಧವಾಗಿ ₹ 5 ಲಕ್ಷದ ಒಳಗೆ ಸಣ್ಣ ಸಣ್ಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂಬ ಆರೋಪವನ್ನೂ ಶಾಸಕರು ಮಾಡಿದ್ದಾರೆ.

ಬಿಜೆಪಿ ಶಾಸಕರಿಗೆ ಬಂಪರ್

ಅನುದಾನ ಪಡೆದ 81 ಶಾಸಕರಲ್ಲಿ ಬಿಜೆಪಿಯ 32 ಶಾಸಕರಿಗೆ ತಲಾ ಗರಿಷ್ಠ ₹ 23 ಕೋಟಿವರೆಗೂ ಹಂಚಿಕೆ ಮಾಡಲಾಗಿದೆ. ಕಾಂಗ್ರೆಸ್‌ನ 30, ಜೆಡಿಎಸ್‌ನ 18 ಹಾಗೂ ಬಿಎಸ್‌ಪಿಯ ಒಬ್ಬರು ಶಾಸಕರಿಗೆ ತಲಾ ₹ 5 ಕೋಟಿ ದೊರೆತಿದೆ. ಬಿಜೆಪಿಯೇತರ 49 ಶಾಸಕರಿಗೆ ಒಟ್ಟು ₹ 245 ಕೋಟಿ ಹಂಚಿಕೆ ಮಾಡಿದ್ದರೆ, ಬಿಜೆಪಿಯ 32 ಶಾಸಕರಿಗೆ ಒಟ್ಟು ₹ 530 ಕೋಟಿ ಕೊಡಲಾಗಿದೆ.

ಕ್ಷೇತ್ರ	ಹೆಚ್ಚು ಮೊತ್ತ ಪಡೆದ ಶಾಸಕರು	ಅನುದಾನ (₹ ಕೋಟಿಗಳಲ್ಲಿ)
ಮೂಡಿಗೆರೆ	ಎಂ.ಪಿ. ಕುಮಾರಸ್ವಾಮಿ	23
ಸವದತ್ತಿ	ಆನಂದ ಮಾಮನಿ	22
ಗುಂಡ್ಲುಪೇಟೆ	ಸಿ.ಎಸ್. ನಿರಂಜನಕುಮಾರ್	22
ಬಂಟ್ವಾಳ	ರಾಜೇಶ ನಾಯ್ಕ್	22
ತುರುವೇಕೆರೆ	ಮಸಾಲೆ ಜಯರಾಂ	21
ಕಲಘಟಗಿ	ಸಿ.ಎಂ. ನಿಂಬಣ್ಣವರ್	21
ಕಿತ್ತೂರು	ಮಹಾಂತೇಶ ದೊಡ್ಡಗೌಡರ	21
ತೀರ್ಥಹಳ್ಳಿ	ಆರಗ ಜ್ಞಾನೇಂದ್ರ	20
ಹಿರಿಯೂರು	ಕೆ.ಪೂರ್ಣಿಮಾ	20
ನಂಜನಗೂಡು	ಹರ್ಷವರ್ಧನ್	20
ಧಾರವಾಡ	ಅಮೃತ ದೇಸಾಯಿ	20
ಮೂಡುಬಿದಿರೆ	ಉಮಾನಾಥ ಕೋಟ್ಯಾನ್	20
ಭಟ್ಕಳ	ಸುನೀಲ್ ನಾಯ್ಕ	20

ಟೆಂಡರ್ ರದ್ದು: ಸುಧಾಕರ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹1,800 ಕೋಟಿ ಮೊತ್ತದಲ್ಲಿ ಆಂಬುಲೆನ್ಸ್ ನಿಯಂತ್ರಣಾ ಕೇಂದ್ರ ತೆರೆಯುವ ಟೆಂಡರ್ ಪ್ರಕ್ರಿಯೆ ರದ್ದು ಪಡಿಸಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಟೆಂಡರ್ ಪ್ರಕ್ರಿಯೆ ಮೇಲ್ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ‘2020ರ ಜನವರಿ 17ರಂದು ಟೆಂಡರ್ ಪ್ರಕ್ರಿಯೆ ರದ್ದುಪಡಿಸಲಾಗಿದೆ. ನ್ಯಾಯಾಲಯ ಇಡೀ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸುತ್ತಿರುವಾಗ, ಅನುಮತಿ ಪಡೆಯದೇ ಏಕಾಏಕಿ ಸರ್ಕಾರ ರದ್ದುಗೊಳಿಸಬಹುದೇ’ ಎಂದು ಪ್ರಶ್ನಿಸಿತು.

‘ಸಚಿವರ ಬದಲು ಮುಖ್ಯ ಕಾರ್ಯದರ್ಶಿ ಅವರನ್ನು ಪ್ರತಿವಾದಿಯಾಗಿ ಮಾಡಿಕೊಳ್ಳಬಹುದು’ ಎಂದು ಸರ್ಕಾರದ ಪರ ವಕೀಲರು ಮನವಿ ಮಾಡಿದರು. ‘ಟೆಂಡರ್ ಪ್ರಕ್ರಿಯೆ ರದ್ದುಗೊಳಿಸುವ ಆದೇಶದಲ್ಲಿ ಸಚಿವರ ಸಹಿ ಇದೆ’ ಎಂದು ಪೀಠ ಅಭಿಪ್ರಾಯಪಟ್ಟಿತು.

ಸಚಿವರನ್ನು ಪ್ರತಿವಾದಿಯನ್ನಾಗಿಸಲು ಅನುಮತಿ ಕೋರಿ ಅರ್ಜಿದಾರರಾದ ಭಾರತ ಪುನರುತ್ಥಾನ ಟ್ರಸ್ಟ್ ಸಲ್ಲಿಸಿದ್ದ ಅರ್ಜಿಗೂ ಅನುಮತಿ ನೀಡಿದ ಪೀಠ, ಮಾರ್ಚ್ 30ಕ್ಕೆ ವಿಚಾರಣೆ ಮುಂದೂಡಿತು.

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಬೀದರ್ ಬಿಜೆಪಿ ಮುಖಂಡ ಗುರುನಾಥ ಕೊಳ್ಳೂರ ವಿರುದ್ಧ ಪ್ರಕರಣ

ಗಡಿಯಲ್ಲಿ 16 ಕ್ವಿಂಟಲ್ ಜಿಲೆಟಿನ್ ಜಪ್ತಿ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಬೀದರ್ ತಾಲ್ಲೂಕಿನ ಸುಲ್ತಾನಪುರ ಬಳಿ ತೆಲಂಗಾಣ ಗಡಿಯಲ್ಲಿ ಪೊಲೀಸರು ದಾಳಿ ನಡೆಸಿ 16 ಕ್ವಿಂಟಲ್ ಜಿಲೆಟಿನ್ ಜಪ್ತಿ ಮಾಡಿದ್ದಾರೆ.

‘ಬಿಜೆಪಿ ಮುಖಂಡ ಗುರುನಾಥ ಕೊಳ್ಳೂರ ಅವರಿಗೆ ಸೇರಿದ ಜಿ.ಕೆ. ಕನ್‌ಸ್ಟ್ರಕ್ಷನ್ ಕ್ರಷರ್ ಯಂತ್ರದ ಸಮೀಪ ತಲಾ 25 ಕೆ.ಜಿ. ತೂಕದ 67 ಬಾಕ್ಸ್ ಜಿಲೆಟಿನ್ ಕಡ್ಡಿಗಳು, 500 ಮೀಟರ್ ಅಳತೆಯ ನಾನ್ ಎಲೆಕ್ಟ್ರಿಕ್ ಡಿಟೋನೇಟರ್ ಹಾಗೂ ಒಂದು ಟಿಪ್ಪರ್ ಜಪ್ತಿ ಮಾಡಲಾಗಿದೆ. ಜಿ.ಕೆ.ಕನ್‌ಸ್ಟ್ರಕ್ಷನ್ ಮಾಲೀಕ ಗುರುನಾಥ ಕೊಳ್ಳೂರ ಹಾಗೂ ಟಿಪ್ಪರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರ್ಗಿ ಐಜಿಪಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ಬಸವೇಶ್ವರ ಹೀರಾ, ಗ್ರಾಮೀಣ ಸಿಪಿಐ ಶ್ರೀಕಾಂತ ಅಲ್ಲಾಪುರ, ಪಿಎಸ್‌ಐ ಸುವರ್ಣಾ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

‘ಬುಧವಾರ ರಾತ್ರಿ ದಾಳಿ ನಡೆಸಲಾಗಿದೆ. ಕಲ್ಲು ಕ್ವಾರಿ ತೆಲಂಗಾಣ ಗಡಿಯಲ್ಲಿದೆ. ಜಿ.ಕೆ.ಕನ್‌ಸ್ಟ್ರಕ್ಷನ್ ಕ್ರಷರ್ ಯಂತ್ರ ತೆಲಂಗಾಣ ಗಡಿಯಲ್ಲೇ ಇರುವ ಕಾರಣ ರಾಜ್ಯದ ಸೀಮೆ ವ್ಯಾಪ್ತಿಯನ್ನು ಖಚಿತಪಡಿಸಿಕೊಳ್ಳಲು ಸಮಯ ಬೇಕಾಯಿತು. ಜಿಲೆಟಿನ್ ಕಡ್ಡಿ ಇಡಲಾದ ಪ್ರದೇಶ ಬೀದರ್ ತಾಲ್ಲೂಕಿನ ಗಡಿಯೊಳಗೇ ಇದೆ ಎಂದು ಕಂದಾಯ ಇಲಾಖೆಯ ಅಧಿಕಾರಿಗಳು ದೃಢಪಡಿಸಿದ್ದಾರೆ’ ಎಂದು ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾಗೇಶ ಡಿ.ಎಲ್. ತಿಳಿಸಿದ್ದಾರೆ.

ಹಿರೇನಾಗವಲ್ಲಿ ಸ್ಫೋಟ: ಪ್ರಮುಖ ಆರೋಪಿ ಬಂಧನ

ಚಿಕ್ಕಬಳ್ಳಾಪುರ: ಹಿರೇನಾಗವಲ್ಲಿ ಜಿಲೆಟಿನ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ, ಬಿಜೆಪಿ ಮುಖಂಡ ಹಾಗೂ ಭ್ರಮರವಾಸಿನಿ ಕ್ರಷರ್ ಮಾಲೀಕ ಜಿ.ಎಸ್.ನಾಗರಾಜ ರೆಡ್ಡಿ ಅವರನ್ನು ಗುರುವಾರ ಬಂಧಿಸಲಾಗಿದೆ.



ನಾಗರಾಜ ರೆಡ್ಡಿ

ಸ್ಫೋಟಕಗಳನ್ನು ಸಾಗಿಸಿದ ವಾಹನದ ಚಾಲಕ ರಿಯಾಜ್ ಮತ್ತು ತಮಿಳುನಾಡಿನ ಸ್ಫೋಟ ತಜ್ಞ ಗಣೇಶ್‌ನನ್ನು ಬಂಧಿಸಲಾಗಿದೆ. ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಒಟ್ಟು ಏಳು ಆರೋಪಿಗಳನ್ನು ಬಂಧಿಸಿದಂತಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದ್ದಾರೆ.

ಮಧುಸೂದನ್ ರೆಡ್ಡಿ, ಪ್ರವೀಣ್, ರಾಘವೇಂದ್ರ ರೆಡ್ಡಿ ಮತ್ತು ವೆಂಕಟಶಿವಾ ರೆಡ್ಡಿ ಅವರನ್ನು ಈ ಮೊದಲೇ ಬಂಧಿಸಲಾಗಿದೆ. ಘಟನೆಯಲ್ಲಿ ಮೃತಪಟ್ಟ ಆರು ಜನ ಸೇರಿದಂತೆ ಒಟ್ಟು 15 ಆರೋಪಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಿರೇನಾಗವಲ್ಲಿಗೆ ಸಿಐಡಿ ತಂಡ : ಹಿರೇನಾಗವಲ್ಲಿ ಪ್ರಕರಣದ ಬಂಧಿತ ಆರೋಪಿಗಳನ್ನು ವಶಕ್ಕೆ ಪಡೆದಿರುವ ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಎಡಿಜಿಪಿ ಪಿ.ಎಸ್ ಸಂಧು ಮತ್ತು ಸಿಐಡಿ ಎಸ್.ಪಿ ರಾಹುಲ್ ಕುಮಾರ್ ನೇತೃತ್ವದ ಎರಡು ತಂಡಗಳು ಗುರುವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿವೆ.

4ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಎಲ್‌ಪಿಜಿ ಸಿಲಿಂಡರ್ ಬೆಲೆ ₹ 25 ಏರಿಕೆ

ನವದೆಹಲಿ (ಪಿಟಿಐ): ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಗುರುವಾರ ₹ 25 ಹೆಚ್ಚಳವಾಗಿದೆ. ಈ ಹೆಚ್ಚಳವು ಉಜ್ವಲಾ ಯೋಜನೆಯ ಫಲಾನುಭವಿಗಳಿಗೂ ಅನ್ವಯವಾಗುತ್ತದೆ. ಗುರುವಾರದ ಹೆಚ್ಚಳದಿಂದಾಗಿ ಫೆಬ್ರುವರಿಯಲ್ಲಿ ಒಟ್ಟು ಮೂರು ಬಾರಿ ಎಲ್‌ಪಿಜಿ ದರ ಹೆಚ್ಚಳ ಆದಂತಾಗಿದೆ.

14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆ ಬೆಂಗಳೂರಿನಲ್ಲಿ ಈಗ ₹ 797. ಬೆಂಗಳೂರಿನಲ್ಲಿ ಬುಧವಾರ ಎಲ್‌ಪಿಜಿ ಬೆಲೆ ₹ 772 ಆಗಿತ್ತು.

ಈ ತಿಂಗಳ 4ರಂದು ಎಲ್‌ಪಿಜಿ ಬೆಲೆಯನ್ನು ₹ 25 ಹೆಚ್ಚಿಸಲಾಗಿತ್ತು. ನಂತರ, 15ರಂದು ₹ 50 ಹೆಚ್ಚಿಸಲಾಯಿತು. ಈಗ ₹ 25 ಜಾಸ್ತಿಯಾಗಿದೆ. ಪರಿಣಾಮವಾಗಿ ಒಂದೇ ತಿಂಗಳಿನಲ್ಲಿ ಎಲ್‌ಪಿಜಿ ಬೆಲೆ ಒಟ್ಟು ₹ 100 ಏರಿಕೆ ಕಂಡಂತಾಗಿದೆ.

ದೇಶದೆಲ್ಲೆಡೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಮಾರುಕಟ್ಟೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಮಹಾನಗರಗಳು ಹಾಗೂ ಪ್ರಮುಖ ನಗರಗಳ ಗ್ರಾಹಕರಿಗೆ ಸಬ್ಸಿಡಿ ಸಿಗುತ್ತಿಲ್ಲ.

‘ದೂರದ ಪ್ರದೇಶಗಳ ಜನರಿಗೆ ಸಣ್ಣ ಮೊತ್ತವನ್ನು ಸಬ್ಸಿಡಿಯಾಗಿ ನೀಡಲಾಗುತ್ತಿದೆ. ಎಲ್‌ಪಿಜಿ ಸಿಲಿಂಡರ್ ಸಾಗಣೆಯ ಹೆಚ್ಚುವರಿ ವೆಚ್ಚವು ಅವರಿಗೆ ಹೊರೆಯಾಗದಿರಲಿ ಎಂಬ ಕಾರಣಕ್ಕೆ ಹೀಗೆ ಮಾಡಲಾಗುತ್ತಿದೆ’ ಎಂದು ತೈಲೋತ್ಪನ್ನಗಳ ಕಂಪನಿಯೊಂದರ ಅಧಿಕಾರಿಯೊಬ್ಬರು ತಿಳಿಸಿದರು.

ಗ್ರೀನ್‌ಕಾರ್ಡ್ ಮೇಲಿನ ನಿಷೇಧ ರದ್ದು: ಬೈಡನ್

ಸ್ಯಾನ್ ಡಿಯಾಗೊ (ಎಪಿ): ಗ್ರೀನ್ ಕಾರ್ಡ್ ವಿತರಣೆ ಹಾಗೂ ವಲಸೆ ನೀತಿಗೆ ಸಂಬಂಧಿಸಿದಂತೆ ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದಾಗ ಹೊರಡಿಸಿದ್ದ ಆದೇಶವನ್ನು ಅಧ್ಯಕ್ಷ ಜೋ ಬೈಡನ್ ಬುಧವಾರ ರದ್ದು ಮಾಡಿದ್ದಾರೆ.

ಬೈಡನ್ ಆಡಳಿತದ ಈ ಕ್ರಮದಿಂದ, ಎಚ್‌–1ಬಿ ವೀಸಾ ಪಡೆದು ಅಮೆರಿಕದಲ್ಲಿ ಉದ್ಯೋಗದಲ್ಲಿರುವ ಭಾರತೀಯರಿಗೆ ಅನುಕೂಲವಾಗಲಿದೆ. ಅದರಲ್ಲೂ, ಐಟಿ ಕ್ಷೇತ್ರದ ಅಮೆರಿಕದ ಕಂಪನಿಗಳಲ್ಲಿ ಭಾರತೀಯರು ಭಾರಿ ಸಂಖ್ಯೆಯಲ್ಲಿದ್ದಾರೆ.

ನರೇಂದ್ರ ಮೋದಿ ಅಂಗಳದಲ್ಲಿ ಭಾರತಕ್ಕೆ ಭರ್ಜರಿ ಜಯ • ಅಶ್ವಿನ್ ಮತ್ತೊಂದು ಮೈಲುಗಲ್ಲು

ವಿಶ್ವ ಟೆಸ್ಟ್: ಫೈನಲ್ ಹೊಸ್ತಿಲಲ್ಲಿ ಭಾರತ

ಅಹಮದಾಬಾದ್: ಸ್ಪಿನ್ ಜೋಡಿ ಆರ್. ಅಶ್ವಿನ್ ಮತ್ತು ಅಕ್ಷರ್ ಪಟೇಲ್ ಅವರ ಮೋಡಿಯ ಮುಂದೆ ಇಂಗ್ಲೆಂಡ್ ತಂಡವು ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟೆಸ್ಟ್‌ನಲ್ಲಿ 10 ವಿಕೆಟ್‌ಗಳಿಂದ ಸೋತಿತು.

ಇದರೊಂದಿಗೆ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಟೂರ್ನಿಯ ಫೈನಲ್ ಹೊಸ್ತಿಲಿಗೆ ಬಂದು ನಿಂತಿದೆ. ಈ ಸರಣಿಯಲ್ಲಿ ಉಳಿದಿರುವ ಇನ್ನೊಂದು ಪಂದ್ಯದಲ್ಲಿ ಡ್ರಾ ಸಾಧಿಸಿದರೂ ಪ್ರವೇಶ ಖಚಿತವಾಗಲಿದೆ.



ಆರ್. ಅಶ್ವಿನ್

2 ಭಾರತವು ಎರಡು ದಿನದಾಟಗಳಲ್ಲಿ ಜಯಿಸಿದ ಎರಡನೇ ಪಂದ್ಯ ಇದು.

11 ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಈ ಪಂದ್ಯದಲ್ಲಿ ಗಳಿಸಿದ ಒಟ್ಟು ವಿಕೆಟ್‌ಗಳು. ಅವರು ಎರಡೂ ಇನಿಂಗ್ಸ್‌ಗಳಲ್ಲಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದರು.



ಅಕ್ಷರ್ ಪಟೇಲ್

2 ಭಾರತವು ಇದುವರೆಗೆ ಆಡಿರುವ ಮೂರು ಹಗಲು ರಾತ್ರಿ ಟೆಸ್ಟ್‌ಗಳಲ್ಲಿ ಜಯಿಸಿದ ಎರಡನೇ ಪಂದ್ಯ ಇದು

5 ಇಂಗ್ಲೆಂಡ್ ತಂಡದ ನಾಯಕ ಜೋರೂಟ್ 8 ರನ್ ಕೊಟ್ಟು ಐದು ವಿಕೆಟ್ ಕಬಳಿಸಿದರು

17 ಎರಡನೇ ದಿನದ ಆಟದಲ್ಲಿ ಪತನವಾದ ವಿಕೆಟ್‌ಗಳು (ಭಾರತ 7, ಇಂಗ್ಲೆಂಡ್ 10)

400ಕ್ಕೂ ಹೆಚ್ಚು ವಿಕೆಟ್ ಗಳಿಸಿದ ಭಾರತೀಯ ಬೌಲರ್‌ಗಳು

ಆಟಗಾರ	ಪಂದ್ಯ	ವಿಕೆಟ್	ಶ್ರೇಷ್ಠ (ಇನಿಂಗ್ಸ್)
ಅನಿಲ್ ಕುಂಬ್ಳೆ	132	619	74ಕ್ಕೆ10
ಕಪಿಲ್ ದೇವ್	131	434	83ಕ್ಕೆ9
ಹರಭಜನ್ ಸಿಂಗ್	103	417	84ಕ್ಕೆ8
ಆರ್. ಅಶ್ವಿನ್	77	401	59ಕ್ಕೆ7

22 ತವರಿನಲ್ಲಿ ಭಾರತ ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಜಯಿಸಿದ ಪಂದ್ಯಗಳು. ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ ತಂಡವು 21 ಪಂದ್ಯಗಳಲ್ಲಿ ಗೆದ್ದಿತ್ತು

ಎರಡನೇ ದಿನ ಮುಗಿದ ಟೆಸ್ಟ್ ಪಂದ್ಯಗಳು (ಭಾರತ)

ವರ್ಷ	ಎದುರಾಳಿ	ಸ್ಥಳ
14 ಜೂನ್ 2018	ಅಫ್ಗಾನಿಸ್ತಾನ	ಬೆಂಗಳೂರು
25 ಫೆಬ್ರುವರಿ 2021	ಇಂಗ್ಲೆಂಡ್	ಅಹಮದಾಬಾದ್

ತಂಡ	ಮೊದಲ ಇನಿಂಗ್ಸ್	ಎರಡನೇ ಇನಿಂಗ್ಸ್
ಇಂಗ್ಲೆಂಡ್	112 (48.4 ಓವರ್‌ಗಳಲ್ಲಿ)	81 (30.4 ಓವರ್‌ಗಳಲ್ಲಿ)
ಭಾರತ	145 (53.2 ಓವರ್‌ಗಳಲ್ಲಿ)	ವಿಕೆಟ್ ನಷ್ಟವಿಲ್ಲದೇ 49 (7.4 ಓವರ್‌ಗಳಲ್ಲಿ)

ಫಲಿತಾಂಶ

ಭಾರತ ತಂಡಕ್ಕೆ 10 ವಿಕೆಟ್‌ಗಳಿಂದ ಜಯ

ಸರಣಿಯಲ್ಲಿ 2–1ರಿಂದ ಮುನ್ನಡೆ

ಪಂದ್ಯಶ್ರೇಷ್ಠ: ಅಕ್ಷರ್ ಪಟೇಲ್

ವಿವರ 11

ದ್ವಿಚಕ್ರ ವಾಹನಗಳ ಹರಾಜು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೆ.ಆರ್.ಪುರ ಠಾಣೆ ವ್ಯಾಪ್ತಿಯ ವಾರಸುದಾರರಿಲ್ಲದ ಒಟ್ಟು 96 ದ್ವಿಚಕ್ರ ವಾಹನಗಳ ಹರಾಜು ಪ್ರಕ್ರಿಯೆ ನಡೆಯಲಿದೆ.

ಮಾರ್ಚ್ 2 ರಂದು ಬೆಳಿಗ್ಗೆ 10 ಗಂಟೆಗೆ ಜ್ಯೋತಿಪುರದ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುತ್ತದೆ.

ಸಾರಿಗೆ ನೌಕರರ ಬೇಡಿಕೆ ಪ್ರತಿಭಟನೆಯ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರಿಗೆ ನೌಕರರ ಬೇಡಿಕೆಗಳನ್ನು ಈಡೇರಿಸುವ ಇಚ್ಛಾಶಕ್ತಿ ರಾಜ್ಯ ಸರ್ಕಾರಕ್ಕೆ ಇದ್ದಂತಿಲ್ಲ. ಹೀಗಾಗಿ ನನ್ನ ಹೆಸರನ್ನು ಮುಂದಿಟ್ಟುಕೊಂಡು ಜವಾಬ್ದಾರಿಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದೆ' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಶುಕ್ರವಾರ ಹೇಳಿದರು.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದ ನಾಗರಿಕರ ಪ್ರಶ್ನೆಗಳಿಗೆ ಕೇಂದ್ರ ಪ್ರಭುತ್ವ ಆದಷ್ಟು ಉತ್ತರಿಸಬೇಕು. ಅದು ಸರ್ಕಾರದ ಕರ್ತವ್ಯ. ಕುಂಟು ನೆಪಗಳನ್ನು ಹೇಳುತ್ತಾ ದಿನದೂಡುವುದು ಸರಿಯಲ್ಲ. ಅದು ಸರ್ಕಾರದ ಪಲಾಯನವಾದ ಎತ್ತಿ ತೋರಿಸುತ್ತದೆ' ಎಂದರು.

'ಸಾರಿಗೆ ಮುಷ್ಕರದ ಸಮಯದಲ್ಲಿ ನೌಕರರು ಒಟ್ಟು ಹತ್ತು ಬೇಡಿಕೆಗಳನ್ನು ಮುಂದಿಟ್ಟಿದ್ದರು. ಈ ಪೈಕಿ ಸಾರಿಗೆ ನೌಕರರನ್ನು ಸರ್ಕಾರಿ ನೌಕರರೆಂದು ಘೋಷಿಸಲು ಸಾಧ್ಯವಿಲ್ಲ ಎಂದು ಸರ್ಕಾರ ಹೇಳಿತ್ತು. ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ವಿಸ್ತರಿಸುವುದು ಸೇರಿದಂತೆ ಇತರ ಒಂಬತ್ತು ಬೇಡಿಕೆಗಳನ್ನು ಈಡೇರಿಸುವುದಾಗಿ ಸಾರಿಗೆ ಸಚಿವರು ಲಿಖಿತ ಭರವಸೆ ನೀಡಿದ್ದರು. ಅದರಂತೆ ನಡೆದುಕೊಂಡಿಲ್ಲ' ಎಂದು ದೂರಿದರು.

'ನೌಕರರ ಐದು ಬೇಡಿಕೆಗಳನ್ನು ಈಡೇರಿಸಲಾಗಿದೆ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಪ್ರಕಟಣೆ ಹೊರಡಿಸಿದ್ದಾರೆ. ಅದರೆ, ವಾಸ್ತವವೇ ಬೇರೆ. ನಾವು ಪ್ರತಿಭಟನೆ ಕೈಬಿಟ್ಟು 75 ದಿನಗಳಾಗಿವೆ. ಈ ಅವಧಿಯಲ್ಲಿ ನೌಕರರ ಒಂದೇ ಒಂದು ಬೇಡಿಕೆಯನ್ನೂ ಈಡೇರಿಸಿಲ್ಲ' ಎಂದರು.

'ಸರ್ಕಾರಕ್ಕೆ ನಾವು ನೀಡಿರುವ ಗಡುವು ಮಾರ್ಚ್ 15ಕ್ಕೆ ಮುಕ್ತಾಯಗೊಳ್ಳಲಿದೆ. ಅಷ್ಟರೊಳಗೆ ನಮ್ಮ ಬೇಡಿಕೆಗಳು ಈಡೇರಿದಿದ್ದರೆ ಮತ್ತೆ ಪ್ರತಿಭಟನೆಯ ಹಾದಿ ಹಿಡಿಯುವುದು ಅನಿವಾರ್ಯ. ಸರ್ಕಾರದ ಇದಕ್ಕೆ ಆಸ್ಪದ ನೀಡಬಾರದು. ವೇತನ ಪರಿಷ್ಕರಣೆಯ ವಿಚಾರ ಬಂದಾಗಲೆಲ್ಲ ನಮ್ಮ ಮತ್ತು ಸರ್ಕಾರದ ನಡುವೆ ಘರ್ಷಣೆ ಶುರುವಾಗುತ್ತದೆ.ನಮಗೂ ಆರನೇ ವೇತನ ಆಯೋಗದ ಶಿಫಾರಸ್ಸನ್ನು ವಿಸ್ತರಿಸುವುದರಿಂದ ಈ ಸಮಸ್ಯೆಗೆ ಕೊನೆ ಹಾಡಬಹುದು. ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಿಸಬೇಕು' ಎಂದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯ ಘಟಕ ಅಧ್ಯಕ್ಷ ಆರ್.ಚಂದ್ರಶೇಖರ್ ಹೇಳಿದರು.

ರೋಗ ನಿರೋಧಕ ಶಕ್ತಿ ವೃದ್ಧಿಗೆ ಹಣ್ಣು ಸೇವಿಸಿ: ಕಟಾರಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್-19 ಕಾಲಘಟ್ಟದಲ್ಲಿ ಎಲ್ಲರೂ ರೋಗನಿರೋಧಕ ಶಕ್ತಿಯ ಬಗ್ಗೆ ಹೆಚ್ಚು ಮಾತನಾಡುತ್ತಿದ್ದಾರೆ. ಹಣ್ಣು ಮತ್ತು ತರಕಾರಿಗಳ ಯಥೇಚ್ಛ ಸೇವನೆಯಿಂದ ದೇಹದೊಳಗೆ ರೋಗನಿರೋಧಕ ಶಕ್ತಿ ವೃದ್ಧಿಯಾಗುತ್ತದೆ' ಎಂದು ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ ಗುರುವಾರ ಹೇಳಿದರು.

ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರತಿವರ್ಷವೂ ರೈತರು ಹೊಸ ತಳಿಯ ಹಣ್ಣುಗಳನ್ನು ಬೆಳೆದು ಮಾರುಕಟ್ಟೆಗೆ ತರುತ್ತಿದ್ದಾರೆ. ಆ ಹಣ್ಣುಗಳ ವೈಶಿಷ್ಟ್ಯದ ಬಗ್ಗೆ ಜನರಿಗೆ ಅರಿವು ಮೂಡಿಸುವುದೂ ಈ ಮೇಳದ ಉದ್ದೇಶ' ಎಂದರು.

'ಹಾಪ್‌ಕಾಮ್ಸ್, ರೈತರಿಂದ ನೇರವಾಗಿ ಹಣ್ಣುಗಳನ್ನು ಖರೀದಿಸುವುದರಿಂದ ಬೆಳೆಗಾರರಿಗೆ ಹೆಚ್ಚಿನ ಲಾಭವಾಗುತ್ತದೆ. ಜೊತೆಗೆ ಮಾರುಕಟ್ಟೆಯಲ್ಲಿ ಯಾವ ತಳಿಯ ಹಣ್ಣುಗಳಿಗೆ ಬೇಡಿಕೆ ಇದೆ ಎಂಬುದು ಇತರರಿಗೂ ಮನದಟ್ಟಾಗುತ್ತದೆ. ಆಗ ಅವರು ಆ ತಳಿಯ ಹಣ್ಣುಗಳನ್ನೇ ಬೆಳೆದು ಹೆಚ್ಚಿನ ಲಾಭ ಗಳಿಸಲು ಮೇಳ ಸಹಕಾರಿಯಾಗಿದೆ' ಎಂದೂ ಹೇಳಿದರು.



ಮೇಳಕ್ಕೆ ಭೇಟಿ ನೀಡಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಹಳದಿ ಕಲ್ಲಂಗಡಿ ಹಣ್ಣನ್ನು ಸವಿದರು –ಪ್ರಜಾವಾಣಿ ಚಿತ್ರ

ಚಿಕ್ಕಪೇಟೆ ಶಾಸಕ ಉದಯ್ ಬಿ.ಗರುಡಾಚಾರ್ 'ಹಳದಿ ಕಲ್ಲಂಗಡಿ ಈ ಬಾರಿಯ ಮೇಳದ ಆಕರ್ಷಣೆ. ಇದು ಆರೋಗ್ಯಕ್ಕೂ ಒಳ್ಳೆಯದು. ಮುಂದಿನ ವರ್ಷ ಈ ಮೇಳವನ್ನು ಇನ್ನೂ ಚೆನ್ನಾಗಿ ಮಾಡಬೇಕು. ಅದಕ್ಕೆ ಅಗತ್ಯವಿರುವ ಸಹಕಾರ ನೀಡಲು ಬದ್ಧನಾಗಿದ್ದೇನೆ' ಎಂದರು.

ನಗರದಲ್ಲಿ ಇಂದು

ಯುವ ಹಕ್ಕುಗಳ ಸಮಾಲೋಚನೆ: ಉದ್ಘಾಟನೆ: ಡಾ. ಸುಧೀರ್ ಕೃಷ್ಣಸ್ವಾಮಿ, ಆಯೋಜನೆ: ಸಂವಾದ, ಸ್ಥಳ: ದಿ ಸಿಟಡೆಲ್ ಹೋಟೆಲ್, ಆನಂದರಾವ್ ವೃತ್ತ, ಬೆಳಿಗ್ಗೆ 9.30

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಶಿಬಿರ: ಪಂಡಿತ ಪರಮೇಶ್ವರ ಹೆಗಡೆ, ಅಧ್ಯಕ್ಷತೆ: ಆನೂರು ಅನಂತಕೃಷ್ಣ ಶರ್ಮ, ಆಯೋಜನೆ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10



ಅನಂತಕೃಷ್ಣ ಶರ್ಮ

ಸಮರ್ಥನಂ ಭವನ ಉದ್ಘಾಟನೆ: ಅತಿಥಿಗಳು: ಸಚಿವೆ ಶಶಿಕಲಾ ಜೊಲ್ಲೆ, ಶಾಸಕರಾದ ರಾಮಲಿಂಗಾ ರೆಡ್ಡಿ, ಸೌಮ್ಯಾ ರೆಡ್ಡಿ, ಎಸ್.ಕೆ. ನಟರಾಜ್, ಹರೀಶ್ ಪಾಂಡೆ, ಎಸ್. ಶಿವರಾಮ್, ಡಾ.ವಿ. ಮುನಿರಾಜು, ಎನ್. ಚಂದ್ರಶೇಖರ ರಾಜು, ಡಾ. ಮಹಾಂತೇಶ್ ಜಿ. ಕಿವದಾಸಣ್ಣನವರ್, ಆಯೋಜನೆ ಹಾಗೂ ಸ್ಥಳ: ಸಮರ್ಥನಂ ಅಂಗವಿಕಲ ಸಂಸ್ಥೆ, ಜೆ.ಪಿ. ನಗರ, ಬೆಳಿಗ್ಗೆ 10.30

ಸನ್ಮಾನ ಗೌರವ: ಎ.ಪಿ. ಕುಮಾರ್, ಅಧ್ಯಕ್ಷತೆ: ಗೀತಾ ರಾಮಾನುಜಂ, ಸನ್ಮಾನಿಸುವವರು: ಸುಧೀಂದ್ರ ರಾವ್, ಭಾಷಣ: ಪುಟ್ಟಣ್ಣಯ್ಯ ಎಸ್., ಆಯೋಜನೆ: ಜಿ.ಆರ್. ಶಿಕ್ಷಣ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಕಲ್ಪತರು ಸಾಂಸ್ಕೃತಿಕ ಸಾಮಾಜಿಕ ಮತ್ತು ಕ್ರೀಡಾ ಟ್ರಸ್ಟ್, ಸ್ಥಳ: ಜಿ.ಆರ್. ಶಿಕ್ಷಣ ಸಂಸ್ಥೆ ಸಭಾಂಗಣ, ಅಗರ, ಬೆಳಿಗ್ಗೆ 11.30

ಪುರಂದರದಾಸರ ಆರಾಧನಾ ಮಹೋತ್ಸವ: ಗುರುರಾಘವೇಂದ್ರ ಸಂಸ್ಮರಣೆ ಪ್ರಶಸ್ತಿ ಪ್ರದಾನ: ಅರುಣ್ ಕುಮಾರ್ ಶಿವಮೊಗ್ಗ, ಅಧ್ಯಕ್ಷತೆ: ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ, ಮುಖ್ಯ ಅತಿಥಿ: ಮಂಜುಳಾ ರಾಮಮೂರ್ತಿ, ಆಯೋಜನೆ: ರಾಘವೇಂದ್ರ ಸಂಗೀತಾ ಸೇವಾ ಪ್ರತಿಷ್ಠಾನ, ಸ್ಥಳ: ಸತ್ಯ ಗಣಪತಿ ದೇವಸ್ಥಾನ, ಪುಟ್ಟೇನಹಳ್ಳಿ ಕೆರೆ, ಜೆ.ಪಿ. ನಗರ, ಸಂಜೆ 5.30



ಅರುಣ್ ಕುಮಾರ್

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಡಾ. ಬದ್ರಿನಾಥ್ ಅಥಣಿ, ಅತಿಥಿಗಳು: ಎಂ.ಆರ್. ಸಂಪಂಗಿರಾಮಯ್ಯ, ಎಂ.ಆರ್. ಆನಂದರಾಮ್, ಎಂ.ಆರ್. ಶ್ರೀನಿವಾಸಮೂರ್ತಿ, ಎಂ.ಆರ್. ಜಯರಾಮ್, ಆಯೋಜನೆ: ರಾಮಯ್ಯ ವೈದ್ಯಕೀಯ ಕಾಲೇಜು, ಸ್ಥಳ: ದ್ವಾರಕಾ ಸಮಾವೇಶ ಸಭಾಂಗಣ, ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ಹತ್ತಿರ, ಮಧ್ಯಾಹ್ನ 3

ಕೋವಿಡ್ ತಗುಲಿದವರ ಸಂಖ್ಯೆ 9.50 ಲಕ್ಷದತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 453 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.50 ಲಕ್ಷದತ್ತ (9,49,636) ಸಾಗಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಹಾಗೂ ಉಡುಪಿ, ಮಂಡ್ಯ ಹಾಗೂ ಕಲಬುರ್ಗಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,316ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 947 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 9.31 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 5,576ಕ್ಕೆ ಇಳಿಕೆ ಕಂಡಿದೆ. ಸೋಂಕಿತರಲ್ಲಿ 121 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಒಂದು ದಿನದ ಅವಧಿಯಲ್ಲಿ 68 ಸಾವಿರ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.85 ಕೋಟಿ ಮಂದಿ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಬ್ರಿಟನ್‌ನಿಂದ ಮತ್ತೆ 15 ಮಂದಿ ಬಂದಿದ್ದಾರೆ. ಬೆಂಗಳೂರಿನಲ್ಲಿ 271 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.04 ಲಕ್ಷ ದಾಟಿದೆ.

ಕೋವಿಡ್ ಲಸಿಕೆ: ಅಡ್ಡ ಪರಿಣಾಮ 23ಕ್ಕೆ ಏರಿಕೆ

ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆದವರಲ್ಲಿ ಮತ್ತೊಬ್ಬರಿಗೆ ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿರುವುದು ಗುರುವಾರ ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಅಡ್ಡ ಪರಿಣಾಮ ಎದುರಿಸಿದವರ ಸಂಖ್ಯೆ 23ಕ್ಕೆ ತಲುಪಿದೆ.

ಉಡುಪಿಯ 46 ವರ್ಷದ ಶುಶ್ರೂಷಕಿ ಫೆ.22ರಂದು ಲಸಿಕೆ ಪಡೆದುಕೊಂಡಿದ್ದರು. ಅವರಿಗೆ ಅದೇ ದಿನ ವಾಂತಿ, ತಲೆನೋವು ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಹೀಗಾಗಿ ಖಾಸಗಿ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದರು. ಸಮಸ್ಯೆಗಳು ಮುಂದುವರಿದ ಕಾರಣ ಅದೇ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಗುರುವಾರ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ 19,062 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು 61,517 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ ಶೇ 31ರಷ್ಟು ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ.


ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 7,28,349 ಆರೋಗ್ಯ ಕಾರ್ಯಕರ್ತರಲ್ಲಿ 4,44,509 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇದರಿಂದ ಶೇ 61ರಷ್ಟು ಗುರಿ ಸಾಧ್ಯವಾಗಿದೆ. ಇವರಲ್ಲಿ 1.89 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.


ಬೆಳ್ಳಂದೂರು: ಸೋಂಕಿತರ ಸಂಖ್ಯೆ 27ಕ್ಕೆ ಹೆಚ್ಚಳ

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಎಸ್‌ಜೆಆರ್ ವಾಟರ್‌ಮಾರ್ಕ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಮತ್ತೊಬ್ಬ ವ್ಯಕ್ತಿ ಕೋವಿಡ್ ಹೊಂದಿರುವುದು ಗುರುವಾರ ದೃಢಪಟ್ಟಿದೆ. ಇದರೊಂದಿಗೆ ಈ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಕೋವಿಡ್ ಹೊಂದಿರುವವರ ಸಂಖ್ಯೆ 27ಕ್ಕೆ ಏರಿಕೆ ಕಂಡಿದೆ.

ಈ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಬುಧವಾರದವರೆಗೆ ಕೋವಿಡ್ ಪರೀಕ್ಷೆಗೊಳಗಾಗಿದ್ದ 1055 ಮಂದಿಯಲ್ಲಿ 26 ಮಂದಿ ಸೋಂಕು ಹೊಂದಿದ್ದರು. ಬುಧವಾರ 85 ಮಂದಿಯ ಮೂಗಿನ ದ್ರವದ ಮಾದರಿ ಸಂಗ್ರಹಿಸಲಾಗಿತ್ತು.

ಅಪಾರ್ಟ್‌ಮೆಂಟ್ ಸಮುಚ್ಚಯವನ್ನು ಕಂಟೈನ್‌ಮೆಂಟ್ ಪ್ರದೇಶ ಎಂದು ಬಿಬಿಎಂಪಿ ಗುರುತಿಸಿದೆ. ಸೋಂಕು ಹರಡದಂತೆ ತಡೆಯಲು ಕಠಿಣ ಕ್ರಮಗಳನ್ನು ಕೈಗೊಂಡಿದೆ.





ಅಮೆರಿಕದ ಚಿಂತಕ ಸ್ಯಾಮ್ ಫುಲ್‌ವುಡ್ ಅಭಿಮತ

ಸಂಪತ್ತಿನ ಅಂತರವೇ ಜನಾಂಗೀಯ ದೌರ್ಜನ್ಯಕ್ಕೆ ಮೂಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ಕಪ್ಪು ಜನರ ಮೇಲೆ ನಡೆಯುವ ದೌರ್ಜನ್ಯ ಮೂಲವೇ ಸಂಪತ್ತಿನ ಹಂಚಿಕೆಯಲ್ಲಿರುವ ಅಂತರ. ನಿರುದ್ಯೋಗ, ವಸತಿ ಸಮಸ್ಯೆ ಎಲ್ಲವೂ ಜನಾಂಗೀಯ ತಾರತಮ್ಯಕ್ಕೆ ಪ್ರಚೋದನೆ ನೀಡುತ್ತಿವೆ ಎಂದು ಸೆಂಟರ್ ಫಾರ್ ಅಮೆರಿಕನ್ ಪ್ರೋಗ್ರೆಸ್‌ನ ರೇಸ್ ಅಂಡ್ ಎತ್ನಿಸಿಟಿ ಅಧ್ಯಯನ ವಿಭಾಗದ ಉಪಾಧ್ಯಕ್ಷ ಸ್ಯಾಮ್ ಫುಲ್‌ವುಡ್ ಹೇಳಿದರು.

ಚೆನ್ನೈನ ಅಮೆರಿಕನ್ ಕಾನ್ಸುಲೇಟ್ ಜನರಲ್ ನೀಲಂ ಫೌಂಡೇಶನ್, ದಲಿತ್ ಇಂಟಲೆಕ್ಚುಯಲ್ ಕಲೆಕ್ಟಿವ್, ಸಂಸದೀಯ ವ್ಯವಹಾರಗಳ ಸಂಸ್ಥೆ, ಬಿ–ಪ್ಯಾಕ್ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ, ‘ಅಮೆರಿಕದ ಪ್ರಜಾಪ್ರಭುತ್ವ ಮತ್ತು ಜನಾಂಗೀಯವಾದದ ತಪ್ಪು ಗೆರೆಗಳು: 2020ರ ಘಟನೆಗಳ ವಿಶ್ಲೇಷಣೆ’ ಕುರಿತ ವೆಬಿನಾರ್‌ನಲ್ಲಿ ಅವರು ವಿಷಯ ಮಂಡಿಸಿದರು.

‘ಅಮೆರಿಕದಲ್ಲಿರುವ ಶ್ರೀಮಂತರು ಮತ್ತು ಬಡವರ ನಡುವಿನ ಅಂತರವೇ ಜನಾಂಗೀಯ ವಾದದ ಮೂಲ’ ಎಂದರು.

ಅಮೆರಿಕದಲ್ಲಿ ಜನಾಂಗೀಯ ತಾರತಮ್ಯಕ್ಕೆ ದೀರ್ಘವಾದ ಇತಿಹಾಸ ವಿದೆ. 2020ರಲ್ಲಿ ನಡೆದ ಜಾರ್ಜ್ ಫ್ಲಾಯ್ಡ್ ಕೊಲೆ ಪ್ರಕರಣ ಅದರ ಮುಂದುವರಿದ ಭಾಗ. ಪ್ರಜೆಗಳ ವ್ಯಕ್ತಿಗತ ನಡವಳಿಕೆಗಳಲ್ಲಿ ಬದಲಾವಣೆ ಆದ ಮಾತ್ರಕ್ಕೆ ಜನಾಂಗೀಯ ತಾರತಮ್ಯ ಮತ್ತು ದೌರ್ಜನ್ಯ ಕೊನೆಯಾಗುತ್ತದೆ ಎಂದು ಹೇಳಲಾಗದು. ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕು. ಸಂಪತ್ತಿನ ಸಮಾನ ಹಂಚಿಕೆ ಮತ್ತು ಸಾಂಸ್ಕೃತಿಕ ಪರಿವರ್ತನೆಗಳ ಮೂಲಕವೇ ಅದನ್ನು ಸಾಧಿಸಲು ಸಾಧ್ಯ ಎಂದು ಪ್ರತಿಪಾದಿಸಿದರು.

ಈಗ ಯಾವುದೇ ದೇಶದಲ್ಲಿ ನಡೆಯುವ ಜನಾಂಗೀಯ ತಾರತಮ್ಯದ ಪ್ರಕರಣಗಳು ಆ ರಾಷ್ಟ್ರದ ಆಂತರಿಕ ವಿಚಾರಗಳಾಗಿ ಉಳಿದಿಲ್ಲ. ಜಾರ್ಜ್ ಫ್ಲಾಯ್ಡ್ ಕೊಲೆಯ ವಿರುದ್ಧ ಭಾರತವೂ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಪ್ರತಿಭಟನೆ ನಡೆದಿದೆ. ಬಿಳಿಯರು ಮತ್ತು ಇತರ ವರ್ಣೀಯರೂ ಕೃತ್ಯವನ್ನು ವಿರೋಧಿಸಿದ್ದಾರೆ. ಜನವರಿ 6ರಂದು ಕ್ಯಾಪಿಟಲ್ ಮೇಲೆ ನಡೆದ ದಾಳಿಯ ವಿಚಾರದಲ್ಲೂ ಅಂತಹದ್ದೇ ಪ್ರತಿರೋಧ ವ್ಯಕ್ತವಾಗಿದೆ ಎಂದು ಫುಲ್‌ವುಡ್ ಹೇಳಿದರು.

ಹೊಸ ನಿರೀಕ್ಷೆ: ಅಮೆರಿಕದ ನೂತನ ಅಧ್ಯಕ್ಷ ಜೋ ಬೈಡನ್ ಮತ್ತು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಬದಲಾವಣೆಯ ನಿರೀಕ್ಷೆ ಮೂಡಿಸಿದ್ದಾರೆ. ಎಲ್ಲ ಅಮೆರಿಕನ್ನರ ಪ್ರತಿನಿಧಿಗಳಾಗಿ ಕೆಲಸ ಮಾಡಿಸುವುದಾಗಿ ಘೋಷಿಸಿದ್ದಾರೆ. ವರ್ತಮಾನದ ಸವಾಲುಗಳಿಗೆ ಮುಖಾಮುಖಿಯಾಗುವುದಕ್ಕೆ ಜನರನ್ನು ಸಜ್ಜುಗೊಳಿಸುವ ಸವಾಲನ್ನು ಅವರು ಎದುರಿಸಬೇಕಿದೆ. ಕಪ್ಪು ವರ್ಣೀಯರ ಕುರಿತು ಬಿಳಿಯರಲ್ಲಿ ಇರುವ ಅಪನಂಬಿಕೆ, ಸಂಶಯ ದೂರ ಮಾಡುವುದು ಅವರ ಮುಂದಿರುವ ದೊಡ್ಡ ಕೆಲಸ ಎಂದರು.

ಚೆನ್ನೈ ಅಮೆರಿಕನ್ ಕಾನ್ಸುಲೇಟ್‌ನ ಪ್ರಚಾರ ಅಧಿಕಾರಿ ಆ್ಯನ್ನೆ ಲೀ ಶೇಷಾದ್ರಿ ಸಂವಾದ ನಿರ್ವಹಣೆ ಮಾಡಿದರು. ಬಿ– ಪ್ಯಾಕ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರೇವತಿ ಅಶೋಕ್, ತಿರುವನಂತಪುರದ ಸಂಸದೀಯ ವ್ಯವಹಾರಗಳ ಸಂಸ್ಥೆಯ ಮಹಾನಿರ್ದೇಶಕ ಡಿಂಪಿ ವಿ. ದಿವಾಕರನ್ ಸಂವಾದದಲ್ಲಿ ಪಾಲ್ಗೊಂಡಿದ್ದರು.



ಕಲೋತ್ಸವ ಟ್ರಸ್ಟ್ ವತಿಯಿಂದ ಎನ್‌ಆರ್‌ಕಾಲೊನಿಯ ಸಿ.ಅಶ್ವತ್ಥ್ ಕಲಾಭವನದಲ್ಲಿ ಹಮ್ಮಿಕೊಂಡಿದ್ದ ಟ್ರಸ್ಟ್‌ನ ಉದ್ಘಾಟನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಲಾವಿದರು ‘ಶ್ರೀಕೃಷ್ಣ ಸಂಧಾನ’ ಹಾಸ್ಯ ನಾಟಕ ಪ್ರದರ್ಶಿಸಿದರು

₹ 30 ಕೋಟಿ ತೆರಿಗೆ ಬಾಕಿ ಉಳಿಸಿಕೊಂಡ ಮಂತ್ರಿ ಮಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂತ್ರಿ ಮಾಲ್ ಬಿಬಿಎಂಪಿಗೆ ₹ 30 ಕೋಟಿ ತೆರಿಗೆ ಬಾಕಿ ಉಳಿಸಿಕೊಂಡಿದೆ. ಬಾಕಿ ತೆರಿಗೆ ಪಾವತಿಸುವಂತೆ ಬಿಬಿಎಂಪಿಯ ಪಶ್ಚಿಮ ವಲಯದ ಕಂದಾಯ ವಿಭಾಗದ ಉಪಾಯುಕ್ತರು ಸಂಸ್ಥೆಯ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

‘ಮಂತ್ರಿ ಮಾಲ್ ಮೂರು ವರ್ಷಗಳಿಂದ ₹ 30 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದೆ. ಈ ಮಾಲ್‌ನಲ್ಲಿರುವ ಮಳಿಗೆಗಳ ಮಾಲೀಕರಿಗೆ ಕಳೆದ ವಾರ ನೋಟಿಸ್ ನೀಡಿದ್ದೆವು. ಬುಧವಾರ ಮಳಿಗೆಗಳಿಗೆ ತೆರಳಿ ತೆರಿಗೆ ಪಾವತಿಸುವಂತೆ ಮತ್ತೊಮ್ಮೆ ಸೂಚನೆ ನೀಡಿದ್ದೇವೆ. ಇನ್ನು ವಾರದೊಳಗೆ ಬಾಕಿ ತೆರಿಗೆ ಪಾವತಿಸದೇ ಹೋದರೆ ಮಾಲ್‌ನಲ್ಲಿರುವ ಎಲ್ಲ ಮಳಿಗೆಗಳಿಗೆ ಬೀಗಮುದ್ರೆ ಹಾಕುವುದಾಗಿ ಎಚ್ಚರಿಕೆ ನೀಡಿದ್ದೇವೆ’ ಎಂದು ಪಶ್ಚಿಮ ವಲಯದ ಉಪಾಯುಕ್ತ ಪ್ರಸನ್ನ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಹಿಂದೆ ₹ 10 ಕೋಟಿ ಮೊತ್ತದ ಚೆಕ್‌ಗಳನ್ನು ಎರಡು ಬಾರಿ ಸಲ್ಲಿಸಿದ್ದರು. ಆದರೆ, ಅವರ ಖಾತೆಯಲ್ಲಿ ಹಣವಿಲ್ಲದ ಕಾರಣ ಆ ಎರಡೂ ಚೆಕ್‌ಗಳೂ ಬೌನ್ಸ್ ಆಗಿದ್ದವು’ ಎಂದೂ ಅವರು ಮಾಹಿತಿ ನೀಡಿದರು.

ಒಂದೇ ದಿನ 16 ಸಾವಿರಕ್ಕೂ ಹೆಚ್ಚು ಪ್ರಕರಣ

ನವದೆಹಲಿ: ಕೋವಿಡ್–19 ಪ್ರಕರಣಗಳ ಸಂಖ್ಯೆ ದೇಶದಲ್ಲಿ ಮತ್ತೆ ಏರಿಕೆ ಆಗುತ್ತಿದ್ದು, ಗುರುವಾರ ಒಂದೇ ದಿನ 16,738 ಪ್ರಕರಣಗಳು ದಾಖಲಾಗಿದ್ದು, 138 ಜನರು ಮೃತಪಟ್ಟಿದ್ದಾರೆ. 40 ದಿನಗಳ ಬಳಿಕ ಒಂದೇ ದಿನದಲ್ಲಿ 16 ಸಾವಿರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ವಾರದಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿ ಸಾಗುತ್ತಿದೆ. ಮಹಾರಾಷ್ಟ್ರದಲ್ಲಿ ಒಂದೇ ದಿನದಲ್ಲಿ 6,600 ಪ್ರಕರಣಗಳು ದೃಢಪಟ್ಟಿವೆ.

ಪ್ರತಿ ದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಾಣಿಸಿಕೊಂಡಿರುವ ಮಹಾರಾಷ್ಟ್ರ, ಕೇರಳ, ಪಂಜಾಬ್, ತಮಿಳುನಾಡು, ಗುಜರಾತ್, ಮಧ್ಯಪ್ರದೇಶ, ಕರ್ನಾಟಕ, ಪಶ್ಚಿಮ ಬಂಗಾಳ, ಛತ್ತೀಸಗಡ ರಾಜ್ಯಗಳಿಗೆ ಮತ್ತು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ ಕೇಂದ್ರ ಆರೋಗ್ಯ ಸಚಿವಾಲಯವು ತಜ್ಞರ ತಂಡವನ್ನು ಪರಿಶೀಲನೆಗಾಗಿ ಕಳುಹಿಸಿದೆ.

ಪತಂಜಲಿ ಔಷಧ: ಸಚಿವರ ನಡೆಗೆ ಖಂಡನೆ

ಬೆಂಗಳೂರು: ‘ಪತಂಜಲಿ ಕಂಪನಿಯ ‘ಕೊರೋನಿಯಲ್’ ಔಷಧಕ್ಕೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಮೌನಕ್ಕೆ ಶರಣಾಗಿದ್ದಾರೆ. ಇದರಿಂದಾಗಿ ಅವರು ಕೂಡ ಸುಳ್ಳಿನಲ್ಲಿ ಭಾಗಿಯಾದಂತಾಗಿದೆ’ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಆರೋಪಿಸಿದ್ದಾರೆ.

‘ಪತಂಜಲಿಯ ‘ಕೊರೋನಿಯಲ್’ ಔಷಧವು ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಮಾಣೀಕೃತವಾಗಿರುವ ಯಶಸ್ವಿ ಮದ್ದು ಎಂದು ಬಾಬಾ ರಾಮ್‌ದೇವ್ ಸುಳ್ಳು ಹೇಳಿಕೆ ನೀಡಿದ್ದರು. ವಿಶ್ವ ಆರೋಗ್ಯ ಸಂಸ್ಥೆಯು ಈ ಬಗ್ಗೆ ಸ್ಪಷ್ಟೀಕರಣ ನೀಡಿ, ಯಾವುದೇ ಸಾಂಪ್ರದಾಯಿಕ ಔಷಧ ಪರಿಶೀಲಿಸಿಲ್ಲ ಎಂದು ತಿಳಿಸಿತ್ತು. ರಾಮ್‌ದೇವ್ ಜತೆಗೆ ವೇದಿಕೆ ಹಂಚಿಕೊಂಡಿದ್ದ ಡಾ. ಹರ್ಷವರ್ಧನ್ ಈ ಬಗ್ಗೆ ಸ್ಪಷ್ಟೀಕರಣ ನೀಡಿಲ್ಲ. ಇವರ ಬೇಜವಾಬ್ದಾರಿ ನಡೆಯ ಪರಿಣಾಮ ಈಗಾಗಲೇ ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿರುವ ಆರೋಗ್ಯ ಸಿಬ್ಬಂದಿಯ ಜತೆಗೆ ಜನಸಾಮಾನ್ಯರೂ ದೂರ ಹೋಗುವ ಸಾಧ್ಯತೆಯಿದೆ’ ಎಂದು ತಿಳಿಸಿದ್ದಾರೆ.

‘ರಾಮ್‌ದೇವ್ ಡೋಂಗಿತನ ಹಾಗೂ ಸಚಿವರ ಮೌನದಿಂದ ದೇಶದ ಮೂರೂವರೆ ಲಕ್ಷ ವೈದ್ಯರನ್ನು ಪ್ರತಿನಿಧಿಸುವ ಭಾರತೀಯ ವೈದ್ಯಕೀಯ ಸಂಘವು ಹೈರಾಣವಾಗಿದೆ. ಸ್ವತಃ ವೈದ್ಯರಾಗಿರುವ ಸಚಿವರು ತಮ್ಮ ವೃತ್ತಿನಿಷ್ಠೆ ಮತ್ತು ಘನತೆಯನ್ನು ಎತ್ತಿ ಹಿಡಿಯುವಲ್ಲಿಯೂ ವಿಫಲರಾಗಿದ್ದಾರೆ’ ಎಂದಿದ್ದಾರೆ.

ಏಕೀಕೃತ ಮಾರುಕಟ್ಟೆ ವ್ಯಾಪ್ತಿಗೆ 66 ಎಫ್‌ಪಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಬಾರ್ಡ್ ಮತ್ತು ರಾಜ್ಯ ಸರ್ಕಾರದ ಬೆಂಬಲ ಹೊಂದಿರುವ 66 ‘ರೈತ ಉತ್ಪಾದಕ ಸಂಘಟನೆ’ಗಳು (ಎಫ್‌ಪಿಒ) ಗುರುವಾರ ನಡೆದ ಕಾರ್ಯಕ್ರಮದಲ್ಲಿ ‘ಏಕೀಕೃತ ಮಾರುಕಟ್ಟೆ ವೇದಿಕೆ’ಗೆ (ಯುಎಂಪಿ) ಸೇರ್ಪಡೆಗೊಂಡವು.

ನಬಾರ್ಡ್‌ನ ಪ್ರಾದೇಶಿಕ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಸಂಘಟನೆಗಳು ರಾಷ್ಟ್ರೀಯ ಇ–ಮಾರುಕಟ್ಟೆ ಸೇವೆ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಮನೋಜ್ ರಾಜನ್ ಅವರ ಸಮ್ಮುಖದಲ್ಲಿ ಯುಎಂಪಿ ಸೇರಿದವು ಎಂದು ನಬಾರ್ಡ್‌ನ ಪ್ರಕಟಣೆ ತಿಳಿಸಿದೆ. ನಬಾರ್ಡ್‌ನ ಕರ್ನಾಟಕ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ನೀರಜ್ ಕುಮಾರ್ ವರ್ಮಾ ಅವರೂ ಉಪಸ್ಥಿತರಿದ್ದರು.

ಈ 66 ಸಂಘಟನೆಗಳಿಗೆ ಇನ್ನು ಮುಂದೆ 162 ಮಾರುಕಟ್ಟೆಗಳ 44 ಸಾವಿರ ನೋಂದಾಯಿತ ವರ್ತಕರ ಜೊತೆ ವಹಿವಾಟು ನಡೆಸಲು ಸಾಧ್ಯವಾಗುತ್ತದೆ. 60ಕ್ಕೂ ಹೆಚ್ಚಿನ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಸಿಗುತ್ತದೆ. ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಎಸ್‌ಡಿಪಿಐ, ಪಿಎಫ್‌ಐ ನಿಷೇಧಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಜಿ.ಹಳ್ಳಿ ಮತ್ತು ಡಿ.ಜೆ.ಹಳ್ಳಿಯಲ್ಲಿ ನಡೆದ ಗಲಭೆ ಮತ್ತು ಹಿಂಸಾಚಾರಕ್ಕೆ ಕಾರಣಕರ್ತರಾಗಿರುವ ಎಸ್‌ಡಿಪಿಐ ಮತ್ತು ಪಿಎಫ್‌ಐ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಒತ್ತಾಯಿಸಿದರು.

ಗುರುವಾರ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಗಲಭೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಫೆಬ್ರುವರಿ 10 ರಂದು ನ್ಯಾಯಾಲಯಕ್ಕೆ 7 ಸಾವಿರ ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದೆ ಎಂದರು.

ಗಲಭೆಗೆ ಸಂಬಂಧಿಸಿದಂತೆ ಈವರೆಗೆ ಒಟ್ಟು 247 ಮಂದಿ ಆರೋಪಿಗಳನ್ನು ಬಂಧಿಸಲಾಗಿದ್ದು, ಈ ಪೈಕಿ ಎಸ್‌ಡಿಪಿಐಗೆ ಸೇರಿದ 40 ಕ್ಕೂ ಅಧಿಕ ಗಲಭೆಕೋರರು ಇರುವುದಾಗಿ ತಿಳಿಸಿದೆ. ಈ ಎರಡೂ ಸಂಘಟನೆಗಳು ನಿರಂತರ ದೇಶ ದ್ರೋಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು,



ಅರವಿಂದ ಲಿಂಬಾವಳಿ

ಅವುಗಳನ್ನು ರಾಜ್ಯ ಸರ್ಕಾರ ಕೂಡಲೇ ನಿಷೇಧಿಸುವಂತೆ ಪಕ್ಷದ ಪರವಾಗಿ ಆಗ್ರಹಿಸುತ್ತೇನೆ ಎಂದರು.

ಕಾಂಗ್ರೆಸ್ ಪಕ್ಷಕ್ಕೂ ಈ ಎರಡೂ ಸಂಘಟನೆಗಳಿಗೆ ನಂಟು ಇದೆ. ಆದ ಕಾರಣ ತಮ್ಮ ಪಕ್ಷದ ಶಾಸಕರ ಮನೆಗೆ ಬೆಂಕಿ ಹಚ್ಚಿದ್ದರೂ ಮಾತನಾಡದೇ ಸುಮ್ಮನೆ ಇತ್ತು. ಈ ಕುರಿತು ಸಮಿತಿ ರಚಿಸಿ ಪರಿಶೀಲನೆ ನಡೆಸಲೂ ತಡ ಮಾಡಿತು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ 2015 ರಲ್ಲಿ ಪಿಎಫ್‌ಐ ಮತ್ತು ಕೆಎಫ್‌ಡಿ ಸಂಘಟನೆ ಕಾರ್ಯಕರ್ತರ ವಿರುದ್ಧ ಇದ್ದ 1,600 ಕ್ಕೂ ಹೆಚ್ಚು ಪ್ರಕರಣಗಳನ್ನು ರದ್ದು ಮಾಡಿದರು. ಈ ಸಂಘಟನೆಗಳ ಕಾರ್ಯಕರ್ತರು ನಿನ್ನೆ ಅಲಪ್ಪುಳ ಆರ್‌ಎಸ್‌ಎಸ್ ಕಾರ್ಯಕರ್ತ ನಂದಕೃಷ್ಣ ಅವರನ್ನು ಇದೇ ಸಂಘಟನೆಗಳು ಕೊಲೆ ಮಾಡಿವೆ ಎಂದು ಲಿಂಬಾವಳಿ ಹೇಳಿದರು.

ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಹಣ ದುರುಪಯೋಗದ ಆರೋಪ

ಆಡಳಿತಾಧಿಕಾರಿ ನೇಮಕಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ವಿರುದ್ಧ ಬೈಲಾ ಉಲ್ಲಂಘನೆ, ಹಣ ದುರುಪಯೋಗ, ನಿಯಮ ಬಾಹಿರ ಚಟುವಟಿಕೆಗಳ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಮಂಡಳಿಯ ಕಾರ್ಯಕಾರಿ ಸಮಿತಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಸರ್ಕಾರಕ್ಕೆ ಬೆಂಗಳೂರು ನಗರ ಜಿಲ್ಲೆ 4ನೇ ವಲಯದ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಶಿಫಾರಸು ಮಾಡಿದ್ದಾರೆ.



ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

‘ಆಡಳಿತಾಧಿಕಾರಿ ನೇಮಕವಾಗುವವರೆಗೆ ಕಚೇರಿ ವೆಚ್ಚಗಳು, ವೇತನ, ಭತ್ಯೆ ಹೊರತುಪಡಿಸಿ ಉಳಿದ ಯಾವುದೇ ಹಣಕಾಸು ಪಾವತಿ ಇದ್ದರೆ ಈ ಅಧಿಕಾರಿಯ ಅನುಮೋದನೆ ಇಲ್ಲದೆ ವ್ಯವಹಾರ ಮಾಡುವಂತಿಲ್ಲ’ ಎಂದು ಆದೇಶಿಸಿ, ಸಹಕಾರಿ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಆಡಳಿತಾಧಿಕಾರಿ ನೇಮಕದ ಬಗ್ಗೆ ನೋಂದಣಾಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದಾರೆ.

‘20 ಆರೋಪಗಳು ಬಹಳ ಗಂಭೀರವಾಗಿದ್ದು, ಇವುಗಳನ್ನು ಮೊದಲು ಸರಿಪಡಿಸಿ ಕಾನೂನು ಕ್ರಮ ಕೈಗೊಂಡು ನಂತರ ಕಾರ್ಯಕಾರಿ ಸಮಿತಿಗೆ ಚುನಾವಣೆ ಮಾಡಬೇಕು. ನೂತನ ಕಾರ್ಯಕಾರಿ ಸಮಿತಿಗೆ ಅಧಿಕಾರ ನೀಡುವವರೆಗೆ ಆಡಳಿತಾಧಿಕಾರಿ ನೇಮಕ ಮಾಡಬೇಕು’ ಎಂದು ಶಿಫಾರಸು ಮಾಡಲಾಗಿದೆ.

ಪ್ರತಿ ವರ್ಷ ಚುನಾವಣೆಯನ್ನು 3–6 ತಿಂಗಳು ಮುಂದೂಡಿಕೆ ಮಾಡುವುದು, ಚಾಲ್ತಿಯಲ್ಲಿ ಇರದ ನಿರ್ಮಾಪಕರು, ವಿತರಕರು, ಪ್ರದರ್ಶಕರು, ನಟರು ನಿರ್ಮಾಪಕರ ಸಂಘಕ್ಕೆ ₹1 ಕೋಟಿ ಸಾಲ ನೀಡಿರುವುದು, ಸಚಿವರಾದ ಕೆ.ಗೋಪಾಲಯ್ಯ ಹಾಗೂ ಬಿ.ಸಿ. ಪಾಟೀಲ್ ಅವರು ಕೊರೊನಾ ಸಂದರ್ಭದಲ್ಲಿ ನೀಡಿದ್ದ ಆಹಾರ ಸಾಮಗ್ರಿಗಳ ದುರುಪಯೋಗ ಆಗಿರುವುದು, ಸಣ್ಣಪುಟ್ಟ ಕಾಮಗಾರಿಗೆ ₹30 ಲಕ್ಷಕ್ಕೂ ಮೇಲ್ಪಟ್ಟು ಖರ್ಚು ಮಾಡಿ ಸಂಘದ ಹಣ ದುರುಪಯೋಗ ಮಾಡಿರುವುದು, ವಜ್ರ ಮಹೋತ್ಸವ ಸಂದರ್ಭದಲ್ಲಿ ಬೆಳ್ಳಿ ತಟ್ಟೆ ಹಂಚದಿರುವುದು, ಕಳಸಾ ಬಂಡೂರಿ ಹೋರಾಟದ ಹೆಸರಿನಲ್ಲಿ ಸುಳ್ಳು ಲೆಕ್ಕ ನೀಡಿ ಅನಾವಶ್ಯಕ ₹40 ಲಕ್ಷ ಖರ್ಚು ತೋರಿಸಿರುವುದು ಮಂಡಳಿ ವಿರುದ್ಧದ ಆರೋಪ ಪಟ್ಟಿಯಲ್ಲಿ ಸೇರಿವೆ.

ಮಂಡಳಿಯ ಮಾಜಿ ಅಧ್ಯಕ್ಷ ಸಾ.ರಾ.ಗೋವಿಂದು ಅವರ ಮಗ ಅನುಷ್ ಸದಸ್ಯನಾಗದೆ, ನಿರ್ಮಾಪಕರಾಗದೆ ಸಂಘದ ಪ್ರಾಥಮಿಕ ಸದಸ್ಯತ್ವ ಹೊಂದದೆ ಏಕಾಏಕಿ ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ನೇಮಕಗೊಂಡಿರುವುದು, ಕಾನೂನು ಬಾಹಿರವಾಗಿ, ಸಂಘದ ಬೈಲಾವನ್ನು ತಮಗೆ ಅನುಕೂಲವಾಗುವಂತೆ ತಿದ್ದುಪಡಿ ಮಾಡಿ, ಸಿಸಿಐ ನ್ಯಾಯಾಲಯದಲ್ಲಿ ವಿವಿಧ ಪ್ರಕರಣಗಳಲ್ಲಿ ವೈಯಕ್ತಿಕವಾಗಿ ಸದಸ್ಯರಿಗೆ ಹಾಕಿದ ದಂಡ ₹2.50 ಕೋಟಿಯನ್ನು ಸಂಸ್ಥೆಯಿಂದ ಪಾವತಿಸಿ ಸಂಸ್ಥೆಗೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಸಹ ಮಂಡಳಿ ಮೇಲಿನ ಆರೋಪದಲ್ಲಿ ಸೇರಿವೆ. ಈ ಕುರಿತು ತನಿಖೆ ನಡೆಸುವಂತೆ ಕೃಷ್ಣೇಗೌಡ ಮತ್ತು ಪ್ರದೀಪ್ ಎಂಬುವವರು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗೆ ದೂರು ಸಲ್ಲಿಸಿದ್ದರು.

ಇದೊಂದು ಪ್ರತಿಷ್ಠಿತ ಸಂಸ್ಥೆಯಾಗಿದ್ದು, ಕಾರ್ಯಕಾರಿ ಸಮಿತಿಯು ಪಾರದರ್ಶಕ ಆಡಳಿತ ನೀಡುವಲ್ಲಿ ವಿಫಲವಾಗಿರುವ ಕಾರಣ ಮಂಡಳಿಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ (ಎ)ರನ್ವಯ ಆಡಳಿತಾಧಿಕಾರಿ ನೇಮಕ ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡುವುದು ಅನಿವಾರ್ಯ ಎಂಬುದಾಗಿ ತೀರ್ಮಾನಿಸಿ ಆದೇಶ ಹೊರಡಿಸಲಾಗಿದೆ ಎಂದು ನೋಂದಣಾಧಿಕಾರಿ ಉಲ್ಲೇಖಿಸಿದ್ದಾರೆ.

ಮಾಹಿತಿ ಇಲ್ಲ: ‘ಆಡಳಿತಾಧಿಕಾರಿ ನೇಮಕದ ಶಿಫಾರಸು ಬಗ್ಗೆ ಆದೇಶ ಇನ್ನೂ ನನಗೆ ದೊರೆತಿಲ್ಲ. ಹೀಗಾಗಿ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಶುಕ್ರವಾರ ಈ ಕುರಿತು ಮಾಧ್ಯಮಕ್ಕೆ ಮಾಹಿತಿ ನೀಡುತ್ತೇನೆ’ ಎಂದು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಜೈರಾಜ್ ‘ಪ್ರಜಾವಾಣಿ’ಗೆ ಹೇಳಿದರು.

ಅಂಬಾನಿ ಮನೆ ಬಳಿ ಸ್ಫೋಟಕ ತುಂಬಿದ್ದ ವಾಹನ ಪತ್ತೆ

ಮುಂಬೈ: ರಿಲಯನ್ಸ್ ಸಮೂಹದ ಅಧ್ಯಕ್ಷ ಮುಕೇಶ್ ಅಂಬಾನಿ ಅವರ ಐಷಾರಾಮಿ ಮನೆ ‘ಆಂಟಿಲಿಯಾ’ ಬಳಿ ಅನುಮಾನಾಸ್ಪದವಾಗಿ ನಿಂತಿದ್ದ ಸ್ಕಾರ್ಪಿಯೊ ವಾಹನದಲ್ಲಿ 20 ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿವೆ.

ಅನುಮಾನ ಬಂದು ಪೊಲೀಸರು, ಭದ್ರತಾ ಸಿಬ್ಬಂದಿ ಮತ್ತು ಗುಪ್ತಚರ ಅಧಿಕಾರಿಗಳು ಎಸ್‌ಯುವಿ ಅನ್ನು ಪರಿಶೀಲನೆ ನಡೆಸಿದಾಗ ಈ ಸ್ಫೋಟಕಗಳು ಪತ್ತೆಯಾಗಿವೆ.

ಅಂಬಾನಿ ಮನೆ ಹತ್ತಿರದ ಮರದ ಬಳಿ ಬುಧವಾರ ತಡರಾತ್ರಿಯಿಂದ ಈ ಎಸ್‌ಯುವಿ ವಾಹನ ನಿಂತಿತ್ತು ಎಂದು ಶಂಕಿಸಲಾಗಿದೆ. ಈ ಸಮಯದಲ್ಲಿ ಅಂಬಾನಿ ಮತ್ತು ಅವರ ಕುಟುಂಬ ಸದಸ್ಯರು ಮನೆಯಲ್ಲಿ ಇದ್ದರೇ ಎಂಬುದು ತಿಳಿದು ಬಂದಿಲ್ಲ.

ವಿಷಯ ಗೊತ್ತಾಗುತ್ತಿದ್ದಂತೆ ಮಹಾರಾಷ್ಟ್ರ ಸರ್ಕಾರ ‘ಆಂಟಿಲಿಯಾ’ ಸುತ್ತಲೂ ಭದ್ರತೆಯನ್ನು ಹೆಚ್ಚಿಸಿದೆ.

‘ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಶಂಕಿತ ಎಸ್‌ಯುವಿ ಅನ್ನು ಪರೀಕ್ಷಿಸಲಾಗುತ್ತಿದೆ’ ಎಂದು ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶ್‌ಮುಖ್ ತಿಳಿಸಿದ್ದಾರೆ.

ಶಿವಕಾಶಿ: ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ– ಐವರ ಸಾವು

ವಿರುಧುನಗರ (ಪಿಟಿಐ): ಜಿಲ್ಲೆಯ ಶಿವಕಾಶಿ ಬಳಿಯ ಪಟಾಕಿ ಕಾರ್ಖಾನೆಯಲ್ಲಿ ಗುರುವಾರ ಸಂಭವಿಸಿದ ಸ್ಫೋಟದಲ್ಲಿ ಐವರು ಮೃತಪಟ್ಟಿದ್ದು, ಆರು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿ ತಿಂಗಳಲ್ಲಿ ನಡೆದ ಎರಡನೇ ದುರಂತ ಇದಾಗಿದೆ. ಗಾಯಗೊಂಡವರನ್ನು ಸಮೀಪದ ಆಸ್ಪತ್ರೆಗಳಿಗೆ ಸಾಗಿಸಲಾಗಿದೆ.

ಫೆ. 2ರಂದು ಸತ್ತೂರು ಬಳಿಯ ಅಚ್ಚಂಕುಲಂ ಗ್ರಾಮದ ಪಟಾಕಿ ಘಟಕದಲ್ಲಿ ಸಂಭವಿಸಿದ್ದ ಸ್ಫೋಟದಲ್ಲಿ 20ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು.

ನಂದಿಬೆಟ್ಟಕ್ಕೆ ಶೀಘ್ರ ರೋಪ್ ವೇ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಲ್ಲೆಯ ಜನಪ್ರಿಯ ಗಿರಿಧಾಮ ನಂದಿಬೆಟ್ಟವನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಗುರುವಾರ ನಂದಿಬೆಟ್ಟಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘15 ವರ್ಷಗಳಿಂದ ರೋಪ್ ವೇ ಬೇಕು ಎಂದು ಸ್ಥಳೀಯರು ಬೇಡಿಕೆ ಇಡುತ್ತಿದ್ದಾರೆ. ಈ ಹಿಂದೆ ಅಂತರರಾಷ್ಟ್ರೀಯ ಕಂಪನಿಯೊಂದು ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಿಸಲು ಮುಂದೆ ಬಂದಿತ್ತು. ಆದರೆ, ಕಾರಣಾಂತರದಿಂದ ಯೋಜನೆ ಕೈ ಬಿಟ್ಟಿತ್ತು. ಈಗ ದಶಕಗಳ ಕನಸು ನನಸಾಗಲಿದೆ. ಇಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು 10 ಎಕರೆಗೂ ಹೆಚ್ಚು ಜಾಗವನ್ನು ಪಡೆಯಲು ಪ್ರಯತ್ನಿಸಲಾಗಿದೆ. ನಂದಿಬೆಟ್ಟವನ್ನು ಪ್ರವಾಸಿತಾಣವನ್ನಾಗಿಸಲು ನಮ್ಮ ಸರ್ಕಾರ ಈಗಾಗಲೇ ₹10 ಕೋಟಿ ಅನುದಾನ ನೀಡಿದೆ.’ ಎಂದು ಹೇಳಿದರು.

258 ಅಭ್ಯರ್ಥಿಗಳಿಗೆ ಉದ್ಯೋಗ ಭಾಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಶೇಷಾದ್ರಿಪುರ ಕಾಲೇಜು ಸಹಯೋಗದಲ್ಲಿ ನಡೆದ ಮೇಳದಲ್ಲಿ 258 ಅಭ್ಯರ್ಥಿಗಳು ಉದ್ಯೋಗ ಪಡೆಯುವಲ್ಲಿ ಯಶಸ್ವಿಯಾದರು.

ಶೇಷಾದ್ರಿಪುರ ಕಾಲೇಜಿನಲ್ಲಿ ನಡೆದ ಈ ಉದ್ಯೋಗ ಮೇಳದಲ್ಲಿ 722 ಅಭ್ಯರ್ಥಿಗಳು ನೋಂದಣಿ ಮಾಡಿಸಿದ್ದರು. ಇನ್ಫೊಸಿಸ್, ಐಸಿಐಸಿಐ ಹಾಗೂ ರಿಲಯನ್ಸ್ ಸೇರಿದಂತೆ 42 ಕಂಪನಿಗಳ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳು ಸಂದರ್ಶನ ನಡೆಸಿದರು. ಇನ್ನೂ 239 ಅಭ್ಯರ್ಥಿಗಳು ಶಾರ್ಟ್‌ಲಿಸ್ಟ್ ಆಗಿದ್ದು, ಇವರು ಕಾಲಾನಂತರದಲ್ಲಿ ಉದ್ಯೋಗಾವಕಾಶ ಪಡೆಯುವ ಸಾಧ್ಯತೆ ಇದೆ.



ಉದ್ಯೋಗ ಮೇಳವನ್ನು ಗಣ್ಯರು ಉದ್ಘಾಟಿಸಿದರು. ಡಬ್ಲ್ಯು.ಡಿ. ಅಶೋಕ್, ಎಸ್. ಶೇಷನಾರಾಯಣ, ಕೆ.ಶ್ರೀನಿವಾಸ್ ಹಾಗೂ ಡಾ. ಎಚ್.ಎನ್. ಮೀರಾ ಇದ್ದಾರೆ

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಸೇರಿ ತಾಂತ್ರಿಕ ಮತ್ತು ತಾಂತ್ರಿಕೇತರ ಕೋರ್ಸ್‌ಗಳ ಅಭ್ಯರ್ಥಿಗಳು ಪಾಲ್ಗೊಂಡರು.

ಉಪಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕ ಕೆ. ಶ್ರೀನಿವಾಸ, ಎಸ್. ಶೇಷನಾರಾಯಣ, ಪ್ರಾಚಾರ್ಯರಾದ ಡಾ.ಎಚ್.ಎನ್. ಮೀರಾ, ಟ್ರಸ್ಟಿ ಡಬ್ಲ್ಯು. ಡಿ. ಅಶೋಕ್, ಉದ್ಯೋಗಾಧಿಕಾರಿ ಗೋವಿಂದರಾಜು ಇದ್ದರು.

‘ಸಫಾಯಿ ಮಿತ್ರ ಸುರಕ್ಷಾ ಸವಾಲು’ ಬೀದಿ ನಾಟಕ

ಬೆಂಗಳೂರು: ಒಳಚರಂಡಿ ಮತ್ತು ಗುಂಡಿಗಳನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಸಫಾಯಿ ಕರ್ಮಚಾರಿಗಳ ಸಾವು ಮತ್ತು ಅವಘಡಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಲಮಂಡಳಿಯು ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ನಾಟಕಗಳನ್ನು ಆಯೋಜಿಸಿದೆ.

ಈ ತಿಂಗಳ ಕೊನೆಯವರೆಗೆ ದಿನಕ್ಕೆ ಮೂರು ಸ್ಥಳದಲ್ಲಿ ನಾಟಕಗಳು ಪ್ರದರ್ಶನಗೊಳ್ಳಲಿವೆ ಎಂದು ಅದು ಹೇಳಿದೆ.

ಆಂಧ್ರ: ವಿಐಟಿಯಿಂದ ವಿದ್ಯಾರ್ಥಿವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಆಂಧ್ರಪ್ರದೇಶದ ವೆಲ್ಲೋರ್ ತಾಂತ್ರಿಕ ವಿಶ್ವವಿದ್ಯಾಲಯ (ವಿಐಟಿ) ವಿದ್ಯಾರ್ಥಿ ವೇತನ ನೀಡುವುದಾಗಿ ಘೋಷಿಸಿದೆ.

‘ಬಿಬಿಎ, ಕಾನೂನು, ಬಿ.ಕಾಂ, ಬಿಎಸ್‌ಸಿ ಹಾಗೂ ಬಿಎ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಜಿವಿ ಮತ್ತು ರಾಜೇಶ್ವರಿ ಅಮ್ಮಾಳ್ ಹೆಸರಿನಲ್ಲಿ ವಿದ್ಯಾರ್ಥಿ ವೇತನ ನೀಡಲಾಗುವುದು’ ಎಂದು ವಿಐಟಿಯ ಉಪಾಧ್ಯಕ್ಷ ಡಾ. ಶೇಖರ್ ವಿಶ್ವನಾಥನ್ ಹೇಳಿದ್ದಾರೆ.

‘ಸಂಬಂಧಿಸಿದ ಕೋರ್ಸ್‌ನಲ್ಲಿ ಪಿಯುಸಿ ಪರೀಕ್ಷೆಯಲ್ಲಿ ದೇಶಕ್ಕೇ ಪ್ರಥಮ ಸ್ಥಾನ ಬಂದ ವಿದ್ಯಾರ್ಥಿಗಳಿಗೆ ಜಿವಿ ವಿದ್ಯಾರ್ಥಿವೇತನ ನೀಡಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಈ ಸ್ಕಾಲರ್‌ಶಿಪ್ ಅಡಿ ಪದವಿಯ ಎಲ್ಲ ವರ್ಷಗಳ ಶುಲ್ಕ ಭರಿಸಲಾಗುವುದು’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿ. ಕೋಟಾ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ರಾಜೇಶ್ವರಿ ಅಮ್ಮಾಳ್ ಸ್ಕಾಲರ್‌ಶಿಪ್ ಪಡೆಯಲು, ಯಾವುದೇ ರಾಜ್ಯದಲ್ಲಿ ಆಯಾ ಜಿಲ್ಲೆಯಲ್ಲಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿರಬೇಕು. ಇಂತಹ ವಿದ್ಯಾರ್ಥಿಗಳಿಗೆ ಪದವಿಯ ಎಲ್ಲ ವರ್ಷಗಳಲ್ಲಿ ಬೋಧನಾ ಶುಲ್ಕದಲ್ಲಿ ಶೇ 50ರಷ್ಟು ರಿಯಾಯಿತಿ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಮೊದಲ ಸ್ಥಾನವನ್ನು ಯುವತಿ ಪಡೆದಿದ್ದರೆ ಅವರಿಗೆ ಶೇ 75ರಷ್ಟು ರಿಯಾಯಿತಿ ನೀಡಲಾಗುತ್ತದೆ’ ಎಂದು ಅವರು ತಿಳಿಸಿದರು.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಮೇ 31 ಕೊನೆಯ ದಿನ. ಮಾಹಿತಿಗೆ, www.vitap.ac.in ಅಥವಾ ಇ ಮೇಲ್ ವಿಳಾಸ- admission@vitap.ac.in, ದೂರವಾಣಿ ಸಂಖ್ಯೆ 7901091283 ಸಂಪರ್ಕಿಸಬಹುದು.

ಯುವತಿಯರ ಹೆಸರಿನಲ್ಲಿ ಪರಿಚಯ • ವಿಡಿಯೊ ಕರೆ ಮಾಡಿ ಬಟ್ಟೆ ಬಿಚ್ಚಿಸುವ ಚಾಲಾಕಿಗಳು

ಸೈಬರ್ ಲೋಕದಲ್ಲಿ 'ಬೆತ್ತಲೆ' ಬ್ಲ್ಯಾಕ್‌ಮೇಲ್

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಅವರೊಬ್ಬ ಗ್ರಾನೈಟ್ ಉದ್ಯಮಿ. ಯುವತಿ ಹೆಸರಿನಲ್ಲಿ ಬಂದ ಫ್ರೆಂಡ್ ರಿಕ್ವೆಸ್ಟ್ ಸ್ವೀಕರಿಸಿ, ಆಕೆಯ ಗುಂಗಿನಲ್ಲೇ ದಿನ ಕಳೆಯಲಾರಂಭಿಸಿದ್ದರು. ಅಂದು ರಾತ್ರಿ ಏಕಾಏಕಿ ವಿಡಿಯೊ ಕರೆ ಮಾಡಿ ಸಲುಗೆಯಿಂದ ಮಾತನಾಡಿದ್ದ ಯುವತಿ, 'ನಿಮ್ಮ ದೇಹ ನೋಡಬೇಕು' ಎಂದು ಹೇಳಿ ಉದ್ಯಮಿ ಬಟ್ಟೆ ಬಿಚ್ಚಿಸಿ ಚಿತ್ರೀಕರಿಸಿಕೊಂಡಳು. ಬೆತ್ತಲೆ ದೃಶ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ಮರುದಿನದಿಂದಲೇ ಉದ್ಯಮಿಯನ್ನು ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದಳು.

ಇದು ಗ್ರಾನೈಟ್ ಉದ್ಯಮಿಯೊಬ್ಬರ ಕಥೆಯಲ್ಲ. ಕೆಲ ಗಣ್ಯರು, ಕೆಲ ಉದ್ಯಮಿಗಳು, ಕೆಲ ರಾಜಕಾರಣಿಗಳು... ಹೀಗೆ ನೂರಾರು ಮಂದಿ, ಸೈಬರ್ ಲೋಕದಲ್ಲಿ ಬೆತ್ತಲೆ ಆಗಿ ಬ್ಲ್ಯಾಕ್‌ಮೇಲ್ ಜಾಲದಲ್ಲಿ ಸಿಲುಕುತ್ತಿದ್ದಾರೆ. ಇಂಥ ಕೃತ್ಯದಿಂದ ನೊಂದವರು, ಸೈಬರ್ ಕ್ರೈಂ ಠಾಣೆಗಳಿಗೆ ದೂರು ನೀಡುತ್ತಿದ್ದಾರೆ. ಕೆಲವರಂತೂ ಮರ್ಯಾದೆಗೆ ಅಂಜಿ ಕೇಳಿದಷ್ಟು ಹಣ ಕೊಟ್ಟು ಸುಮ್ಮನಾಗುತ್ತಿದ್ದಾರೆ.

> ಯುವತಿಯ ಪ್ರಚೋದನೆಗೆ ಒಳಗಾಗಿ ಬೆತ್ತಲಾದೆ. ಆಗ ಆಕೆ, ಪದೇ ಪದೇ ಹಣ ಬೇಕೆಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾಳೆ. ಹೀಗಾಗಿ, ಠಾಣೆಗೆ ದೂರು ನೀಡುತ್ತಿದ್ದೇನೆ
> **ದೂರುದಾರ**

ಅಪರಾಧ ಸುದ್ದಿ

ನಗರದ ಸೈಬರ್ ಕ್ರೈಂ ಠಾಣೆಗಳಲ್ಲಿ ದಾಖಲಾಗುತ್ತಿರುವ 'ಬೆತ್ತಲೆ ಬ್ಲ್ಯಾಕ್‌ಮೇಲ್' ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಯಾರದ್ದೋ ಯುವತಿಯ ಫೋಟೊ ಹಾಗೂ ಯಾವುದೋ ಜಾಲತಾಣದಲ್ಲಿರುವ ನೀಲಿಚಿತ್ರಗಳನ್ನು ಬಳಸಿಕೊಂಡು ನಕಲಿ ಐ.ಡಿ.ಗಳನ್ನು ಸೃಷ್ಟಿಸಿ ಕೃತ್ಯ ಎಸಗುತ್ತಿರುವ ವಂಚಕರ ಪತ್ತೆಗೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

'ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೆಚ್ಚಿದ್ದ ಸೈಬರ್ ವಂಚನೆ, ಇದೀಗ ಎಲ್ಲ ಕ್ಷೇತ್ರಕ್ಕೂ ವ್ಯಾಪಿಸುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯ ಮಾಡಿಕೊಂಡು ವಂಚಿಸುವವರ ದೊಡ್ಡ ಗ್ಯಾಂಗ್ ಇದೆ. ಅಂಥವರೇ ಇದೀಗ ಬೆತ್ತಲೆ ಬ್ಲ್ಯಾಕ್‌ಮೇಲ್ ಶುರು ಮಾಡಿದ್ದಾರೆ' ಎಂದು ಸೈಬರ್ ಠಾಣೆಯೊಂದರ ಅಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಿತ್ಯ 10ರಿಂದ 20 ಪ್ರಕರಣಗಳು ದಾಖಲಾಗುತ್ತಿವೆ. ಯುವತಿಯರ ಫೋಟೊ ಇರುವ ಖಾತೆಗಳಿಂದ ಪರಿಚಯ ಮಾಡಿಕೊಂಡು ದೂರುದಾರರನ್ನು ಬ್ಲ್ಯಾಕ್‌ಮೇಲ್ ಮಾಡಲಾಗುತ್ತಿದೆ. ಯುವತಿಯೇ ಬೆತ್ತಲೆಯಾದ ರೀತಿಯಲ್ಲಿ ನೀಲಿಚಿತ್ರಗಳನ್ನು ತೋರಿಸಿ, ದೂರುದಾರರನ್ನು ಪ್ರಚೋದಿಸಿ ಬೆತ್ತಲೊಳಿಸುವ ಚಾಲಾಕಿಗಳು ಇದ್ದಾರೆ' ಎಂದೂ ಹೇಳಿದರು.

ಹೆಚ್ಚು ಕೃತ್ಯ: 'ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಹಾಗೂ ಹಲವು ಆ್ಯಪ್‌ಗಳ ಮೂಲಕ ಅಪರಿಚಿತ ಯುವತಿಯಿಂದ ಫ್ರೆಂಡ್ ರಿಕ್ವೆಸ್ಟ್ ಬರುತ್ತದೆ. ಅದನ್ನು ಸ್ವೀಕರಿಸುತ್ತಿದ್ದಂತೆ, 'ಹಾಯ್ ಡಿಯರ್' ಸೇರಿ ಹಲವು ಸಂದೇಶಗಳು ಬರಲಾರಂಭಿಸುತ್ತವೆ. ಯುವತಿ ಎಂದು ನಂಬಿ ಮುಂದುವರಿದರೆ, ಜಾಲಕ್ಕೆ ಸಿಲುಕಿದಂತೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಮೊಬೈಲ್‌ನಲ್ಲಿ ದಿನ ನಿರಂತರವಾಗಿ ಚಾಟಿಂಗ್ ಮಾಡುವ ಯುವತಿ, ಸಲುಗೆಯಿಂದ ಮಾತನಾಡುತ್ತಾಳೆ. ಏಕಾಏಕಿ ರಾತ್ರಿ ವಿಡಿಯೊ ಕರೆ ಮಾಡಿ, ಯುವತಿಯು ನಗ್ನ ವಿಡಿಯೊ ತೋರಿಸುತ್ತಾಳೆ. ಜೊತೆಗೆ, 'ನೀವು ತುಂಬಾ ಚೆನ್ನಾಗಿದ್ದೀರಾ. ನಿಮ್ಮ ದೇಹ ನೋಡಬೇಕು' ಎಂದು ಇಚ್ಛಿಸುತ್ತಾಳೆ. ಅವಳ ಮಾತಿಗೆ ಮರುಳಾದ ವ್ಯಕ್ತಿ, ಕೆಲ ನಿಮಿಷಗಳಲ್ಲೇ ಬಟ್ಟೆ ಕಳಚಿ ಬೆತ್ತಲಾಗುತ್ತಾನೆ. ಅಂಗಾಂಗಗಳನ್ನೂ ತೋರಿಸುತ್ತಾನೆ. ಕೆಲ ಹೊತ್ತಿನ ಬಳಿಕ ಕರೆ ಕಡಿತವಾಗುತ್ತದೆ' ಎಂದೂ ಅಧಿಕಾರಿ ಹೇಳಿದರು.

ಮರುದಿನದಿಂದಲೇ ಬ್ಲ್ಯಾಕ್‌ಮೇಲ್: 'ರಾತ್ರಿ ಚಿತ್ರೀಕರಿಸಿಕೊಂಡ ಬೆತ್ತಲೆ ವಿಡಿಯೊ ಇಟ್ಟುಕೊಂಡು ಸಂತ್ರಸ್ತರನ್ನು ಬ್ಲ್ಯಾಕ್‌ಮೇಲ್ ಮಾಡುವ ಕೆಲಸ ಮರುದಿನದಿಂದಲೇ ಆರಂಭವಾಗುತ್ತದೆ. 'ಕೂಡಲೇ ₹25 ಸಾವಿರ ಖಾತೆಗೆ ಹಾಕಿ. ಇಲ್ಲದಿದ್ದರೆ, ಈ ವಿಡಿಯೊ ಯೂಟ್ಯೂಬ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸೇರಿ ಎಲ್ಲ ಸಾಮಾಜಿಕ ಜಾಲತಾಣಗಳಲ್ಲೂ ಅಪ್‌ಲೋಡ್ ಮಾಡಲಾಗುವುದು' ಎಂದು ಬೆದರಿಕೆಯನ್ನೂ ವಂಚಕರು ಹಾಕುತ್ತಾರೆ. ಅದಕ್ಕೆ ಹೆದರಿ ಕೆಲವರು ಹಣ ಕೊಡುತ್ತಾರೆ. ಹಣ ಪಡೆದ ನಂತರ ವಂಚಕರು, ಮತ್ತಷ್ಟು ಹಣಕ್ಕೆ ಬೇಡಿಕೆ ಇಡುತ್ತಾರೆ. ಅವಾಗಲೇ ಸಂತ್ರಸ್ತರು ಠಾಣೆಗೆ ಬಂದು ದೂರು ನೀಡುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಇ-ಮೇಲ್ ಕಳುಹಿಸಿದರೂ ಪ್ರತಿಕ್ರಿಯೆ ವಿಳಂಬ'

'ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಇತರೆ ಆ್ಯಪ್‌ಗಳ ಕೇಂದ್ರ ಕಚೇರಿಗಳು ವಿದೇಶದಲ್ಲಿವೆ. ಪ್ರಕರಣ ದಾಖಲಾಗುತ್ತಿದ್ದಂತೆ, ನಕಲಿ ಖಾತೆ ಬಗ್ಗೆ ಮಾಹಿತಿ ಕೋರಿ ಕಂಪನಿಗಳಿಗೆ ಇ-ಮೇಲ್ ಕಳುಹಿಸಲಾಗುತ್ತಿದೆ. ಆದರೆ, ಪ್ರತಿಕ್ರಿಯೆ ಬರುವುದು ತಡವಾಗುತ್ತಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಸೈಬರ್ ಲೋಕದಲ್ಲಿ ಆಗುವ ಅಪರಾಧಗಳ ಪತ್ತೆಗೆ ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ. ಆರೋಪಿಗಳ ಸುಳಿವು ಪತ್ತೆಯೇ ದೊಡ್ಡ ಸವಾಲು. ನಕಲಿ ಖಾತೆಯಲ್ಲಿರುವ ಫೋಟೊ ಆಧರಿಸಿ ಯಾರನ್ನಾದರೂ ವಶಕ್ಕೆ ಪಡೆದರೆ, ಅವರು ಅಮಾಯಕರಾಗಿರುತ್ತಾರೆ. ಸೈಬರ್ ಲೋಕದಲ್ಲಿ ಜನರು ಹೆಚ್ಚು ಎಚ್ಚರಿಕೆ ವಹಿಸಬೇಕು. ಅದುವೇ ಅಪರಾಧ ತಡೆಗೆ ಅಸ್ತ್ರ' ಎಂದು ತಿಳಿಸಿದರು.

ಜಾಲಕ್ಕೆ ಸಿಲುಕದಿರಲು ಹೀಗೆ ಮಾಡಿ

- ಅಪರಿಚಿತರಿಂದ ಬರುವ ರಿಕ್ವೆಸ್ಟ್‌ಗಳನ್ನು ಸ್ವೀಕರಿಸುವ ಮುನ್ನ ಎಚ್ಚರಿಕೆ ಇರಲಿ
- ಸಾಮಾಜಿಕ ಜಾಲತಾಣದಲ್ಲಿರುವ ತಮ್ಮ ಖಾತೆಗಳನ್ನು, ಪ್ರೊಫೈಲ್ ಪ್ರವೇಶಿಸಿ ಆಯ್ಕೆ ಬಳಸಿ ಲಾಕ್ ಮಾಡಿ
- ಅಪರಿಚಿತರಿಂದ ಬರುವ ವಿಡಿಯೊ ಕರೆಗಳ ಬಗ್ಗೆ ಜಾಗೃತಿ ಇರಲಿ
- ಅಪರಿಚಿತರು ಯಾರಾದರೂ ಅನುಮಾನಾಸ್ಪದ ರೀತಿಯಲ್ಲಿ ಸಂದೇಶ ಕಳುಹಿಸಿದರೆ ಪೊಲೀಸರಿಗೆ ಮಾಹಿತಿ ನೀಡಿ

ಕಳ್ಳತನ; ಆರೋಪಿಗಳ ಬಂಧನ

1 ಕೆ.ಜಿ. 280 ಗ್ರಾಂ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಾಗೂ ನೆರೆ ರಾಜ್ಯಗಳಲ್ಲಿ ಕಳ್ಳತನ ಎಸಗುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ದೆಹಲಿಯ ಖುರ್ಷಿದ್ ಖಾನ್ (41) ಹಾಗೂ ವೀರೇಂದ್ರಕುಮಾರ್ (46) ಬಂಧಿತರು. ಅವರಿಂದ ₹ 61.50 ಲಕ್ಷ ಮೌಲ್ಯದ 1 ಕೆಜಿ 280 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಉತ್ತರ ಪ್ರದೇಶದ ಖುರ್ಷಿದ್ ಖಾನ್, ದೆಹಲಿಯಲ್ಲಿ ನೆಲೆಸಿದ್ದ. ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗಿ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದ. ಕಳ್ಳತನ ಪ್ರಕರಣದಲ್ಲಿ ಆತನನ್ನು ಬಂಧಿಸಿದ್ದ ದೆಹಲಿ ಹಾಗೂ ಹರಿಯಾಣ ಪೊಲೀಸರು, ಜೈಲಿಗೂ ಕಳುಹಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಆತ, ಪುನಃ ಕೃತ್ಯ ಎಸಗಲಾರಂಭಿಸಿದ್ದ' ಎಂದೂ ತಿಳಿಸಿದರು.

'ಬೆಂಗಳೂರಿನ ಜೀವನ್‌ಬಿಮಾ ನಗರ, ಕೆಂಗೇರಿ, ಜ್ಞಾನಭಾರತಿ, ಕೆ.ಜಿ.ನಗರ, ಹನುಮಂತನಗರ, ವಿಜಯನಗರ, ಮೈಕೊ ಲೇಔಟ್, ಸುಬ್ರಮಣ್ಯ ನಗರ, ಬ್ಯಾಡರಹಳ್ಳಿ ಹಾಗೂ ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯ ಕೆಲ ಮನೆಗಳಲ್ಲೂ ಆರೋಪಿ ಖುರ್ಷಿದ್ ಖಾನ್ ಕಳ್ಳತನ ಮಾಡಿದ್ದ.'

'ಕಳ್ಳತನ ಮಾಡಿದ್ದ ಚಿನ್ನಾಭರಣಗಳನ್ನು ಖುರ್ಷಿದ್‌ಖಾನ್, ಆರೋಪಿ ವೀರೇಂದ್ರಕುಮಾರ್‌ಗೆ ಮಾರುತ್ತಿದ್ದ. ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ಕದ್ದ ಚಿನ್ನಾಭರಣ ಖರೀದಿಸುತ್ತಿದ್ದ ಆರೋಪದಡಿ ವೀರೇಂದ್ರಕುಮಾರ್‌ನನ್ನು ಬಂಧಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

'ಆರೋಪಿಗಳ ಬಳಿ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳು ಪತ್ತೆಯಾಗಿದ್ದು, ಅವುಗಳನ್ನೂ ಜಪ್ತಿ ಮಾಡಲಾಗಿದೆ. ಕಳ್ಳತನ ವೇಳೆ ಯಾರಾದರೂ ಅಡ್ಡಬಂದರೆ, ಪಿಸ್ತೂಲ್ ತೋರಿಸಿ ಬೆದರಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಮಣ್ಣಿನಡಿ ಸಿಲುಕಿ ಕಾರ್ಮಿಕ ಸಾವು

ವೃಷಭಾವತಿ ಕಾಲುವೆ ತಡೆಗೋಡೆ ನಿರ್ಮಾಣ ಕಾಲುವೆ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃಷಭಾವತಿ ಕಾಲುವೆ ತಡೆಗೋಡೆ ನಿರ್ಮಾಣ ವೇಳೆ ಮಣ್ಣು ಕುಸಿದು ಕಾರ್ಮಿಕ ಚಂಚಲ್ ಬುರ್ಮಾನ್ (21) ಮೃತಪಟ್ಟಿದ್ದಾರೆ.

'ಪಶ್ಚಿಮ ಬಂಗಾಳದ ಚಂಚಲ್, ಕೆಲ ದಿನಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ವಾಸ್ತು ಪ್ರಾಪರ್ಟೀಸ್ ಕಂಪನಿಯಲ್ಲಿ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ್ದರು. ಬುಧವಾರ ಸಂಜೆ ಕೆಲಸ ಮಾಡುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಕೆಂಗೇರಿ ಪೊಲೀಸರು ಹೇಳಿದರು.



ಚಂಚಲ್

'ವಾಸ್ತು ಪ್ರಾಪರ್ಟೀಸ್ ಕಂಪನಿಯಿಂದ ಕಾಲುವೆಗೆ ಹೊಂದಿಕೊಂಡಿರುವ ಜಾಗದಲ್ಲಿ ಕಟ್ಟಡ ನಿರ್ಮಾಣ ಕೆಲಸ ಮಾಡಲಾಗುತ್ತಿದೆ. ಕಟ್ಟಡದ ಜಾಗಕ್ಕೆ ನೀರು ನುಗ್ಗಬಾರದೆಂದು ಕಾಲುವೆಗೆ ತಡೆಗೋಡೆ ನಿರ್ಮಿಸಲಾಗುತ್ತಿತ್ತು. ನಿರ್ಮಾಣದ ಹೊಣೆಯನ್ನು ಪಶ್ಚಿಮ ಬಂಗಾಳದವರೇ ಆದ ಗಣೇಶ್ ಬುರ್ಮಾನ್‌ಗೆ ನೀಡಲಾಗಿತ್ತು.'

'ತನ್ನದೇ ಊರಿನಿಂದ 15ಕ್ಕೂ ಹೆಚ್ಚು ಕಾರ್ಮಿಕರನ್ನು ನಗರಕ್ಕೆ ಕರೆದುಕೊಂಡು ಬಂದಿದ್ದ ಗಣೇಶ್, ಕಂಪನಿ ಹೆಸರಿನಲ್ಲಿ ಕಾಮಗಾರಿ ಆರಂಭಿಸಿದ್ದರು. ಪಾಯ ಅಗೆದು ತಡೆಗೋಡೆ ನಿರ್ಮಾಣ ಕೆಲಸ ಆರಂಭಿಸಲಾಗಿತ್ತು' ಎಂದೂ ಪೊಲೀಸರು ತಿಳಿಸಿದರು.



ಕಾರ್ಮಿಕ ಮೃತಪಟ್ಟ ಜಾಗ

ಉಸಿರುಗಟ್ಟಿ ಸಾವು: 'ಬುಧವಾರ ಕೆಲಸಕ್ಕೆ ಬಂದಿದ್ದ ಚಂಚಲ್, ಕಾಮಗಾರಿ ಸ್ಥಳದಲ್ಲಿ ಗುಂಡಿ ಅಗೆಯುತ್ತಿದ್ದರು. ಅದೇ ಸಂದರ್ಭದಲ್ಲೇ ಮಣ್ಣು ಅವರ ಮೇಲೆ ಬಿದ್ದಿತ್ತು. ಮಣ್ಣಿನಡಿ ಸಿಲುಕಿದ್ದ ಅವರು, ಉಸಿರುಗಟ್ಟಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗುಂಡಿಯಲ್ಲಿದ್ದ ಮಣ್ಣಿನಡಿ ಸಿಲುಕಿದ್ದ ಮೃತದೇಹವನ್ನು ಹೊರಗೆ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಉಪ ಗುತ್ತಿಗೆದಾರ ಗಣೇಶ್ ಬುರ್ಮಾನ್‌ನನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

ಓಜಿ ಕುಪ್ಪಂ ಗ್ಯಾಂಗ್ ಸದಸ್ಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನ ಗಾಜು ಒಡೆದು ₹ 2 ಲಕ್ಷ ನಗದು ಕದ್ದು ಪರಾರಿಯಾಗಿದ್ದ ಆರೋಪಿ ರತ್ನಕುಮಾರ್‌ನನ್ನು (40) ಬಾಗಲಗುಂಟೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ತಿರುವೆಟ್ಟೂರು ನಿವಾಸಿಯಾದ ಆರೋಪಿ, ಓಜಿ ಕುಪ್ಪಂ ಗ್ಯಾಂಗ್ ಸದಸ್ಯ. ಆತನಿಂದ ₹ 10.25 ಲಕ್ಷ ನಗದು ಹಾಗೂ ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಗ್ಯಾಂಗ್ ಸದಸ್ಯರಾದ ರಿಷಿ, ಗೋಪಿ, ಹನುಮಂತು ಹಾಗೂ ಬಾಲಾಜಿ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಜಾಲಹಳ್ಳಿ ಕ್ರಾಸ್ ನಿವಾಸಿಯಾದ ದೂರುದಾರ ರಾಘವೇಂದ್ರ, ಬ್ಯಾಂಕ್‌ನಲ್ಲಿ ₹ 2 ಲಕ್ಷ ಡ್ರಾ ಮಾಡಿಕೊಂಡು ಕಾರಿನಲ್ಲಿ ಹೊರಟಿದ್ದರು. ಟಿ. ದಾಸರಹಳ್ಳಿ ಮೆಟ್ರೊ ನಿಲ್ದಾಣ ಬಳಿಯ ಹೋಟೆಲೊಂದರ ಎದುರು ಕಾರು ನಿಲ್ಲಿಸಿ ಊಟಕ್ಕೆ ಹೋಗಿದ್ದರು. ಊಟ ಮುಗಿಸಿ ವಾಪಸು ಬಂದು ನೋಡಿದಾಗ, ಕಾರಿನ ಕಿಟಕಿ ಗಾಜು ಒಡೆದಿತ್ತು. ಕಾರಿನಲ್ಲಿದ್ದ ₹ 2 ಲಕ್ಷ ನಗದು ಇರಲಿಲ್ಲ. ಹಣ ಕಳವಾದ ಬಗ್ಗೆ ಠಾಣೆಗೆ ದೂರು ನೀಡಿದ್ದರು. ಹೆಸರುಘಟ್ಟ ಮುಖ್ಯರಸ್ತೆಯಲ್ಲಿರುವ ಕರ್ಣಾಟಕ ಬ್ಯಾಂಕ್ ಎದುರು ಆರೋಪಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ. ಗಸ್ತಿನಲ್ಲಿದ್ದ ಸಿಬ್ಬಂದಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆತನೇ ಆರೋಪಿ ಎಂಬುದು ಗೊತ್ತಾಯಿತು' ಎಂದೂ ಹೇಳಿದರು.



ರತ್ನಕುಮಾರ್

ಗಮನ ಬೇರೆಡೆ ಸೆಳೆದು ಕೃತ್ಯ: 'ನಗರದ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳ ಬಳಿ ನಿಲ್ಲುತ್ತಿದ್ದ ಆರೋಪಿಗಳು, ಹಣ ಡ್ರಾ ಮಾಡಿಕೊಂಡು ಹೋಗುತ್ತಿದ್ದ ವ್ಯಕ್ತಿಗಳನ್ನು ಗುರುತಿಸುತ್ತಿದ್ದರು. ಅವರನ್ನು ಹಿಂಬಾಲಿಸಿ ಗಮನ ಬೇರೆಡೆ ಸೆಳೆದು ಹಣ ಕದ್ದು ಪರಾರಿಯಾಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಬಾಗಲಗುಂಟೆ, ಆರ್.ಎಂ.ಸಿ ಯಾರ್ಡ್, ಮಡಿವಾಳ, ಜೀವನ್‌ಬಿಮಾ ನಗರ, ಕೆ.ಆರ್. ಪುರ, ರಾಜಾಜಿನಗರ, ಜ್ಞಾನಭಾರತಿ, ಕೊತ್ತನೂರು ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ತಲೆಮರೆಸಿಕೊಂಡಿರುವ ಆರೋಪಿಗಳನ್ನು ಪತ್ತೆ ಮಾಡಿದರೆ, ಮತ್ತಷ್ಟು ಮಾಹಿತಿ ಸಿಗಲಿದೆ' ಎಂದೂ ಹೇಳಿದರು.

ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಮಾರಾಮಾರಿ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಬುಧವಾರ ಬೆಳಿಗ್ಗೆ ವಿಚಾರಣಾಧೀನ ಕೈದಿಗಳ ನಡುವೆ ಮಾರಾಮಾರಿ ನಡೆದಿದ್ದು, ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ರಕರಣವೊಂದರಲ್ಲಿ ಜೈಲು ಸೇರಿರುವ ಸೈಯದ್ ಅಲಿಯಾಸ್ ರಿಯಾಜ್, ಅಜ್ಮತ್ ಉಲ್ಲಾ, ಸೈಯದ್ ಸಮೀರ್, ರಿಯಾಜ್ ಹಾಗೂ ಸೈಯದ್ ಇಮ್ರಾನ್ ಗುಂಪು ಕಟ್ಟಿಕೊಂಡು, ಇನ್ನೊಬ್ಬ ಕೈದಿ ಅಮರ್ ಅಲಿಯಾಸ್ ಅಮರನಾಥ್ ಮೇಲೆ ಹಲ್ಲೆ ಮಾಡಿದ್ದಾರೆ. ಘಟನೆ ಬಗ್ಗೆ ಕಾರಾಗೃಹದ ಮುಖ್ಯ ಅಧೀಕ್ಷಕ ವಿ. ಶೇಷಮೂರ್ತಿ ದೂರು ನೀಡಿದ್ದು, ಅದರನ್ವಯ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಳೆಯ 'ಹಣೆಪಟ್ಟಿ' ಕಳಚಿಕೊಳ್ಳಲು ಬಿಜೆಪಿ ಯತ್ನ

ಲಿಂಗಾಯತ ನಾಯಕರಿಗೆ ಎಚ್ಚರಿಕೆ

• ಸಿದ್ದಯ್ಯ ಹಿರೇಮಠ

ನವದೆಹಲಿ: 'ವೀರಶೈವ ಲಿಂಗಾಯತ ಸಮುದಾಯದ ಪಕ್ಷ' ಎಂಬ ಹಣೆಪಟ್ಟಿ ಕಳಚಿಕೊಂಡು, ಎಲ್ಲ ಸಮುದಾಯಗಳ ಮತದಾರರನ್ನು ಸೆಳೆಯುವತ್ತ ಹೆಜ್ಜೆ ಇರಿಸಿರುವ ಬಿಜೆಪಿ ಹೈಕಮಾಂಡ್, ರಾಜ್ಯದಲ್ಲಿನ 'ಮೀಸಲಾತಿ ಹೋರಾಟ'ಕ್ಕೆ ಕುಮ್ಮಕ್ಕು ನೀಡದಂತೆ ತನ್ನ ಶಾಸಕರಿಗೆ ಎಚ್ಚರಿಕೆಯ ಸಂದೇಶ ರವಾನಿಸಿದೆ.

ಪಂಚಮಸಾಲಿ ಸಮುದಾಯವನ್ನು ಇತರೆ ಹಿಂದುಳಿದ ಜಾತಿ (ಒಬಿಸಿ)ಗೆ ಸೇರಿಸುವಂತೆ ಬೆಂಗಳೂರಿನಲ್ಲಿ ನಡೆದ ರ್‍ಯಾಲಿಯಲ್ಲಿ ಆಡಳಿತಾರೂಢ ಪಕ್ಷದ ಸಚಿವರು, ಶಾಸಕರು ಪಾಲ್ಗೊಂಡ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು ಕೆಂಡಾಮಂಡಲ ಆಗಿದ್ದಾರೆ ಎಂದು ತಿಳಿದುಬಂದಿದೆ. ಪಕ್ಷದ ರಾಜ್ಯ ಪ್ರಮುಖರೊಂದಿಗೆ ಮಾತುಕತೆ ನಡೆಸಿರುವ ವರಿಷ್ಠರು, ಮೀಸಲಾತಿ ವಿಷಯದಲ್ಲಿ ಸೂಕ್ಷ್ಮವಾಗಿ ವರ್ತಿಸುವಂತೆಯೂ ಎಚ್ಚರಿಕೆ ನೀಡಿದ್ದಾರೆ.

2 ದಿನಗಳ ಹಿಂದಷ್ಟೇ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಸಚಿವ ಮುರುಗೇಶ ನಿರಾಣಿ ಅವರನ್ನು ತುರ್ತಾಗಿ ದೆಹಲಿಗೆ ಕರೆಸಿಕೊಂಡಿದ್ದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರದ ಗೃಹ ಸಚಿವ ಅಮಿತ್ ಶಾ, ಇಡೀ ಕ್ಷೇತ್ರ ಹಾಗೂ ರಾಜ್ಯವನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳು ತಮ್ಮ ಸಮುದಾಯಗಳ ಹೋರಾಟಗಳಲ್ಲಿ ಪಾಲ್ಗೊಳ್ಳದಂತೆ ತಾಕೀತು ಮಾಡಿದ್ದಾರೆ ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪಂಚಮಸಾಲಿ ಸಮುದಾಯದ ಪ್ರತಿಭಟನೆಯ ಕುರಿತು ಈ ಇಬ್ಬರೂ ಮುಖಂಡರೊಂದಿಗೆ ಚರ್ಚಿಸಿರುವ ವರಿಷ್ಠರು, ಶಾಸಕರು, ಸಚಿವರು ಸೇರಿದಂತೆ ಬಿಜೆಪಿಯ ಯಾವುದೇ ಕಾರ್ಯಕರ್ತರನ್ನೂ ಇಂಥ ಹೋರಾಟಗಳಿಂದ ದೂರ ಇರಿಸುವಂತೆ ಸಲಹೆ ನೀಡಿದ್ದಾರೆ.

ಯಾವುದೇ ಸಮುದಾಯಕ್ಕೆ ಹೊಸದಾಗಿ ವಿಶೇಷ ಸೌಲಭ್ಯ ಕಲ್ಪಿಸುವುದು ಅತ್ಯಂತ ಸೂಕ್ಷ್ಮ ಮತ್ತು ಭಾವನಾತ್ಮಕ ವಿಷಯ. ಅದರಲ್ಲೂ, ಜನಪ್ರತಿನಿಧಿಗಳು ತಮಗೆ ಸೇರಿದ ನಿರ್ದಿಷ್ಟ ಸಮುದಾಯದ ಪರ ದನಿ ಎತ್ತುವುದು ಇಡೀ ಜನ ಸಮುದಾಯಕ್ಕೇ ತಪ್ಪು ಸಂದೇಶ ರವಾನಿಸಲಿದೆ ಎಂದೂ ಅಮಿತ್ ಶಾ ಹೇಳಿ ಕಳಿಸಿದ್ದಾರೆ ಎಂದು ಹಿರಿಯ ಮುಖಂಡರೊಬ್ಬರು ಖಚಿತಪಡಿಸಿದ್ದಾರೆ.

ಈಶ್ವರಪ್ಪ, ಬಿಎಸ್‌ವೈಗೂ ಸಂದೇಶ: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ನಡೆದಿರುವ ಹೋರಾಟದಲ್ಲಿ ಬಹಿರಂಗವಾಗಿ ಕಾಣಿಸಿಕೊಂಡಿರುವ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೂ ಎಚ್ಚರಿಕೆ ನೀಡಲಾಗಿದೆ. ಪಕ್ಷದ ಶಿಸ್ತನ್ನು ಉಲ್ಲಂಘಿಸಕೂಡದು ಎಂಬ ಸಂದೇಶ ನೀಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ರಹಸ್ಯ ಸಭೆ ನಡೆಸದಂತೆ ರಾಜ್ಯದ ಇನ್ನಿಬ್ಬರು ಸಚಿವರಿಗೂ ಎಚ್ಚರಿಕೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ಬೆಳವಣಿಗೆಗಳ ಕುರಿತು ಆಂತರಿಕವಾಗಿ ಚರ್ಚಿಸುವಂತೆ ಬುಧವಾರವಷ್ಟೇ ಸೂಚಿಸಲಾಗಿದೆ. ಪ್ರತ್ಯೇಕ ಸಭೆ ನಡೆಸುವುದು, ಗುಂಪುಗಾರಿಕೆಗೆ ಅವಕಾಶ ನೀಡುವಂತಹ ಕಾರ್ಯಕ್ಕೆ ಮುಂದಾಗುವುದನ್ನು ಪಕ್ಷ ವಿರೋಧಿ ಚಟುವಟಿಕೆ ಎಂದೇ ಪರಿಗಣಿಸಲಾಗುತ್ತದೆ ಎಂದೂ ತಿಳಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಮೀಸಲಾತಿ ಕೋರಿ ಸಮುದಾಯಗಳು ಸಲ್ಲಿಸಿರುವ ಬೇಡಿಕೆ ಬಗ್ಗೆ ಹೇಳಿಕೆ ನೀಡದಂತೆ, ನಿರ್ಣಯ ಕೈಗೊಳ್ಳದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೂ ಸೂಚಿಸಲಾಗಿದೆ. ವಿರೋಧ ಪಕ್ಷಗಳ ಅನಗತ್ಯ ಟೀಕೆಗೆ ಅವಕಾಶ ದೊರೆಯದಂತೆ ಹೆಜ್ಜೆ ಇರಿಸುವಂತೆ ಅವರಿಗೂ ತಿಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೆಲವು ದಿನಗಳ ಹಿಂದೆ ವೀರಶೈವ ಲಿಂಗಾಯತ ಸಮುದಾಯಕ್ಕೆ ಒಬಿಸಿ ಸ್ಥಾನಮಾನ ನೀಡಲು ಮುಂದಾಗಿದ್ದ ಯಡಿಯೂರಪ್ಪ ಅವರನ್ನು ತಡೆದಿದ್ದ ವರಿಷ್ಠರು ಇಂಥ ವಿಷಯದಲ್ಲಿ ಹೈಕಮಾಂಡ್ ಸಂಪರ್ಕಿಸದೇ ಯಾವುದೇ ರೀತಿಯ ಘೋಷಣೆ ಬೇಡ ಎಂಬ ಖಡಕ್ ಸಂದೇಶ ರವಾನಿಸಿದ್ದರು.



ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಗೆ ಮನವಿ ಪತ್ರ ಸಲ್ಲಿಸಿದ ಎಚ್. ವೆಂಕಟೇಶ್ ದೊಡ್ಡೇರಿ

ಇಎಸ್‌ಐ ಆಸ್ಪತ್ರೆಗೆ ಮನವಿ

ದಾಬಸ್ ಪೇಟೆ: ಕಾರ್ಮಿಕರ ವೈದ್ಯಕೀಯ ಅನುಕೂಲಕ್ಕಾಗಿ ಪಟ್ಟಣದಲ್ಲಿ ಇಎಸ್‌ಐ ಆಸ್ಪತ್ರೆ ತೆರೆಯಬೇಕು ಎಂದು ರಾಜ್ಯ ಬಿಜೆಪಿ ಎಸ್.ಸಿ. ಮೋರ್ಚಾ ಕಾರ್ಯದರ್ಶಿ ಎಚ್.ವೆಂಕಟೇಶ್ ದೊಡ್ಡೇರಿ ಅವರು ಉಪ ಮುಖ್ಯಮಂತ್ರಿ ಗೋವಿಂದ ಎಂ.ಕಾರಜೋಳ ಮೂಲಕ ಕಾರ್ಮಿಕ ಸಚಿವರಲ್ಲಿ ಮನವಿ ಮಾಡಿದ್ದಾರೆ.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಕಾರಜೋಳ ಅವರು, ಈ ಸಂಬಂಧ ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗದ ಕೇಂದ್ರ ಸಚಿವರಿಗೆ ಈ ಕುರಿತು ಪತ್ರ ಬರೆಯುವಂತೆ ರಾಜ್ಯದ ಕಾರ್ಮಿಕ ಸಚಿವರಿಗೆ ಪತ್ರ ಬರೆದಿದ್ದಾರೆ.

ನೆಲಮಂಗಲ ತಾಲ್ಲೂಕಿನ ದಾಬಸ್ ಪೇಟೆ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ. ಈಗಾಗಲೇ ಇಲ್ಲಿ ಐದು ಹಂತದ ಕೈಗಾರಿಕಾ ಪ್ರದೇಶವಿದ್ದು 70 ಸಾವಿರಕ್ಕೂ ಅಧಿಕ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕಾರ್ಖಾನೆಗಳಲ್ಲಿರುವ ಕಾರ್ಮಿಕರಿಗೆ ಯಾವುದೇ ವೈದ್ಯಕೀಯ ಚಿಕಿತ್ಸೆ ಕೊಡಿಸಬೇಕಾದಲ್ಲಿ 50 ಕಿ.ಮೀ. ದೂರದಲ್ಲಿರುವ ಬೆಂಗಳೂರಿಗೆ ಹೋಗಬೇಕಾಗಿರುತ್ತದೆ. ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ದಾಬಸ್ ಪೇಟೆಯಲ್ಲಿ ಇಎಸ್‌ಐ ಆಸ್ಪತ್ರೆ ತೆರೆದಲ್ಲಿ ತುರ್ತು ಸಂದರ್ಭದಲ್ಲಿ ಕಾರ್ಮಿಕರಿಗೆ ವೈದ್ಯಕೀಯ ಚಿಕಿತ್ಸೆಗೆ ನೆರವಾಗುತ್ತದೆ ಎನ್ನುತ್ತಾರೆ ಎಚ್. ವೆಂಕಟೇಶ್ ದೊಡ್ಡೇರಿ.

ಬಿ.ಕೆ.ಎಸ್. ವರ್ಮಾಗೆ 'ಬಾಂಬೆ ಆರ್ಟ್ ಸೊಸೈಟಿ ಪುರಸ್ಕಾರ'



ಬೆಂಗಳೂರು: ಜೀವಮಾನ ಸಾಧನೆಗೆ ಬಾಂಬೆ ಆರ್ಟ್ ಸೊಸೈಟಿ ನೀಡುವ 'ಸೃಜನಶೀಲ ಪುರಸ್ಕಾರ'ಕ್ಕೆ ಕಲಾವಿದ ಬಿ.ಕೆ.ಎಸ್. ವರ್ಮಾ ಆಯ್ಕೆಯಾಗಿದ್ದಾರೆ.

ವಿವಿಧ ರಾಜ್ಯಗಳಲ್ಲಿನ ಕಲಾ ಸಾಧಕರನ್ನು ಗುರುತಿಸಿ, ಸಂಸ್ಥೆಯು ಪ್ರತಿವರ್ಷ ಗೌರವಿಸುತ್ತಿದೆ. ಇದೇ ಶನಿವಾರ (ಫೆ.27) ಬೆಳಿಗ್ಗೆ 11 ಗಂಟೆಗೆ ಶಿವರಾಮ ಕಾರಂತ ನಗರದಲ್ಲಿರುವ ವರ್ಮಾ ಅವರ ಮನೆಯಲ್ಲಿಯೇ ಪ್ರಶಸ್ತಿ ಪ್ರದಾನ ನಡೆಯಲಿದೆ. 'ಈ ಪುರಸ್ಕಾರಕ್ಕೆ ಭಾಜನವಾಗಿರುವುದು ಸಂತೋಷವನ್ನುಂಟು ಮಾಡಿದೆ. ಕಲಾ ತಪಸ್ಸಿಗೆ ಸಂದ ಅನಿರೀಕ್ಷಿತ ಪುರಸ್ಕಾರ ಇದಾಗಿದೆ. ಕೋವಿಡ್ ಕಾರಣ ಸಂಸ್ಥೆಯವರು ಮನೆಗೆ ಬಂದು ಪ್ರಶಸ್ತಿ ಪ್ರದಾನ ಮಾಡುತ್ತಿದ್ದಾರೆ' ಎಂದು ಬಿ.ಕೆ.ಎಸ್. ವರ್ಮಾ ತಿಳಿಸಿದರು.

ಶಾಸಕರ ಸಭೆಯಲ್ಲಿ ಸಚಿವ ಅರವಿಂದ ಲಿಂಬಾವಳಿ ಭರವಸೆ

ಆನೆ ಪಥ: ಕೇಂದ್ರಕ್ಕೆ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಪಾ (CAMPA) ಯೋಜನೆಯಡಿ ರಾಜ್ಯದಲ್ಲಿ ಆನೆ ಅತಿಕ್ರಮಣ ಮಾಡುವ ರೈಲ್ವೆ ಮಾರ್ಗದ ಉದ್ದಕ್ಕೂ ಬ್ಯಾರಿಕೇಡ್ ನಿರ್ಮಿಸುವ ಯೋಜನೆ ಜಾರಿಗೆ ಕೇಂದ್ರದ ಅನುಮತಿ ಅಗತ್ಯವಿದ್ದು, ಶೀಘ್ರವೇ ಅರಣ್ಯ ವ್ಯಾಪ್ತಿಯ ವಿಧಾನಸಭಾ ಶಾಸಕರ ನಿಯೋಗವನ್ನು ಕೇಂದ್ರಕ್ಕೆ ಕರೆದೊಯ್ಯುವುದಾಗಿ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಭರವಸೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅರಣ್ಯ ಪ್ರದೇಶವಿರುವ ವಿಧಾನಸಭಾ ಕ್ಷೇತ್ರಗಳ ಶಾಸಕರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯದ 624 ಕಿ.ಮೀ ರೈಲು ಮಾರ್ಗಕ್ಕೆ ಆನೆ ಪಥ ನಿರ್ಮಾಣ ಯೋಜನೆಯಡಿ ಬ್ಯಾರಿಕೇಡ್ ಹಾಕುವ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೆ 165 ಕಿ.ಮೀ ಬೇಲಿ ಹಾಕುವ ಕೆಲಸ ಮುಗಿದಿದೆ. ಇನ್ನೂ 450 ಕಿ.ಮೀ ರೈಲ್ವೆ ಮಾರ್ಗಕ್ಕೆ ಬ್ಯಾರಿಕೇಡ್ ನಿರ್ಮಿಸುವ ಕೆಲಸ ಬಾಕಿ ಇದೆ. ಇದಕ್ಕೆ ₹500 ಕೋಟಿ ಅಗತ್ಯವಿದೆ. ಈ ಯೋಜನೆಗೆ ಕೇಂದ್ರದ ಅನುಮತಿ ಅಗತ್ಯವಿದೆ. ಶೀಘ್ರವೇ ಅರಣ್ಯ ಪ್ರದೇಶವಿರುವ ವಿಧಾನಸಭಾ ಕ್ಷೇತ್ರದ ಶಾಸಕರ ನಿಯೋಗದೊಂದಿಗೆ ದೆಹಲಿಗೆ ಹೋಗಿ ಸಂಬಂಧಿಸಿದ ಇಲಾಖಾ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಅರಣ್ಯ ಇಲಾಖೆ ಅಧಿಕಾರಿಗಳಿಂದ ನಾನಾ ಕಾರಣಗಳಿಗೆ ಜನರಿಗೆ ತೊಂದರೆ ಆಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಮುಖ್ಯವಾಗಿ ಅರಣ್ಯವಾಸಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಮತ್ತು ಅವರಿಗೆ ಹಕ್ಕುಪತ್ರಗಳನ್ನು ಕೊಡುವ ಕೆಲಸಗಳು ನನೆಗುದಿಗೆ ಬಿದ್ದಿವೆ. ಈ ವಿಷಯಗಳ ಬಗ್ಗೆ ಗಮನಹರಿಸುವಂತೆ ಅಧಿಕಾರಿಗಳಿಗೆ ಸೂಚಿಸುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಚಿಕ್ಕಮಗಳೂರು, ಹಾಸನ, ಕೊಡಗು, ಉತ್ತರಕನ್ನಡ, ಶಿವಮೊಗ್ಗ, ಚಾಮರಾಜನಗರ ಜಿಲ್ಲೆಗಳ ಶಾಸಕರು ಭಾಗವಹಿಸಿದ್ದರು. ಈ ಜಿಲ್ಲೆಗಳಲ್ಲಿ ಕಾಡು ಪ್ರಾಣಿಗಳಿಂದ ಭತ್ತ, ಅಡಿಕೆ, ತೆಂಗು, ಬಾಳೆ ಮುಂತಾದ ಬೆಳೆಗಳು ನಾಶವಾಗುತ್ತಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದಕ್ಕೆ ಶಾಶ್ವತವಾಗಿ ಕಡಿವಾಣ ಹಾಕಬೇಕು ಎಂದು ಶಾಸಕರು ಸಚಿವರನ್ನು ಒತ್ತಾಯಿಸಿದರು.

'ಕಾಡು ಪ್ರಾಣಿಗಳಿಂದ ಬೆಳೆ ಹಾಳಾಗುತ್ತಿದೆ. ಎಲ್ಲ ರೈತರೂ ತಂತಿ ಬೇಲಿ ಹಾಕಿಸಲು ಸಾಧ್ಯವಿಲ್ಲ. ಕಾಡು ಪ್ರಾಣಿಗಳಗಳನ್ನು ಓಡಿಸಲು, ಅವುಗಳನ್ನು ಹೊಡೆದರೆ ಅರಣ್ಯ ಇಲಾಖೆಯವರು ದೂರು ದಾಖಲಿಸಿಕೊಳ್ಳುತ್ತಾರೆ. ಇದರಿಂದ ಜನರು ಆಕ್ರೋಶಗೊಂಡಿದ್ದು, ಜನಪ್ರತಿನಿಧಿಗಳು ತಲೆ ಎತ್ತಿಕೊಂಡು ಓಡಾಡಲು ಆಗದ ಸ್ಥಿತಿ ನಿರ್ಮಾಣವಾಗಿದೆ' ಎಂದು ಶಾಸಕರು ಹೇಳಿದರು.

ದರೋಡೆಗೆ ಹೊಂಚು ಹಾಕಿದ್ದ 13 ಮಂದಿ ಬಂಧನ

ವಿಜಯನಗರ (ಹೊಸಪೇಟೆ): ದರೋಡೆಗೆ ಹೊಂಚು ಹಾಕಿ ಪೂರ್ವ ತಯಾರಿ ಮಾಡಿಕೊಂಡು ನಗರದಲ್ಲಿ ತಂಗಿದ್ದ 13 ಜನ ದರೋಡೆಕೋರರನ್ನು ಇಲ್ಲಿನ ಪಟ್ಟಣ ಠಾಣೆ ಪೊಲೀಸರು ಗುರುವಾರ ನಗರದಲ್ಲಿ ಬಂಧಿಸಿದ್ದಾರೆ.

ಬೆಂಗಳೂರಿನ ಜಮೀರ್ ಪಾಷಾ, ಮೊಹಮ್ಮದ್ ಅಯಾನ್, ಯಾಸೀನ್, ಸೈಯದ್ ಅಮೀನ್, ಜಾವೇದ್ ಬಾಷಾ, ಸೈಯದ್ ಇಮ್ತಿಯಾಜ್, ಸ್ಥಳೀಯರಾದ ನಾಲ್ಪರ್ ಖಾಸಿಂ, ಇಸ್ಮಾಯಿಲ್, ಮಂಜುನಾಥ, ಸುರೇಶ, ನಾಗೇಶ, ರಾಘವೇಂದ್ರ ರೆಡ್ಡಿ ಹಾಗೂ ಶೇಖರ್ ಬಂಧಿತರು. ದರೋಡೆಕೋರರ ತಂಡದ ಮುಖ್ಯ ಆರೋಪಿ ಸದ್ದಾಂ ಹುಸೇನ್ ಪರಾರಿಯಾಗಿದ್ದಾನೆ.

'ಬೆಂಗಳೂರಿನ ಇಸ್ಲಾಂಪುರದ ಸದ್ದಾಂ ಹುಸೇನ್ ಎನ್ನುವ ಆರೋಪಿಗೆ ಚಿಕ್ಕಬಳ್ಳಾಪುರ ಜೈಲಿನಲ್ಲಿ ಪರಿಚಯವಾಗಿದ್ದ ಸಂಡೂರು ಮೂಲದ, ಹೊಸಪೇಟೆಯ ಚಿತ್ತವಾಡ್ಗಿ ನಿವಾಸಿ ನಾಲ್ಪರ್ ಖಾಸಿಂನೊಂದಿಗೆ ನಗರಕ್ಕೆ ಬಂದು ಇಲ್ಲಿನ ಶ್ರೀಮಂತರ ಮನೆಗಳನ್ನು ನೋಡಿಕೊಂಡು, ದರೋಡೆ ಮಾಡಲು ಹೊಂಚು ಹಾಕಿದ್ದರು' ಎಂದು ಪ್ರಭಾರ ಡಿವೈಎಸ್ಪಿ ಎಸ್.ಎಸ್. ಕಾಶಿಗೌಡ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದರೋಡೆಗೆ ಹೊಂಚು ಹಾಕಿದ್ದು, ಅವರನ್ನು ಬಂಧಿಸಲು ತಂಡ ರಚಿಸುವಂತೆ ಐಜಿಪಿ ನಂಜುಂಡಸ್ವಾಮಿ ಸೂಚನೆ ಕೊಟ್ಟಿದ್ದರು. ಅದರಂತೆ ಪೊಲೀಸ್ ಇನ್‌ಸ್ಪೆಕ್ಟರ್‌ಗಳಾದ ಶ್ರೀನಿವಾಸ ರಾವ್ ಹಾಗೂ ಬಿ. ಕುಮಾರ್ ನೇತೃತ್ವದಲ್ಲಿ ಎರಡು ತಂಡ ರಚಿಸಲಾಗಿತ್ತು. ತಂಡವು ತನಿಖೆ ನಡೆಸಿ, ಅವರನ್ನು ಬಂಧಿಸಲು ಯಶಸ್ವಿಯಾಗಿದೆ' ಎಂದು ಹೇಳಿದರು.

'ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 402 ಅಡಿ ಡಕಾಯಿತಿ ಉದ್ದೇಶದ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮಾಹಿತಿ ಹಂಚಿಕೊಂಡರು.

ಮೈಸೂರು 'ಮೈತ್ರಿ': ಸಿದ್ದರಾಮಯ್ಯ ಅಸಮಾಧಾನ

'ಕೈ' ನಾಯಕರಲ್ಲಿ ಭಿನ್ನಮತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನನ್ನ ಬಳಿ ಚರ್ಚಿಸದೆ ಹೇಗೆ ತೀರ್ಮಾನ: ಸಿದ್ದರಾಮಯ್ಯ
- ತಪ್ಪು ಮಾಡಿದವರಿಗೆ ನೋಟಿಸ್ ಕೊಡಿ– ರಮೇಶ್‌ಕುಮಾರ್

ಬೆಂಗಳೂರು: ಮೈಸೂರು ಮಹಾನಗರಪಾಲಿಕೆಯ ಮೇಯರ್ ಆಯ್ಕೆ ವಿಷಯದಲ್ಲಿ ಜೆಡಿಎಸ್ ಜತೆ ಕೈಜೋಡಿಸಿರುವುದು ಮತ್ತು ಈ ವಿಷಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಮ್ಮ ನಿವಾಸದಲ್ಲಿ ಗುರುವಾರ ನಡೆದ ಅನೌಪಚಾರಿಕ ಸಭೆಯಲ್ಲಿ ಮೈಸೂರು ಮೇಯರ್ ಆಯ್ಕೆ ವಿಷಯದಲ್ಲಿ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡ ಮತ್ತು ಆ ಪಕ್ಷಕ್ಕೆ ಮೇಯರ್ ಸ್ಥಾನ ಬಿಟ್ಟುಕೊಟ್ಟ ವಿಷಯದಲ್ಲಿ ಸಿದ್ದರಾಮಯ್ಯ ಬೇಸರ ಹೊರಹಾಕಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಮೈಸೂರು ಜಿಲ್ಲೆಯ ರಾಜಕಾರಣದಲ್ಲಿ ಸ್ಥಳೀಯ ನಾಯಕರ ಜೊತೆ ಕೈಜೋಡಿಸುವ ಮೂಲಕ ಡಿ.ಕೆ. ಶಿವಕುಮಾರ್ ಮೂಗು ತೂರಿಸಿದ್ದಾರೆ. ತಮ್ಮ ಜೊತೆ ಚರ್ಚಿಸದೆ ಮೇಯರ್ ಆಯ್ಕೆ ವಿಚಾರದಲ್ಲಿ ಜೆಡಿಎಸ್ ಜೊತೆ ಚರ್ಚೆ ನಡೆಸಿದ್ದಾರೆ. ನನ್ನ ಗಮನಕ್ಕೆ ತಾರದೆ ತೀರ್ಮಾನಗಳಾಗಿವೆ. ನನ್ನ ಬಳಿ ಚರ್ಚಿಸದೆ ಕುಮಾರಸ್ವಾಮಿ ಜೊತೆ ದೂರವಾಣಿ ಕರೆ ಮಾಡಿ ತೀರ್ಮಾನ ಮಾಡುವುದು ಅಂದರೆ ಏನರ್ಥ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರೆಂದು ಮೂಲಗಳು ತಿಳಿಸಿವೆ.

'ನಾನೇನಾದರೂ ಜೆಡಿಎಸ್ ಜೊತೆ ಮೈತ್ರಿ ಬೇಡ ಅಂದಿದ್ದೇನಾ? ನನ್ನ ಗಮನಕ್ಕೆ ತಾರದೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಜೊತೆ ಮಾತುಕತೆ ನಡೆಸಲಾಗಿದೆ. ಮೇಯರ್ ಸ್ಥಾನವನ್ನು ಮಾತಿನಂತೆ ಕಾಂಗ್ರೆಸ್‌ಗೆ ಬಿಟ್ಟುಕೊಡಬೇಕಿತ್ತು. ಹೀಗಾಗಿ ಅಭ್ಯರ್ಥಿ ಹಾಕಿ ಎಂದು ಹೇಳಿದ್ದೆ. ಆದರೆ, ನನಗೆ ಗೊತ್ತಿಲ್ಲದೆ ಕುಮಾರಸ್ವಾಮಿ ಜೊತೆ ಶಿವಕುಮಾರ್ ಮಾತನಾಡಿರುವುದು ಎಷ್ಟರಮಟ್ಟಿಗೆ ಸರಿ? ನಾನು ಎಂದಾದರೂ ರಾಮನಗರ ಜಿಲ್ಲೆಯ ವಿಚಾರಕ್ಕೆ ಮೂಗು ತೂರಿಸಿದ್ದೇನಾ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ ಎಂದೂ ಹೇಳಲಾಗಿದೆ.

ಸಿದ್ದರಾಮಯ್ಯ ಅವರ ಬೆನ್ನಿಗೆ ನಿಂತ ಶಾಸಕ ಕೆ.ಆರ್. ರಮೇಶ್‌ಕುಮಾರ್, 'ಮೈಸೂರು ಮೇಯರ್ ವಿಚಾರದಲ್ಲಿ ತಪ್ಪು ಮಾಡಿದವರಿಗೆ ಮೊದಲು ನೋಟಿಸ್ ಕೊಡಿ' ಎಂದಿದ್ದಾರೆ. 'ಇಲ್ಲಿ ಯಾರಿಗೆ ಲಾಭ, ಯಾರಿಗೆ ನಷ್ಟ ಎಂಬುದು ಮುಖ್ಯ ಅಲ್ಲ. ನಾವೆಲ್ಲರೂ ಒಂದು ವ್ಯವಸ್ಥೆಯೊಳಗೆ ಕೆಲಸ ಮಾಡುತ್ತಿರುತ್ತೇವೆ. ಹೀಗೆ ಮಾಡುವುದರಿಂದ ನಮ್ಮಲ್ಲಿ ಎಲ್ಲವೂ ಸರಿ ಇಲ್ಲ ಎಂಬಂತೆ ಬಿಂಬಿತವಾಗುತ್ತದೆ' ಎಂದೂ ಹೇಳಿದ್ದಾರೆ.

'ನಾನು ಯಾವುದೇ ತೀರ್ಮಾನ ಮಾಡಿಲ್ಲ. ಎಲ್ಲವೂ ಸ್ಥಳೀಯ ನಾಯಕರೇ ಮಾಡಿದ್ದಾರೆ. ಇದರಲ್ಲಿ ನನ್ನ ಪಾತ್ರ ಇಲ್ಲ. ಪಕ್ಷದ ಕಾರ್ಯಾಧ್ಯಕ್ಷ ಧ್ರುವ ನಾರಾಯಣ್, ತನ್ವೀರ್ ಸೇಠ್ ಜೊತೆ ಮಾತನಾಡಿದ್ದೇನೆ. ಅವರು ಅಲ್ಲಿನ ಪರಿಸ್ಥಿತಿ ಹೇಳಿದ್ದರು. ನಾನು ಇದರಲ್ಲಿ ಏನೂ ತೀರ್ಮಾನ ಮಾಡಿಲ್ಲ. ಇನ್ನೊಮ್ಮೆ ತನ್ವೀರ್ ಜೊತೆ ಮಾತನಾಡುತ್ತೇನೆ' ಎಂದು ಶಿವಕುಮಾರ್ ಹೇಳಿದ್ದಾರೆ. ಆಗ ರಮೇಶ್‌ಕುಮಾರ್, 'ತನ್ವೀರ್ ಸೇಠ್ ತಪ್ಪು ಮಾಡಿದ್ದರೆ ಮುಲಾಜಿಲ್ಲದೆ ನೋಟಿಸ್ ಕೊಡಿ' ಎಂದೂ ಸಲಹೆ ನೀಡಿದ್ದಾರೆ. 'ಅಲ್ಲಿ ಏನು ಆಗಿದೆ, ಯಾಕೆ ಹೀಗಾಯಿತು ಎಂದು ಮೊದಲು ವರದಿ ತರಿಸಿಕೊಳ್ಳುತ್ತೇನೆ' ಎಂದು ಹೇಳಿ ಶಿವಕುಮಾರ್ ಸಭೆಯಿಂದ ನಿರ್ಗಮಿಸಿದ್ದಾರೆ.

ಸಭೆಯಲ್ಲಿ ಬೈರತಿ ಸುರೇಶ್, ಕೃಷ್ಣ ಬೈರೇಗೌಡ, ಜಮೀರ್ ಅಹ್ಮದ್ ಕೂಡಾ ಇದ್ದರು.

ಮದ್ಯದಂಗಡಿ ತೆರೆಯದಂತೆ ಗ್ರಾಮಸ್ಥರಿಂದ ಪ್ರತಿಭಟನೆ

ಧರಣಿ ನಡೆಸುತ್ತಿದ್ದ ಮಹಿಳೆಯರ ಮೇಲೆ ಹಲ್ಲೆ: ದೂರು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಚಿಕ್ಕಗೊಲ್ಲರಹಟ್ಟಿಯ ವಸತಿ ಪ್ರದೇಶದಲ್ಲಿ ಅನಧಿಕೃತವಾಗಿ ತೆರೆದಿರುವ ಬಾರ್ ಅಂಡ್ ರೆಸ್ಟೋರೆಂಟ್ ಮುಚ್ಚಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಮಹಿಳೆಯರ ಮೇಲೆ ಬಾರ್ ಮಾಲೀಕರು ಗೂಂಡಾಗಳನ್ನು ಕರೆಸಿ ಹಲ್ಲೆ ನಡೆಸಿದ್ದಾರೆ ಎಂಬ ಬಗ್ಗೆ ದೂರು ದಾಖಲಾಗಿದೆ.

ಬಿ.ಎನ್.ಸರಸ್ವತಿ ಎಂಬುವರು ತೀವ್ರ ಗಾಯಗೊಂಡಿದ್ದು, ಗ್ರಾಮಪಂಚಾಯ್ತಿ ಬಿಜೆಪಿ ಸದಸ್ಯೆ ಕೋಮಲ, ಲಿಂಗಮ್ಮ, ಲಕ್ಷ್ಮಮ್ಮ ಎಂಬುವರ ಮೇಲೆಯೂ ಹಲ್ಲೆ ನಡೆದಿದೆ. ತಾವರೆಕೆರೆ ಠಾಣೆಯಲ್ಲಿ ಕೇಸು ದಾಖಲು ಮಾಡಲಾಗಿದ್ದು, ಬಾರ್ ಮಾಲೀಕ ಶ್ರೀನಿವಾಸಯ್ಯ ಮತ್ತು ಮಕ್ಕಳು ಸಹಚರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಬ್ಯಾಟರಾಯನಪುರದ ಅಬಕಾರಿ ಉಪ ಆಯುಕ್ತರ ಕಚೇರಿ ಮುಂಭಾಗ ಗುರುವಾರ ಧರಣಿ ನಡೆಸಿದ ನೂರಾರು ಮಹಿಳೆಯರು, 'ಯಾವುದೇ ಕಾರಣಕ್ಕೂ ವಸತಿ ಪ್ರದೇಶದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಅನುಮತಿ ನೀಡಬಾರದು. ಒಂದು ವೇಳೆ ತೆರೆದರೆ ನಮ್ಮ ಹೆಣಗಳ ಮೇಲೆ ತೆರೆಯಲಿ' ಎಂದು ಆಕ್ರೋಶವ್ಯಕ್ತಪಡಿಸಿದರು.

'ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಈ ಪ್ರದೇಶದಲ್ಲಿ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿಯಿಂದ ಅನುಮತಿ ನೀಡಿಲ್ಲ. ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ವಿರೋಧ ಮಾಡಲಾಗಿತ್ತು. ಗ್ರಾಮ ಪಂಚಾಯಿತಿ ಸದಸ್ಯರು ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದರೂ ಅಬಕಾರಿ ಉಪಆಯುಕ್ತರ ಮುಂದೆ ಕೇಸು ನಡೆಯುತ್ತಿದ್ದರೂ ಏಕಾಏಕಿ ಬಾರ್ ತೆರೆದಿರುವ ಬಗ್ಗೆ ಪ್ರಶ್ನಿಸಿದ್ದಕ್ಕೆ ಹಲ್ಲೆ ನಡೆಸಿದ್ದಾರೆ' ಎಂದು ಪಂಚಾಯಿತಿ ಸದಸ್ಯರಾದ ಕೋಮಲ, ಸಿದ್ಧಗಂಗಮ್ಮ, ತಮ್ಮಯ್ಯ, ಜಯಣ್ಣ, ಚಿಕ್ಕಣ್ಣ ಆರೋಪಿಸಿದರು.



ಅಬಕಾರಿ ಉಪಆಯುಕ್ತರ ಕಚೇರಿ ಮುಂಭಾಗ ಚಿಕ್ಕಗೊಲ್ಲರಹಟ್ಟಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು

ಹಿರಿಯ ವಕೀಲ ಜಿ.ಕೆ.ಭಟ್, 'ಬಾರ್ ಮಾಲೀಕರು ಅಕ್ರಮವಾಗಿ ಅಂಗಡಿ ತೆರೆದಿದ್ದಾರೆ. ಸರ್ಕಾರಕ್ಕೆ ನೀಡಬೇಕಾದ ತೆರಿಗೆಯನ್ನೂ ಕಟ್ಟಿಲ್ಲ. ಪಂಚಾಯಿತಿ ಪರವಾನಗಿಯೂ ನೀಡಿಲ್ಲ' ಎಂದರು.

'ಮಹಿಳೆಯರ ಮೇಲೆ ಹಲ್ಲೆ ಮಾಡಿರುವವರು ತಲೆ ಮರೆಸಿಕೊಂಡಿದ್ದಾರೆ. ಬಾರ್ ಮಾಲೀಕರು ಗುರುವಾರ ವಿಚಾರಣೆಗೆ ಗೈರು ಹಾಜರಾಗಿದ್ದರು' ಎಂದರು.

ಅಬಕಾರಿ ಉಪ ಆಯುಕ್ತ ಡಾ.ಬಿ. ಆರ್.ಹಿರೇಮಠ್, 'ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಯಾವುದೇ ಪ್ರತಿಕ್ರಿಯೆ ನೀಡಲಾಗದು' ಎಂದು ಹೇಳಿದರು.

‘ನಿಗದಿತ ಏಜೆನ್ಸಿ ಮೂಲಕ ಪರಿಣತರಿಂದಲೇ ‘ಸ್ಫೋಟ’ ನಡೆಸಬೇಕು ಎಂಬ ನಿಯಮ ಉಲ್ಲಂಘನೆ’

ಹೆಸರಿಗೆ ಸಕ್ರಮ: ಒಳಗಡೆ ಅಕ್ರಮ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ಹುಣಸೋಡು ಸ್ಫೋಟ ಪ್ರಕರಣದ ಸಂದರ್ಭದಲ್ಲಿ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕುವುದಾಗಿ ಸರ್ಕಾರ ನೀಡಿದ್ದ ಭರವಸೆ ಚಿಕ್ಕಬಳ್ಳಾಪುರ ಜಿಲ್ಲೆಯ ಹಿರೇನಾಗವಲ್ಲಿ ಸ್ಫೋಟದ ಮೂಲಕ ಸುಳ್ಳಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಂದಾಯ, ಸರ್ಕಾರಿ ಜಮೀನು, ಗೋಮಾಳ, ಪಟ್ಟಾ ಜಮೀನು ಸೇರಿದಂತೆ ಅರಣ್ಯಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ಇನ್ನೂ ಕಡಿವಾಣ ಬಿದ್ದಿಲ್ಲ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅಧಿಕೃತವಾಗಿ ಪರವಾನಗಿ ಪಡೆದಿರುವ ಗಣಿ ಗುತ್ತಿಗೆದಾರರ ಅಕ್ರಮ ನಿಂತಿಲ್ಲ. ಪೊಲೀಸರು ಪ್ರತಿನಿತ್ಯ ಡಿಟೋನೇಟರ್, ಜಿಲೆಟಿನ್‌ಗಳನ್ನು ಜಪ್ತಿ ಮಾಡುತ್ತಿರುವುದು ಇದನ್ನು ಪುಷ್ಟೀಕರಿಸಿದೆ.

ಸಂಜೆ 5ರ ನಂತರವಷ್ಟೇ ಕ್ವಾರಿಗಳಲ್ಲಿ ಸ್ಫೋಟ ನಡೆಸಬೇಕು. ದಿನಕ್ಕೆ ಐದಾರು ಗಂಟೆ ಮಾತ್ರ ಈ ಕಾರ್ಯ ಮಾಡಬೇಕು ಎನ್ನುವ ನಿಯಮವಿದೆ. ಆದರೆ, ಹಲವು ಕಡೆಗಳಲ್ಲಿ ಹಗಲು ಹೊತ್ತಿನಲ್ಲೇ ಸ್ಫೋಟಕ ಬಳಸಿ ಬಂಡೆ ಸಿಡಿಸಲಾಗುತ್ತಿದೆ. ನಿಗದಿತ ಏಜೆನ್ಸಿ ಮೂಲಕ, ಪರಿಣತರಿಂದಲೇ ‘ಸ್ಫೋಟ’ ನಡೆಸಬೇಕು ಎಂಬ ನಿಯಮವನ್ನು ಗಾಳಿಗೆ ತೂರಲಾಗುತ್ತಿದೆ ಎಂಬುದು ಸಂತ್ರಸ್ತ ಗ್ರಾಮಸ್ಥರ ದೂರು.

ನಿಲ್ಲದ ಅಕ್ರಮ: ಹುಣಸೋಡು ಘಟನೆ ಬಳಿಕ ಮುನ್ನೆಚ್ಚರಿಕೆ ವಹಿಸುವಂತೆ ದಾವಣಗೆರೆ ಜಿಲ್ಲೆಯ ಕ್ರಷರ್ ಮತ್ತು ಕ್ವಾರಿ ಮಾಲೀಕರಿಗೆ ಸೂಚಿಸಲಾಗಿತ್ತು. ದಾವಣಗೆರೆ ತಾಲ್ಲೂಕಿನ ಆಲೂರಿನಲ್ಲಿ ಒಂದು ಡಿಟೋನೇಟರ್ ಪತ್ತೆಯಾಗಿದ್ದು, ಪ್ರಕರಣ ದಾಖಲಾಗಿದೆ.

ಕಲಬುರ್ಗಿ ಜಿಲ್ಲೆಯ ಬೀದರ್ ತಾಲ್ಲೂಕಿನ ಸುಲ್ತಾನಪುರ ಬಳಿ ತೆಲಂಗಾಣ ಗಡಿಯಲ್ಲಿ ಪೊಲೀಸರು ದಾಳಿ ನಡೆಸಿ 16 ಕ್ವಿಂಟಲ್ ಜಿಲೆಟಿನ್ ಜಪ್ತಿ ಮಾಡಿದ್ದಾರೆ. ಅಕ್ರಮ ಚಟುವಟಿಕೆ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಈ ಪ್ರಕರಣವೇ ಸಾಕ್ಷಿಯಾಗಿದೆ.

ಮೂರು ಏಜೆನ್ಸಿಗಳಿಗಷ್ಟೇ ಸ್ಫೋಟದ ಅನುಮತಿ: ರಾಮನಗರ ಜಿಲ್ಲೆಯಲ್ಲಿ ಕೇವಲ ಮೂರು ಏಜೆನ್ಸಿಗಳಷ್ಟೇ ಸ್ಫೋಟಕ್ಕೆ ಅನುಮತಿ ಪಡೆದಿವೆ. ಈ ಏಜೆನ್ಸಿಗಳ ಮೂಲಕವೇ ಎಲ್ಲ ಕ್ವಾರಿಗಳಲ್ಲಿ ಸ್ಫೋಟ ನಡೆಸಬೇಕಿದೆ. ಆದರೆ, ಗಣಿ ಮಾಲೀಕರು ಈ ಕಾರ್ಯಕ್ಕೆ ಪರಿಣತರಲ್ಲದ ಕಾರ್ಮಿಕರನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಹೊರರಾಜ್ಯಗಳ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಈ ಕೆಲಸ ಮಾಡುತ್ತಿದ್ದಾರೆ. ಆಗಾಗ್ಗೆ ಅವಘಡ ನಡೆಯುತ್ತವೆಯಾದರೂ ಬೆಳಕಿಗೆ ಬರುವುದು ಕಡಿಮೆ. ಹೆಚ್ಚಿನ ಸಂದರ್ಭಗಳಲ್ಲಿ ಕಾರ್ಮಿಕರ ಕುಟುಂಬಗಳಿಗೆ ಹೆಚ್ಚಿನ ಪರಿಹಾರ ನೀಡಿ ಮುಚ್ಚಿಹಾಕಲಾಗುತ್ತಿದೆ ಎಂದು ಗಣಿಯಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರು ಹೇಳುತ್ತಾರೆ.

ಇನ್ನಷ್ಟು ವಿಶೇಷ ನಾಳೆ



ಕೋಲಾರ ತಾಲ್ಲೂಕಿನ ಬೆಟ್ಟಹೊಸಪುರ ಹೊರವಲಯದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯ ನೋಟ

ಅಕ್ರಮ ಗಣಿಗಾರಿಕೆಯಿಂದ ಕೃಷಿಗೆ ಆಪತ್ತು

ಅಕ್ರಮ ಗಣಿಗಾರಿಕೆಯು ಕೃಷಿ ಚಟುವಟಿಕೆಗೂ ಕಂಟಕ ತಂದೊಡ್ಡಿದೆ. ಇದಕ್ಕೆ ಕೋಲಾರ ತಾಲ್ಲೂಕಿನ ಅಂದ್ರಹಳ್ಳಿ, ಬೆಟ್ಟಹೊಸಪುರದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆ ನಿದರ್ಶನವಾಗಿದೆ.

ಸ್ಫೋಟದ ತೀವ್ರತೆಗೆ ಸುತ್ತಮುತ್ತಲ ಗ್ರಾಮಗಳಲ್ಲಿ ಮನೆಯ ಗೋಡೆಗಳು ಬಿರುಕು ಬಿಟ್ಟಿದ್ದು, ಗ್ರಾಮಸ್ಥರು ಜೀವಭಯದಲ್ಲಿ ಬದುಕುತ್ತಿದ್ದಾರೆ. ಗಣಿಗಾರಿಕೆಯ ದೂಳಿನಿಂದ ಸುತ್ತಮುತ್ತಲಿನ ಚೊಕ್ಕಪುರ, ಸೂಲೂರು, ಹೊರಕೆರೆ, ಪೆಮ್ಮಚಟ್ಟಹಳ್ಳಿ, ಧನಮಟ್ಟಹಳ್ಳಿಯ ಜಮೀನುಗಳಲ್ಲಿ ಬೆಳೆಗಳು ಒಣಗುತ್ತಿವೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಮಂಟಿ ಬಿಳಗೂಲಿ ಗ್ರಾಮದ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ರಾಜಕಾರಣಿಯೊಬ್ಬರು ಈ ಭಾಗದ ಸೀತೆಬೆಟ್ಟದಲ್ಲಿ ಕ್ರಷರ್ ನಡೆಸುತ್ತಿದ್ದು, ಗ್ರಾಮದಲ್ಲಿ ಮನೆಗಳು ಮನೆಗಳು ಬಿರುಕು ಬಿಟ್ಟಿವೆ. ತುಮಕೂರು ಜಿಲ್ಲೆಯಲ್ಲಿ 30ಕ್ಕೂ ಹೆಚ್ಚು ಕಡೆ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತಿದೆ ಎಂಬ ಮಾಹಿತಿ ಇದ್ದರೂ ನಿಯಂತ್ರಣ ಸಾಧ್ಯವಾಗಿಲ್ಲ. ಸ್ಫೋಟಕ ಬಳಸುತ್ತಿರುವುದರಿಂದ ಮನೆಗಳು ಬಿರುಕು ಬಿಡುವುದು ಸಾಮಾನ್ಯವಾಗಿದೆ.

ಹೊಸಪೇಟೆ: ನದಿ ಪಥಕ್ಕೆ ಅಪಾಯ

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರ ಬಳಿ ಕಲ್ಲು ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ. ತುಂಗಭದ್ರಾ ನದಿಗೆ ಹೊಂದಿಕೊಂಡಂತೆ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದರಿಂದ ಇಡೀ ನದಿ ಮಾರ್ಗವೇ ಬದಲಾಗುವ ಆತಂಕ ಪರಿಸರ ಪ್ರೇಮಿಗಳದ್ದು. ಈ ಸಂಬಂಧ ಅವರು ಹಲವು ಬಾರಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರೂ ಫಲಶ್ರುತಿ ಶೂನ್ಯ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅರ್ಕಾವತಿ ನದಿ ಪಾತ್ರದ ವ್ಯಾಪ್ತಿ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 15 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ಪರವಾನಗಿ ನೀಡಲು ಅವಕಾಶವಿಲ್ಲ ಎಂಬುದು ಸರ್ಕಾರದ ನಿಯಮ. ಆದರೆ, ಇದನ್ನು ಗಾಳಿಗೆ ತೂರಲಾಗಿದೆ.

ಮಂಗಳೂರು ಹೊರವಲಯದ ಮಳವೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡವಪದವು ಕೊರಗರ ಕಾಲೊನಿಯಲ್ಲಿ ನಿಯಮ ಉಲ್ಲಂಘಿಸಿ ಕೆಂಪು ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಕಲಬುರ್ಗಿ: ಕಲ್ಲು ಗಣಿಗಾರಿಕೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಜಿಲ್ಲೆಯ ಕಲಬುರ್ಗಿ, ಸೇಡಂ, ಚಿಂಚೋಳಿ, ಯಡ್ರಾಮಿ, ಶಹಾಬಾದ್ ಸೇರಿದಂತೆ ಹಲವು ತಾಲ್ಲೂಕುಗಳಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಹಾಗೂ ಪರವಾನಗಿ ಅವಧಿ ಮೀರಿದರೂ ಗಣಿಗಾರಿಕೆ ನಡೆಸಿದ್ದನ್ನು ಪತ್ತೆ ಹಚ್ಚಿದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳ ತಂಡ, ಹಲವು ಯಂತ್ರಗಳನ್ನು ವಶಪಡಿಸಿಕೊಂಡು ಮೊಕದ್ದಮೆ ಹೂಡಿದೆ.

ಕಲಬುರ್ಗಿ ತಾಲ್ಲೂಕಿನ ಬೇಲೂರ ಗ್ರಾಮದ ಪಟ್ಟಾ ಭೂಮಿಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿದ್ದನ್ನು ಪತ್ತೆ ಹಚ್ಚಿ ಒಂಬತ್ತು ಹಿಟಾಚಿ ಯಂತ್ರಗಳನ್ನು ಇಲಾಖೆಯ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಸಿಂದಗಿ (ಬಿ) ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ ಆರು ಜನರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಯಡ್ರಾಮಿ ತಾಲ್ಲೂಕಿನ 13 ಕಡೆಗಳಲ್ಲಿ ಕಲ್ಲು ಗಣಿಗಾರಿಕೆಯಲ್ಲಿ ತೊಡಗಿದ್ದ 13 ಜನ ಹಾಗೂ ಸೇಡಂ ತಾಲ್ಲೂಕಿನ ಆಡಕಿ ಗ್ರಾಮದಲ್ಲಿ 6 ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ. ಶಹಾಬಾದ್ ತಾಲ್ಲೂಕಿನ ಮುತಗಾ ಗ್ರಾಮದಲ್ಲಿ ಗಣಿಗಾರಿಕೆಗೆ ಬಳಸಿದ ಯಂತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕ ಮೋಹನ್ ಎಸ್. ತಿಳಿಸಿದರು.

ಗಡಿಯಲ್ಲಿ 16 ಕ್ವಿಂಟಲ್ ಜಿಲೆಟಿನ್ ಜಪ್ತಿ

ಒಂದನೇ ಪುಟದಿಂದ

‘ಜಿ.ಕೆ.ಕನ್‌ಸ್ಟ್ರಕ್ಷನ್ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅಗತ್ಯ ದಾಖಲೆಗಳನ್ನು ಒದಗಿಸುವಂತೆ ಸೂಚನೆಯನ್ನೂ ನೀಡಲಾಗಿದೆ. ಪ್ರಕರಣದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಕುರಿತು ತನಿಖೆ ಮುಂದುವರಿದಿದೆ’ ಎಂದು ಅವರು ಹೇಳಿದ್ದಾರೆ.

‘ಜಿ.ಕೆ.ಕನ್‌ಸ್ಟ್ರಕ್ಷನ್ ತೆಲಂಗಾಣದ ಗಡಿಯೊಳಗೆ ಕಲ್ಲು ಗಣಿಗಾರಿಕೆ ನಡೆಸುತ್ತಿರಬಹುದು. ಬೀದರ್ ಜಿಲ್ಲೆಯೊಳಗೆ ಅವರಿಗೆ ಗಣಿಗಾರಿಕೆಗೆ ಅನುಮತಿ ನೀಡಿಲ್ಲ. ಜಿಲೆಟಿನ್ ಸ್ಫೋಟಕ ಬಳಕೆಯ ಅನುಮತಿ ಕೊಡುವವರು ಪೊಲೀಸರು. ಹೀಗಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಗಳೇ ಅದಕ್ಕೆ ಹೊಣೆಯಾಗಿರುತ್ತವೆ’ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಮೂರನೇ ಪ್ರಕರಣ: ‘ಕಳೆದ ವರ್ಷ ಭಾಲ್ಕಿ ತಾಲ್ಲೂಕಿನ ಮಾಂಜ್ರಾ ನದಿ ಸಮೀಪ ಕ್ವಾರಿಯಲ್ಲಿ ಬಳಸಲು ಸಂಗ್ರಹಿಸಿದ್ದ ಜಿಲೆಟಿನ್ ಕಡ್ಡಿಗಳನ್ನು ವಶ ಪಡಿಸಿಕೊಳ್ಳಲಾಗಿತ್ತು. 25 ದಿನಗಳ ಹಿಂದೆ ಜನವಾಡ ಪೊಲೀಸರು ಬೀದರ್ ತಾಲ್ಲೂಕಿನ ನಾಗರೆ ಸ್ಟೋನ್ ಕ್ರಶರ್ ಮೇಲೆ ದಾಳಿ ನಡೆಸಿ 9 ಜಿಲೆಟಿನ್ ಕಡ್ಡಿಗಳನ್ನು ವಶಪಡಿಸಿಕೊಂಡು, ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು. ಎರಡು ವರ್ಷಗಳಲ್ಲಿ ಇದು ಮೂರನೇ ಪ್ರಕರಣ ಆಗಿದೆ’ ಎಂದು ಎಸ್ಪಿ ವಿವರಿಸಿದ್ದಾರೆ.

ಹುಲ್ಲುಗಾವಲು ಮಾಯ!

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ಸದ್ದು ಜೋರಾಗಿಯೇ ಕೇಳಿಬರುತ್ತಿದೆ. ಜಿಲ್ಲೆಯಲ್ಲಿ 48 ಪರವಾನಗಿ ಪಡೆದ ಕ್ವಾರಿಗಳಿವೆ ಎಂಬುದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಂಕಿಅಂಶ. ಆದರೆ, 100ಕ್ಕೂ ಹೆಚ್ಚು ಕ್ವಾರಿಗಳು ಸಕ್ರಿಯವಾಗಿದ್ದು, ಇವುಗಳಲ್ಲಿ ಬಹುತೇಕ ಅಕ್ರಮ ಕ್ವಾರಿಗಳು ಎಂಬುದು ಗ್ರಾಮಸ್ಥರು ಮತ್ತು ಪರಿಸರವಾದಿಗಳ ವಾದ.

‘ರಾಣೆಬೆನ್ನೂರು ತಾಲ್ಲೂಕಿನ ಕಜ್ಜರಿ ಗ್ರಾಮದ ಬಳಿ ಹುಲ್ಲುಗಾವಲು ಪ್ರದೇಶದಲ್ಲಿ ಪ್ರಭಾವಿ ರಾಜಕೀಯ ಕುಟುಂಬದವರು ಕಲ್ಲು ಗಣಿಗಾರಿಕೆ ನಡೆಸುತ್ತಾರೆ. ಇದರಿಂದ ಜಾನುವಾರುಗಳಿಗೆ ಮೇಯಲು ಹುಲ್ಲುಗಾವಲು ಪ್ರದೇಶ ಇಲ್ಲದಂತಾಗಿದೆ’ ಎನ್ನುತ್ತಾರೆ ಕಜ್ಜರಿ ಗ್ರಾಮದ ಸಂಜೀವ ಮೋಟೆಬೆನ್ನೂರ.

ರಾಣೆಬೆನ್ನೂರು ತಾಲ್ಲೂಕಿನ ಕಜ್ಜರಿ, ಕಾಕೋಳ, ಹುಣಸೀಕಟ್ಟಿ, ದೇವರಗುಡ್ಡ ಹಾಗೂ ಹಾವೇರಿ ತಾಲ್ಲೂಕಿನ ನೆಲೋಗಲ್ಲ ಗ್ರಾಮಗಳ ಬಳಿ ಕಲ್ಲುಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ. ಹಿಟಾಚಿ, ಜೆಸಿಬಿ, ಟಿಪ್ಪರ್ ವಾಹನಗಳು ಹಗಲು– ರಾತ್ರಿ ಎನ್ನದೆ ಸದ್ದು ಮಾಡುತ್ತವೆ. ಇದರಿಂದ ಸುತ್ತಮುತ್ತಲ ಗ್ರಾಮಸ್ಥರ ನೆಮ್ಮದಿ ಹಾಳಾಗಿದೆ.

‘ಹೊರರಾಜ್ಯದ ಕೂಲಿಕಾರ್ಮಿಕರು ಕಡಿಮೆ ಸಂಬಳಕ್ಕೆ ಪ್ರಾಣ ಒತ್ತೆಯಿಟ್ಟು ದುಡಿಯುತ್ತಾರೆ. ಸ್ಫೋಟದಲ್ಲಿ ಗಾಯಗೊಂಡ ಕಾರ್ಮಿಕರು ಚಿಕಿತ್ಸೆ ಪಡೆದು ಸದ್ದಿಲ್ಲದೆ ತಮ್ಮ ಊರುಗಳನ್ನು ಸೇರುತ್ತಿದ್ದಾರೆ. ಕಲ್ಲು ಗಣಿಗಾರಿಕೆಯಿಂದ ಸಿಡಿಯುವ ಕಲ್ಲುಗಳು ಬೆಳೆ ಹಾಳು ಮಾಡುತ್ತಿವೆ. ಗಣಿಗಾರಿಕೆಯ ದೂಳು ಗ್ರಾಮಸ್ಥರನ್ನು ಉಸಿರುಗಟ್ಟಿಸುತ್ತಿದೆ’ ಎನ್ನುವುದು ರೈತ ಮುಖಂಡ ರವೀಂದ್ರಗೌಡ ಪಾಟೀಲ ದೂರು.

ಸುದ್ದಿ 2 ನಿಮಿಷ

ಮದ್ದೂರು: ರೇಣುಕಾ ಎಲ್ಲಮ್ಮ ಮುತ್ತಿನ ಪಲ್ಲಕ್ಕಿ ಉತ್ಸವ ನಾಳೆ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ಹೊಳೆಬೀದಿಯಲ್ಲಿರುವ ರೇಣುಕಾ ಎಲ್ಲಮ್ಮ ದೇವಿ ಸೇವಾ ಟ್ರಸ್ಟ್ ವತಿಯಿಂದ, ಇದೇ 27ರಂದು ದೇವಿಯ 49ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ 22ನೇ ವರ್ಷದ ಮಹಾಚಂಡಿಕಾ ಹೋಮ ನಡೆಯಲಿದೆ.

ಚಿಕ್ಕಸವದತ್ತಿ ಎಂದೇ ಪ್ರಖ್ಯಾತಿ ಪಡೆದಿರುವ ಕ್ಷೇತ್ರದಲ್ಲಿ, ಪ್ರತಿ ವರ್ಷ ವೈಭವದ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ಫೆ.26ರಂದು ಸಂಜೆ 6 ಗಂಟೆಗೆ ಮೂಲದೇವರ ಅನುಜ್ಞೆ, ಭೂಶಾಂತಿ, ಗಣಪತಿ ಪೂಜೆ, ಗಂಗಾಪೂಜೆ, ಸ್ವಸ್ತಿವಾಚನ, ಪಂಚಗವ್ಯಾರಾಧನೆ, ದೇವನಾಂದಿ, ಋತ್ವಿಕ್ ವರ್ಣನೆ, ಕ್ಷೇತ್ರಪಾಲ ವಾಸ್ತೋಷ್ಪತಿ, ಪ್ರಾರ್ಥನೆ, ಕಳಶ ಸ್ಥಾಪನೆ ಹಾಗೂ ಮಹಾಮಂಗಳಾರತಿ ನಡೆಯಲಿದೆ.

ಇದೇ 27ರಂದು ಬೆಳಿಗ್ಗೆ 7.30ಕ್ಕೆ ಮಹಾಚಂಡಿಕಾ ಹೋಮ, ಬೆಳಿಗ್ಗೆ 11.30ಕ್ಕೆ ಪೂರ್ಣಾಹುತಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ತಂಬಿಟ್ಟಿನ ಆರತಿ ನಡೆಯಲಿದ್ದು, ಮಧ್ಯಾಹ್ನ ಅನ್ನಸಂತರ್ಪಣೆ ಆಯೋಜಿಸಲಾಗಿದೆ. ಮಧ್ಯಾಹ್ನ 2.30ರಿಂದ ಸಂಜೆ 5 ಗಂಟೆಯವರೆಗೆ ದೇವಿಗೆ ನಿಂಬೆಹಣ್ಣಿನ ದೀಪದ ಆರತಿ ಮತ್ತು ಅಮ್ಮನವರ ಉಯ್ಯಾಲೆ ಉತ್ಸವ ಏರ್ಪಡಿಸಲಾಗಿದೆ. ರಾತ್ರಿ 8.10ರಿಂದ ವಿವಿಧ ಪುಷ್ಪಗಳ ಅಲಂಕಾರದೊಂದಿಗೆ ದೇವಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ನಡೆಸಲಾಗುವುದು.



ಇದೇ 28ರಂದು ಬೆಳಿಗ್ಗೆ 6 ಗಂಟೆಗೆ ದೇವಿಯನ್ನು ದೇವಸ್ಥಾನದ ಮೂಲಸ್ಥಾನಕ್ಕೆ ಆಹ್ವಾನಿಸಲಾಗುವುದು. ನಂತರ ಪಂಚಗವ್ಯಾರಾಧನೆ, ಪುಣ್ಯಾಹವಾಚನ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಮಾರ್ಚ್ 12ರಿಂದ ‘ಪರ್ವ’ ಪ್ರದರ್ಶನ

ಮೈಸೂರು: ರಂಗಾಯಣದ ವತಿಯಿಂದ ಆಯೋಜಿಸಿರುವ, ಡಾ.ಎಸ್.ಎಲ್. ಭೈರಪ್ಪ ಅವರ ‘ಪರ್ವ’ ಕಾದಂಬರಿಯ ರಂಗರೂಪದ ಪ್ರದರ್ಶನವು ಮಾರ್ಚ್ 12ರಿಂದ ಆರಂಭವಾಗಲಿದೆ.

ಪ್ರಕಾಶ್ ಬೆಳವಾಡಿ ನಿರ್ದೇಶನದಲ್ಲಿ, ಇಲ್ಲಿನ ಕಲಾಮಂದಿರದಲ್ಲಿ ಮಾರ್ಚ್ 12, 13 ಹಾಗೂ 14ರಂದು ಬೆಳಿಗ್ಗೆ 10 ಗಂಟೆಗೆ ನಾಟಕ ಪ್ರದರ್ಶನಗೊಳ್ಳಲಿದೆ. ಈ ಮೂರು ದಿನಗಳ, ಒಟ್ಟು 2,460 ಆಸನಗಳಲ್ಲಿ 130 ಆಸನಗಳನ್ನು ಡಾ.ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನವು ₹ 1 ಸಾವಿರದಂತೆ ಪ್ರಾಯೋಜಿಸಿದೆ. ಉಳಿದಂತೆ ₹ 500 ಮತ್ತು ₹ 250 ದರದಲ್ಲಿ, ಟಿಕೆಟ್ ಕಾಯ್ದಿರಿಸುವಿಕೆ ಇರಲಿದೆ.

ಮಾರ್ಚ್ 25, 26 ಮತ್ತು 27ರಂದು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಸಂಜೆ 6.30ಕ್ಕೆ ಸಂಚಿಕೆ ರೂಪದಲ್ಲಿ (ಎರಡೂವರೆ ಗಂಟೆ ಅವಧಿ) ನಾಟಕ ಪ್ರದರ್ಶನಗೊಳ್ಳಲಿದೆ. 28ರಂದು ಬೆಳಿಗ್ಗೆ 10ರಿಂದ ಪೂರ್ಣ ನಾಟಕ ಪ್ರದರ್ಶನ ಇರಲಿದೆ. ಇದೇ ರೀತಿ ಪ್ರತೀ ವಾರ ಏಪ್ರಿಲ್ 25ರವರೆಗೆ ಪ್ರದರ್ಶನಗಳು ನಡೆಯಲಿವೆ. ಸಂಚಿಕೆ ಪ್ರದರ್ಶನಕ್ಕೆ ನಿತ್ಯ ₹ 100 ಮತ್ತು ಭಾನುವಾರ ಪೂರ್ಣ ನಾಟಕಕ್ಕೆ ₹ 250 ಟಿಕೆಟ್ ದರ ನಿಗದಿಪಡಿಸಲಾಗಿದೆ. ಈ ಎಲ್ಲ ಪ್ರದರ್ಶನಗಳ ಟಿಕೆಟ್ ಬುಕ್ಕಿಂಗ್ ಆರಂಭವಾಗಿದೆ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ ದೂ: 0821-2512639, 2512629, www.rangayana.org ಸಂಪರ್ಕಿಸಬಹುದು.

2 ಲಕ್ಷದ ಮೈಲಿಗಲ್ಲು ದಾಟಿದ ಪ್ರಜಾವಾಣಿ ಪಾಡ್‌ಕಾಸ್ಟ್

ಕನ್ನಡ ಪತ್ರಿಕಾ ಲೋಕದಲ್ಲಿ ಮೊದಲ ಬಾರಿಗೆ ಪಾಡ್‌ಕಾಸ್ಟ್ ಎಂಬ ಧ್ವನಿ ಮಾಧ್ಯಮದ ಮೂಲಕ ಸಾಕಷ್ಟು ಕೇಳುಗರ ಮೆಚ್ಚುಗೆಗೆ ಪಾತ್ರವಾಗಿರುವ ಪ್ರಜಾವಾಣಿಯ ‘ಕನ್ನಡಧ್ವನಿ’ ಪಾಡ್‌ಕಾಸ್ಟ್ ಚಾನೆಲ್ ಈಗ 2 ಲಕ್ಷದ ಗಡಿಯನ್ನು ದಾಟಿದೆ.

2020ರ ಜೂನ್ ತಿಂಗಳಲ್ಲಿ ಪಾಡ್‌ಕಾಸ್ಟ್ ಎಂಬ ಧ್ವನಿ ಪ್ರಸಾರ ವ್ಯವಸ್ಥೆಯ ಮೂಲಕ ಕೇಳುಗರನ್ನು ತಲುಪುವ ಕಾಯಕಕ್ಕೆ ಮುಂದಾದ ನಾಲ್ಕೇ ತಿಂಗಳಲ್ಲಿ ಕನ್ನಡಧ್ವನಿಯು 1 ಲಕ್ಷ ಮಂದಿ ಕೇಳುಗರನ್ನು ತಲುಪಿತ್ತು. ಈಗ 2 ಲಕ್ಷ ಮಂದಿ ಪ್ರಜಾವಾಣಿ ಪಾಡ್‌ಕಾಸ್ಟ್‌ನ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕಂಪ್ಯೂಟರ್, ಮೊಬೈಲ್ ಮೂಲಕ ಆಲಿಸಿದ್ದಾರೆ.

ವಾರಕ್ಕೊಮ್ಮೆ ಪ್ರಕಟವಾಗುತ್ತಾ ಜನಮೆಚ್ಚುಗೆ ಪಡೆದಿದ್ದ ಶರಣರ ವಚನಗಳ ವಾಚನ, ವಿಶ್ಲೇಷಣೆ ಮತ್ತು ಗಾಯನ ಸರಣಿ ‘ವಚನವಾಣಿ’ ಈಗ ಕೇಳುಗರ ಬೇಡಿಕೆಯಿಂದ ಪ್ರತಿದಿನವೂ ಪ್ರಸಾರವಾಗುತ್ತಿದೆ. ಇದನ್ನು ನಡೆಸಿಕೊಡುವವರು ಡಾ.ಬಸವರಾಜ ಸಾದರ್, ಡಾ.ಕುಮಾರ್ ಕಣವಿ, ಬಸವಕುಮಾರ್, ಕವಿತಾ ಸಾದರ್ ಹಾಗೂ ತಂಡ. ಇದೇ ವೇಳೆ, ಪ್ರತೀ ಶನಿವಾರ ಪ್ರಸಾರವಾಗುವ, ಪ್ರಚಲಿತ ವಿದ್ಯಮಾನಗಳ ಕುರಿತ ಮಾಹಿತಿಪೂರ್ಣ ಚರ್ಚಾ ಸರಣಿ ‘ಹರಟೆ ಕಟ್ಟೆ’ಗೆ ಕೇಳುಗರ ಸಂಖ್ಯೆ ದುಪ್ಪಟ್ಟಾಗಿದೆ. ಅಂತೆಯೇ, ಪ್ರತಿ ಶುಕ್ರವಾರ ಮಕ್ಕಳ ಏಕಾಗ್ರತೆಗೆ ನೆರವಾಗುತ್ತಲೇ, ಕಥೆ ಕೇಳಿಸುವ 'ಕಥೆ ಕೇಳು ಮಗುವೇ' ಕಾರ್ಯಕ್ರಮವಂತೂ ಕೋವಿಡ್ ಕಾಲದಲ್ಲಿ ಮಕ್ಕಳ ಮನವರಳಿಸುವಲ್ಲಿ ನೆರವಾಗಿದೆ.



ಪ್ರತಿದಿನವೂ ಸಂಪಾದಕೀಯ, ಪ್ರಚಲಿತ ವಿದ್ಯಮಾನ, ದಿನದ ಸೂಕ್ತಿ ಇವುಗಳಲ್ಲದೆ, ದೈನಿಕ ವಿಶೇಷವಾಗಿ ಭಾನುವಾರ ವೈದ್ಯಮಿತ್ರ ಮತ್ತು ಕಥಾ ಸಾಗರ, ಮಂಗಳವಾರ ಸುದ್ದಿ ಸ್ವಾರಸ್ಯ, ಬುಧವಾರ ಝಣ ಝಣ ಕಾಂಚಾಣ, ಗುರುವಾರ ವನಿತಾ ಧ್ವನಿ ಮತ್ತು ಆಟ-ನೋಟ, ಶುಕ್ರವಾರ ಮ್ಯಾಟಿನಿ ಶೋ ಪ್ರಸಾರವಾಗುತ್ತಿದೆ.

ಪ್ರಜಾವಾಣಿ ಪಾಡ್‌ಕಾಸ್ಟ್ ಅನ್ನು ಪ್ರಜಾವಾಣಿ ಜಾಲತಾಣದಲ್ಲಿ **(Prajavani.net/podcast)** ಹಾಗೂ ಆ್ಯಂಕರ್, ಆ್ಯಪಲ್ ಪಾಡ್‌ಕಾಸ್ಟ್, ಸ್ಪಾಟಿಫೈ, ಬ್ರೇಕರ್, ಗೂಗಲ್ ಪಾಡ್‌ಕಾಸ್ಟ್, ಪಾಕೆಟ್ ಕಾಸ್ಟ್, ರೇಡಿಯೋ ಪಬ್ಲಿಕ್ ಹಾಗೂ ಓವರ್‌ಕಾಸ್ಟ್ ತಾಣಗಳು ಮತ್ತು ಆ್ಯಪ್‌ಗಳ ಮೂಲಕವೂ ಕೇಳಬಹುದಾಗಿದೆ.

ಕೆಎಸ್‌ಒಯು ವರ್ಚುವಲ್ ಉದ್ಯೋಗ ಮೇಳ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (ಕೆಎಸ್‌ಒಯು) ಜಾಬ್ ಕಾರ್ಟ್ ಕಂಪನಿ ಸಹಯೋಗದಲ್ಲಿ ಮಾರ್ಚ್ 15ರಿಂದ 22ರ ವರೆಗೆ ವರ್ಚುವಲ್ ಉದ್ಯೋಗ ಮೇಳ ಆಯೋಜಿಸಿದೆ ಎಂದು ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್ ತಿಳಿಸಿದರು.

‘100ಕ್ಕೂ ಅಧಿಕ ಕಂಪನಿಗಳು ಮೇಳದಲ್ಲಿ ಪಾಲ್ಗೊಳ್ಳಲಿವೆ. ಐಟಿಐ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಪಡೆದವರು ಮೇಳದಲ್ಲಿ ಭಾಗವಹಿಸಬಹುದು’ ಎಂದರು.

ಭಾಗಿ ಹೇಗೆ?: ಉದ್ಯೋಗಾಕಾಂಕ್ಷಿಗಳು ಮೊಬೈಲ್‌ನಲ್ಲಿ ಜಾಬ್ ಕಾರ್ಟ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಲಾಗಿನ್ ಆಗಿ ಹೆಸರು, ವಿದ್ಯಾರ್ಹತೆ, ಜನ್ಮ ದಿನಾಂಕ ಭರ್ತಿ ಮಾಡಬೇಕು.

ಮಾರ್ಚ್ 15ರಿಂದ ಎಂಟು ದಿನಗಳ ವರೆಗೆ, ಅಭ್ಯರ್ಥಿಗಳ ವಿದ್ಯಾರ್ಹತೆಗೆ ತಕ್ಕಂತೆ ಕಂಪನಿಗಳು ಆ್ಯಪ್‌ನಲ್ಲೇ ಉದ್ಯೋಗದ ಮಾಹಿತಿ ನೀಡುತ್ತವೆ. ಆನ್‌ಲೈನ್‌ನಲ್ಲೇ ಸಂದರ್ಶನ ಮಾಡಲಿವೆ ಎಂದು ಜಾಬ್ ಕಾರ್ಟ್ ಸಿಇಒ ಎಸ್.ವಿ.ವೆಂಕಟೇಶ್ ಅವರು ಮಾಹಿತಿ ನೀಡಿದರು.

ವಿವರಗಳಿಗೆ ಹೆಲ್ಪ್‌ಲೈನ್: 9513373737

ಮಡಿವಾಳರ ಪ್ರತಿಭಟನಾ ರ‍್ಯಾಲಿ 5ಕ್ಕೆ

ಚಿತ್ರದುರ್ಗ: ಪರಿಶಿಷ್ಟ ಜಾತಿ (ಎಸ್‌ಸಿ) ಪಟ್ಟಿಗೆ ಸೇರ್ಪಡೆ ಮಾಡುವಂತೆ ಒತ್ತಾಯಿಸಿ ಮಡಿವಾಳ ಸಮುದಾಯ ಮಾರ್ಚ್ 5ರಂದು ಬೆಂಗಳೂರಿನಲ್ಲಿ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಂಡಿದೆ.



ಬಸವ ಮಾಚಿದೇವ ಸ್ವಾಮೀಜಿ

ಮಡಿವಾಳ ಮಹಾಸಂಸ್ಥಾನದಲ್ಲಿ ನಡೆದ ರಾಜ್ಯಮಟ್ಟದ ಪೂರ್ವಭಾವಿ ಸಭೆಯ ಬಳಿಕ ಈ ನಿರ್ಧಾರ ಕೈಗೊಂಡಿರುವುದಾಗಿ ಬಸವ ಮಾಚಿದೇವ ಸ್ವಾಮೀಜಿ ತಿಳಿಸಿದ್ದಾರೆ.

‘ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಹಲವು ವರ್ಷಗಳಿಂದ ಬೇಡಿಕೆ ಮುಂದಿಡುತ್ತಿದ್ದೇವೆ. ಆದರೆ, ಯಾವ ರಾಜಕೀಯ ಪಕ್ಷಗಳೂ ಸಮುದಾಯದ ಮನವಿಗೆ ಸ್ಪಂದಿಸುತ್ತಿಲ್ಲ. ಸಣ್ಣ ಸಮುದಾಯವನ್ನು ತಾತ್ಸಾರ ಮಾಡಲಾಗುತ್ತಿದೆ. ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಬೆಂಗಳೂರಿನಲ್ಲಿ ಹೋರಾಟ ನಡೆಸಲಾಗುವುದು’ ಎಂದು ಮಾಹಿತಿ ನೀಡಿದ್ದಾರೆ.

‘ಮಡಿವಾಳ ಸಮುದಾಯಕ್ಕೆ ಸಂಬಂಧಿಸಿದಂತೆ ಡಾ.ಅನ್ನಪೂರ್ಣಮ್ಮ ವರದಿ ಸಿದ್ಧವಿದೆ. ಇದೇ ವರದಿಯನ್ನು ಅನುಷ್ಠಾನಗೊಳಿಸಿ ಕೇಂದ್ರಕ್ಕೆ ಶಿಫಾರಸು ಮಾಡಿದರೆ ಸಾಕು. ಮಡಿವಾಳ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದಕ್ಕಲಿದೆ. ಬೇರೆಯವರು ಮೀಸಲಾತಿ ಕೇಳುವ ಬಗ್ಗೆ ಯಾವ ತಕರಾರು ಇಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಅಸ್ನೋಟಿಕರ್, ಜಿಟಿಡಿ ಪಕ್ಷ ಬಿಡಲ್ಲ’

ಹಾಸನ: ಮಾಜಿ ಸಚಿವ ಆನಂದ್ ಅಸ್ನೋಟಿಕರ್, ಶಾಸಕ ಜಿ.ಟಿ. ದೇವೇಗೌಡ ಅವರು ಜೆಡಿಎಸ್ ಬಿಡುವ ಮಾತೇ ಇಲ್ಲ ಎಂದು ಜೆಡಿಎಸ್ ವರಿಷ್ಠ, ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಹೇಳಿದರು.



ದೇವೇಗೌಡ

‘ಜಿ.ಟಿ. ದೇವೇಗೌಡ ನನ್ನ ಜೊತೆ ಮಾತನಾಡಿದ್ದಾರೆ. ಇಲ್ಲ ಸಲ್ಲದ ಊಹಾಪೋಹ ಬೇಡ. ಅವರು ಯಾರಾದರೂ ಪಕ್ಷ ಬಿಡುವುದಾಗಿ ಹೇಳಿದ್ದಾರೆಯೇ? ಆದರೆ, ಮಧು ಬಂಗಾರಪ್ಪ ಚುನಾವಣೆಯಲ್ಲಿ ಸೋತ ಬಳಿಕ ಒಂದೂವರೆ ವರ್ಷದಿಂದ ಪಕ್ಷದ ಕಚೇರಿಗೆ ಬರುತ್ತಿಲ್ಲ. ನಾನೂ ಅನೇಕ ಬಾರಿ ಕರೆದರೂ ಬಂದಿಲ್ಲ. ಅವರನ್ನು ಶಾಸಕರನ್ನಾಗಿ ಮಾಡಲು ಎಚ್‌. ಡಿ. ಕುಮಾರಸ್ವಾಮಿ ಅವರು ಪಟ್ಟ ಕಷ್ಟ ಏನೆಂಬುದನ್ನು ಅರಿಯಬೇಕು’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2023ರೊಳಗೆ ಪಕ್ಷವೇ ಇರುವುದಿಲ್ಲ ಅಂತ ಕೆಲವರು ಹೇಳಿದ್ದಾರೆ. ಆದರೆ ಪಕ್ಷವನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಲಕ್ಷಾಂತರ ಕಾರ್ಯಕರ್ತರು ಇದ್ದಾರೆ. ಪಕ್ಷ ಸಂಘಟನೆಗೆ ಹೊಸ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.



ಹಣ ಸಾಗಿಸುತ್ತಿದ್ದ ಆರ್‌ಬಿಐಗೆ ಸೇರಿದ ಕಂಟೇನರ್ ರಾಮನಗರ ಬಳಿಯ ರಸ್ತೆ ತಿರುವಿನಲ್ಲಿ ಪಲ್ಟಿ ಆಗಿರುವುದು

ಆರ್‌ಬಿಐಗೆ ಸೇರಿದ ಕಂಟೇನರ್ ಪಲ್ಟಿ

ರಾಮನಗರ: ಮೈಸೂರಿನ ಆರ್‌ಬಿಐ ನೋಟು ಮುದ್ರಣಾಲಯದಿಂದ ಹಣ ಸಾಗಿಸುತ್ತಿದ್ದ ಕಂಟೇನರ್‌ವೊಂದು ತಾಲ್ಲೂಕಿನ ಕಲ್ಲುಗೋಪಹಳ್ಳಿ ಬಳಿ ಗುರುವಾರ ಪಲ್ಟಿಯಾಗಿದೆ.

ಸಿಐಎಸ್‌ಎಫ್ ಸಿಬ್ಬಂದಿ ಭದ್ರತೆಯಲ್ಲಿ ಸುಮಾರು 18 ಕಂಟೇನರ್‌ಗಳು ಮೈಸೂರಿನಿಂದ ಬೆಂಗಳೂರಿನತ್ತ ಹೋಗುತ್ತಿದ್ದವು. ಇವುಗಳ ಪೈಕಿ ಒಂದು ಕಂಟೇನರ್ ಬೆಂಗಳೂರು–ಮೈಸೂರು ಹೆದ್ದಾರಿಯ ತಿರುವಿನಲ್ಲಿ ಪಲ್ಟಿಯಾಯಿತು.

ಕಂಟೇನರ್ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಬಿಡದಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದೆ. ಇನ್ನುಳಿದ 17 ಕಂಟೇನರ್‌ಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದು, ಬಿಗಿ ಭದ್ರತೆ ನೀಡಲಾಗಿತ್ತು. ಆರ್‌ಬಿಐ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಪಘಾತಕ್ಕೀಡಾದ ಕಂಟೇನರ್‌ಗಳನ್ನು ಹೊರತುಪಡಿಸಿ ಉಳಿದ ವಾಹನಗಳು ಸಂಜೆ ಭದ್ರತೆಯೊಂದಿಗೆ ಪ್ರಯಾಣ ಮುಂದುವರಿಸಿದವು.

ಅಪಘಾತಕ್ಕೀಡಾದ ಕಂಟೇನರ್ ಅನ್ನು ಕ್ರೇನ್ ಸಹಾಯದಿಂದ ಮೇಲಕ್ಕೆ ಎತ್ತಲಾಗುವುದು. ಬಳಿಕ ಅದನ್ನು ಮೈಸೂರಿಗೆ ವಾಪಸ್ ಕಳುಹಿಸಿ ನೋಟುಗಳ ಸಹಿತ ಇಡೀ ವಾಹನವನ್ನು ತಪಾಸಣೆಗೆ ಒಳಪಡಿಸಲಾಗುವುದು. ಬಳಿಕ ಮುಂದಿನ ಕ್ರಮದ ಕುರಿತು ಅಧಿಕಾರಿಗಳು ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಭದ್ರತಾ ಸಿಬ್ಬಂದಿ ಮಾಹಿತಿ ನೀಡಿದರು.

‘ಯತ್ನಾಳ ಪತ್ರದ ತನಿಖೆ ಏಕಿಲ್ಲ?’

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ‘ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಮಗೆ ಪಕ್ಷ ನೀಡಿದ್ದ ನೋಟಿಸ್‌ಗೆ ಕೊಟ್ಟಿರುವ ಉತ್ತರದಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಉಲ್ಲೇಖಿಸಿದ್ದಾರೆ. ಆ ಪತ್ರದ ಆಧಾರದ ಮೇಲೆ ಯಾರ ವಿರುದ್ಧವೂ ಕ್ರಮ ಕೈಗೊಳ್ಳದ ಪ್ರಧಾನಿ ಮೋದಿ ಅವರಿಗೆ ಪಶ್ಚಿಮ ಬಂಗಾಳ ಸರ್ಕಾರದ ಭ್ರಷ್ಟಾಚಾರ ಟೀಕಿಸಲು ಯಾವ ನೈತಿಕತೆ ಇದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಉಡಾಫೆಗೆ ಉತ್ತರ: ‘ಜೆಡಿಎಸ್ ರಾಜಕೀಯ ಪಕ್ಷವೇ ಅಲ್ಲ ಎಂದು ಸಿದ್ದರಾಮಯ್ಯ ಅವರು ಉಡಾಫೆ ಮಾತನಾಡಿದ್ದರು. ಅದಕ್ಕೇ ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸಬೇಕಾಯಿತು. ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಅವರು ನನ್ನನ್ನು ಭೇಟಿ ಮಾಡಿ ಮನವಿ ಮಾಡಿದ್ದರಿಂದ ಸ್ಥಳೀಯವಾಗಿ ಮೈತ್ರಿಗೆ ಒಪ್ಪಿಕೊಂಡೆ’ ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್

ಕಾಂಗ್ರೆಸ್ ಬಲವರ್ಧನೆ: ಮಾ. 3ರಿಂದ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಘಟನೆಯ ಜತೆಗೆ ಬಲವರ್ಧನೆಗೆ ಒತ್ತು ನೀಡುವ ಉದ್ದೇಶದಿಂದ ಪಕ್ಷದ ಶಾಸಕರಿಲ್ಲದ 100 ಕ್ಷೇತ್ರಗಳಲ್ಲಿ ಹೋರಾಟ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಮಾರ್ಚ್ 3ರಂದು ಈ ಕಾರ್ಯಕ್ರಮ ಆರಂಭಿಸುತ್ತೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಮಾರ್ಚ್ 1ರಂದು ದೇವಾಲಯ ಹಾಗೂ ದರ್ಗಾಕ್ಕೆ ಭೇಟಿ ಮಾಡಿ ಪೂಜೆ, ಪ್ರಾರ್ಥನೆ ಸಲ್ಲಿಸಿ, 3ರಂದು ಕಾಂಗ್ರೆಸ್ ಕಚೇರಿಯಿಂದ ಬೆಳಿಗ್ಗೆ 5 ಗಂಟೆಗೆ ಹೊರಟು ದೇವನಹಳ್ಳಿಯಲ್ಲಿ ಮೊದಲ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಸಂಜೆ 3 ಗಂಟೆಗೆ ಚಿಕ್ಕಬಳ್ಳಾಪುರದಲ್ಲಿ ಕಾರ್ಯಕ್ರಮ ನಡೆಯಲಿದೆ’ ಎಂದರು.



ಶಿವಕುಮಾರ್

‘ಪ್ರತಿ ಕ್ಷೇತ್ರದಲ್ಲೂ ಜನರ ಮಧ್ಯೆ ಈ ಕಾರ್ಯಕ್ರಮ ಮಾಡುತ್ತೇವೆ. ಬಿಜೆಪಿ ಸರ್ಕಾರದಿಂದ ಎಲ್ಲ ವರ್ಗದ ಜನರಿಗೆ ತೊಂದರೆಯಾಗಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ದರ ಏರಿಕೆಯಾಗಿದೆ. ವರ್ತಕರು, ರೈತರು, ಕಾರ್ಮಿಕರು ಎಲ್ಲ ವರ್ಗಕ್ಕೂ ಅನ್ಯಾಯವಾಗುತ್ತಿದೆ. ಈ ವಿಚಾರವಾಗಿ ಜನರಲ್ಲಿ ಎಚ್ಚರಿಸಿ, ಅವರ ಧ್ವನಿಯನ್ನು ಕೇಂದ್ರ – ರಾಜ್ಯ ಸರ್ಕಾರಕ್ಕೆ ಮುಟ್ಟಿಸುತ್ತೇವೆ. ಎಲ್ಲ ನಗರಗಳ ಮುಖ್ಯರಸ್ತೆಯಲ್ಲಿ ಪಾದಯಾತ್ರೆ ಹಮ್ಮಿಕೊಳ್ಳುತ್ತೇವೆ’ ಎಂದರು.

‘ಅಧಿವೇಶನದಲ್ಲಿ ಭಾಗವಹಿಸಲು ತೊಂದರೆ ಆಗದಂತೆ ಪಕ್ಷದ ಕಾರ್ಯಾಧ್ಯಕ್ಷರಿಗೆ ಜಿಲ್ಲೆಗಳ ಜವಾಬ್ದಾರಿ ನೀಡಲಾಗಿದೆ. ಜಿಲ್ಲಾಧ್ಯಕ್ಷರ ಜತೆ ಸೇರಿ ಅವರು ಕಾರ್ಯಕ್ರಮದ ಸಿದ್ಧತೆ ನಡೆಸುತ್ತಾರೆ’ ಎಂದರು.

ಕಾಂಗ್ರೆಸ್‌ಗೆ ಪ್ರಸನ್ನಕುಮಾರ್: ‘ಪುಲಕೇಶಿನಗರದ ಕ್ಷೇತ್ರದ ಮಾಜಿ ಶಾಸಕ ಪ್ರಸನ್ನಕುಮಾರ್ ಅವರನ್ನು ಪಕ್ಷದ ಎಲ್ಲ ನಾಯಕರ ಒಪ್ಪಿಗೆ ಮೇರೆಗೆ ಪಕ್ಷಕ್ಕೆ ಸೇರಿಸಿಕೊಳ್ಳಲು ನಿರ್ಧರಿಸಿದ್ದೇವೆ’ ಎಂದು ಶಿವಕುಮಾರ್ ಹೇಳಿದರು.

‘ಡಿ.ಜೆ ಹಳ್ಳಿ ಘಟನೆಯಲ್ಲಿ ಮಾಜಿ ಮೇಯರ್ ಸಂಪತ್ ರಾಜ್ ಭಾಗಿಯಾಗಿಲ್ಲ. ಬಿಜೆಪಿ ಸರ್ಕಾರ ಕಾಂಗ್ರೆಸ್ ಮೇಲೆ ಆರೋಪ ಮಾಡಲು ಈ ರೀತಿ ಹೇಳುತ್ತಿದೆ. ಈ ಘಟನೆಯಲ್ಲಿ ಯಾವುದೇ ಕಾಂಗ್ರೆಸ್ ನಾಯಕರು ಭಾಗಿಯಾಗಿಲ್ಲ. ಅಖಂಡ ಶ್ರೀನಿವಾಸಮೂರ್ತಿ ಅವರು ವೈಯಕ್ತಿಕ ವಿಚಾರವಾಗಿ ಮಾತನಾಡಿದ್ದಾರೆ’ ಎಂದರು.

ಕೂಡಲಿ: ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮೀಜಿ ಆರೋಪ


ಮಠದ ಆಸ್ತಿ ಕಬಳಿಸಲು ಹುನ್ನಾರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಶಿವಮೊಗ್ಗ ಜಿಲ್ಲೆಯ ಕೂಡಲಿ ಶೃಂಗೇರಿ ಶಂಕರಾಚಾರ್ಯ ಮಹಾಸಂಸ್ಥಾನಕ್ಕೆ ಸೇರಿದ ಆಸ್ತಿಯನ್ನು ಕಬಳಿಸಲು ಗುಂಪೊಂದು ಹುನ್ನಾರ ನಡೆಸಿದೆ ಎಂದು ಮಹಾಸಂಸ್ಥಾನದ ಪೀಠಾಧಿಪತಿ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮೀಜಿ ಆರೋಪಿಸಿದರು.

‘ಈಚೆಗೆ ಮಠದೊಳಗೆ ಏಕಾಏಕಿ ನುಗ್ಗಿದ ಗುಂಪೊಂದು ಶಿಷ್ಯರ ಮೇಲೆ ಹಲ್ಲೆ ಮಾಡಿದೆ. ಈ ಕುರಿತು ಪ್ರಕರಣ ದಾಖಲಿಸಲಾಗಿದೆ. ಅದೇ ಊರಿನವರೇ ಇದರಲ್ಲಿ ಭಾಗಿಯಾಗಿದ್ದಾರೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮಹಾಸಂಸ್ಥಾನಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಸಾವಿರಾರು ಎಕರೆ ಜಮೀನು ಇದೆ. ಸಮಿತಿ ರಚಿಸಿಕೊಂಡರೆ ಆಸ್ತಿ ಕಬಳಿಸಲು ಅನುಕೂಲವಾಗುತ್ತದೆ ಎಂಬ ದುರುದ್ದೇಶದಿಂದ ಕೆಲವರು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಒಪ್ಪಿಗೆ ನೀಡದ ಕಾರಣ ಮಠ, ದೇವರ ಗರ್ಭಗುಡಿಯೊಳಗೆ ನುಗ್ಗಿ ಹಲ್ಲೆ ಮಾಡಿದ್ದಾರೆ’ ಎಂದು ದೂರಿದರು.



ಕೂಡಲಿ ಮಹಾಸಂಸ್ಥಾನದ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮೀಜಿ

‘ದಶಕಗಳ ಹಿಂದೆ ಕೆಲವರು ಮಠದ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿದ್ದರು. ಶಿವಮೊಗ್ಗ ಸೇರಿ ರಾಜ್ಯದ ಕೆಲವೆಡೆ ವ್ಯಾಜ್ಯ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಸಂಸ್ಥಾನದ ಆಸ್ತಿ ಇನ್ನೊಬ್ಬರ ಸ್ವತ್ತಾಗಲು ಬಿಡುವುದಿಲ್ಲ. ಸಮಿತಿ ರಚನೆಗೂ ಅವಕಾಶ ನೀಡುವುದಿಲ್ಲ’ ಎಂದರು.

‘ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ ಸೇರಿ ದೇಶದ ಯಾವುದೇ ರಾಜ್ಯದಲ್ಲಿ ಮಠಕ್ಕಾಗಲಿ, ಸಂಸ್ಥಾನಕ್ಕಾಗಲಿ ಸಮಿತಿ ರಚಿಸಿಲ್ಲ. ಕೂಡಲಿ ಸಂಸ್ಥಾನದ ಸಮಿತಿ ವಿಚಾರ ಹೈಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ. ದಾವೆ ಹೂಡಿದ ಮಠದ ಭಕ್ತರೊಬ್ಬರು ಈಗ ಸಮಿತಿ ಬೇಕು ಎನ್ನುತ್ತಿರುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

‘ಮಠಕ್ಕೆ ಬೇರೆಯವರು ಸ್ವಾಮೀಜಿ ಆಗುತ್ತಾರೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶ ಹರಿಬಿಡಲಾಗಿದೆ. ಇದು ಸತ್ಯಕ್ಕೆ ದೂರವಾದುದು. ಈಗಲೂ ನಾನೇ ಸ್ವಾಮೀಜಿಯಾಗಿ ಮುಂದುವರಿದಿದ್ದೇನೆ. ಎಲ್ಲ ವ್ಯವಹಾರ ನೋಡಿಕೊಳ್ಳುತ್ತಾ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇನೆ. ಯಾರು ಅರ್ಹರು ಎಂಬುದನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಿ, ಶಾಸ್ತ್ರೋಕ್ತವಾಗಿ ಪೀಠಾಧಿಪತಿಯನ್ನು ಆಯ್ಕೆ ಮಾಡಲಾಗುವುದು’ ಎಂದರು.


‘ಸದ್ಯ ಮಠದಲ್ಲಿ ಅಶಾಂತಿಯ ವಾತಾವರಣ ನಿರ್ಮಾಣವಾಗಿದ್ದು, ಯಾವಾಗ ಬೇಕಾದರೂ ಮತ್ತೊಮ್ಮೆ ಹಲ್ಲೆಗೆ ಪ್ರಯತ್ನಿಸಬಹುದು. ಈ ಘಟನೆಯಿಂದ ಮನಸ್ಸಿಗೆ ತುಂಬಾ ನೋವಾಗಿದೆ. ಚಿತ್ರದುರ್ಗದ ಶಾಖಾ ಮಠದಲ್ಲಿ ಕೆಲ ದಿನಗಳ ಕಾಲ ಉಳಿದುಕೊಂಡು ನಂತರ ಮೂಲಮಠಕ್ಕೆ ತೆರಳಲಿದ್ದೇನೆ’ ಎಂದು ತಿಳಿಸಿದರು.

ಚಹಾ ಮಾಡದಿದ್ದಕ್ಕೆ ಹಲ್ಲೆ ನಡೆಸಿದ್ದ ಪ್ರಕರಣ

‘ಮದುವೆ ಎಂಬುದು ಸಮಾನತೆಯ ಆಧಾರದ ಮೇಲೆ ನಡೆಯುವ ಸ್ನೇಹ ಒಪ್ಪಂದ’ ಎಂದು ನ್ಯಾಯಮೂರ್ತಿ ರೇವತಿ ಮೊಹಿತೆ ನೀಡಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಪತ್ನಿ ಗುಲಾಮಗಿರಿ ಸಂಕೇತ ಅಲ್ಲ: ಬಾಂಬೆ ಹೈಕೋರ್ಟ್

ಮುಂಬೈ(ಪಿಟಿಐ): ಪತ್ನಿ ಚಹಾ ಮಾಡಲು ನಿರಾಕರಿಸಿದ್ದರಿಂದ ಹಲ್ಲೆ ಮಾಡಲು ಪ್ರಚೋದನೆ ನೀಡಿತು ಎನ್ನುವ ಪತಿ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೇಳಿರುವ ಬಾಂಬೆ ಹೈಕೋರ್ಟ್, ‘ಪತ್ನಿ ಅಂದರೆ ಗುಲಾಮಗಿರಿಯ ಸಂಕೇತ ಅಲ್ಲ ಅಥವಾ ವಸ್ತುವಲ್ಲ’ ಎಂದು ಸ್ಪಷ್ಟಪಡಿಸಿದೆ.



ಇದೇ ಸಂದರ್ಭದಲ್ಲಿ ಚಹಾ ಮಾಡಲಿಲ್ಲವೆಂದು ಪತ್ನಿ ಮೇಲೆ ಹಲ್ಲೆ ಮಾಡಿದ್ದ 35 ವರ್ಷದ ಪಂಢರಾಪುರದ ವ್ಯಕ್ತಿಗೆ 2016ರಲ್ಲಿ ಸ್ಥಳೀಯ ನ್ಯಾಯಾಲಯ ವಿಧಿಸಿದ್ದ 10 ವರ್ಷ ಜೈಲು ಶಿಕ್ಷೆಯನ್ನು ಎತ್ತಿಹಿಡಿದಿದೆ.

ಲಿಂಗ ಅಸಮಾನತೆ ಸಮಾಜದಲ್ಲಿದೆ. ಇಂತಹ ಸಮಾಜದಲ್ಲಿ ‘ಪತ್ನಿ’ ಮನೆಯಲ್ಲಿನ ಎಲ್ಲ ಕೆಲಸಗಳನ್ನು ಮಾಡಬೇಕು ಎನ್ನುವ ನಿರೀಕ್ಷೆ ಹೊಂದಲಾಗಿದೆ. ಸಾಮಾಜಿಕ ಪರಿಸ್ಥಿತಿಗಳು ಸಹ ಇಂತಹ ವಾತಾವರಣ ಸೃಷ್ಟಿಸಿವೆ. ಇದೇ ಪರಿಸ್ಥಿತಿಯ ಲಾಭ ಪಡೆಯುವ ಪುರುಷರು ಕುಟುಂಬದಲ್ಲಿ ‘ತಾವು ಮೊದಲು’ ಎನ್ನುವ ಮನೋಭಾವ ಪ್ರದರ್ಶಿಸುತ್ತಾರೆ ಮತ್ತು ಪತ್ನಿಯನ್ನು ಗುಲಾಮಳು ಎಂದು ಪರಿಗಣಿಸುತ್ತಾರೆ ಎನ್ನುವುದನ್ನು ನ್ಯಾಯಮೂರ್ತಿ ರೇವತಿ ಮೊಹಿತೆ ವಿವರಿಸಿದ್ದಾರೆ.

ಪ್ರಕರಣದ ವಿವರ: ಪಂಢರಾಪುರದ ಸಂತೋಷ್ ಅಟ್ಕರ್, ಪತ್ನಿ ಜತೆ ಪದೇ ಜಗಳವಾಡುತ್ತಿದ್ದ. 2013ರ ಡಿಸೆಂಬರ್‌ನಲ್ಲಿ ಪತ್ನಿ ಚಹಾ ಮಾಡಿಕೊಡದೆ ಹೊರಗೆ ತೆರಳಲು ಮುಂದಾಗಿದ್ದರಿಂದ ಕೋಪಗೊಂಡ ಅಟ್ಕರ್ ಸುತ್ತಿಗೆಯಿಂದ ಬಲವಾಗಿ ಹೊಡೆದು ಗಂಭೀರ ಗಾಯಗೊಳಿಸಿದ್ದ. ಒಂದು ವಾರದ ಬಳಿಕ ಆಸ್ಪತ್ರೆಯಲ್ಲಿ ಪತ್ನಿ ಸಾವಿಗೀಡಾಗಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ ಅಟ್ಕರ್‌ಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

ಭಾರತ–ಪಾಕಿಸ್ತಾನ ಡಿಜಿಎಂಒ ಮಾತುಕತೆ; ಗಡಿಯಲ್ಲಿ ಶಾಂತಿಸ್ಥಾಪನೆ ವಾಗ್ದಾನ

ಕದನವಿರಾಮ ಕಟ್ಟುನಿಟ್ಟು ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಶಾಂತಿಯುತ ವಾತಾವರಣ ನಿರ್ಮಿಸಲು ಗುಂಡಿನ ದಾಳಿಯನ್ನು ನಿಲ್ಲಿಸುವುದಾಗಿ ಭಾರತ ಮತ್ತು ಪಾಕಿಸ್ತಾನದ ಸೇನೆಗಳು ಘೋಷಿಸಿದ ಅಚ್ಚರಿಯ ವಿದ್ಯಮಾನ ಗುರುವಾರ ನಡೆದಿದೆ.

ಎರಡೂ ಕಡೆಯ ಸೇನಾ ಕಾರ್ಯಾಚರಣೆಗಳ ಮಹಾನಿ-ರ್ದೇಶಕರ (ಡಿಜಿಎಂಒ) ನಡುವೆ ನಡೆದ ಹಾಟ್‌ಲೈನ್ ದೂರವಾಣಿ ಸಂಭಾಷಣೆಯ ಬಳಿಕ ಭಾರತದ ರಕ್ಷಣಾ ಸಚಿವಾಲಯ ಇದನ್ನು ಪ್ರಕಟಿಸಿದೆ.

‘2021ರ ಫೆಬ್ರುವರಿ 24ರ ಮಧ್ಯ-ರಾತ್ರಿಯಿಂದ ಜಾರಿಗೆ ಬರುವಂತೆ ನಿಯಂತ್ರಣ ರೇಖೆ ಮತ್ತು ಇತರ ವಲಯಗಳಲ್ಲಿ ಕದನ ವಿರಾಮದ ಎಲ್ಲ ಒಪ್ಪಂದಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಭಾರತ–ಪಾಕಿಸ್ತಾನ ನಿರ್ಧರಿಸಿವೆ’ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

‘ಗಡಿಗಳಲ್ಲಿ ಪರಸ್ಪರರಿಗೆ ಅನುಕೂಲವಾಗುವ ಮತ್ತು ಸುಸ್ಥಿರ ಶಾಂತಿ ಸಾಧಿಸುವ ಹಿತದೃಷ್ಟಿಯಿಂದ, ಇಬ್ಬರು ಡಿಜಿಎಂಒಗಳು ಪರಸ್ಪರರ ಪ್ರಮುಖ ಸಮಸ್ಯೆಗಳು ಮತ್ತು ಆತಂಕಗಳನ್ನು ಪರಿಹರಿಸಲು ಒಪ್ಪಿಕೊಂಡರು’ ಎಂದು ತಿಳಿಸಿದೆ.

ಭಾರತ ಮತ್ತು ಪಾಕಿಸ್ತಾನ 2003ರಲ್ಲಿ ಕದನ ವಿರಾಮ ಒಪ್ಪಂದ ಮಾಡಿಕೊಂಡಿವೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಕದನ ವಿರಾಮ ಉಲ್ಲಂಘನೆಯ ಸಾವಿರಾರು ಘಟನೆಗಳು ವರದಿಯಾಗಿದ್ದು, ಗಡಿಯಲ್ಲಿ ಶಾಂತಿ ಕದಡಿವೆ. 2016ರಲ್ಲಿ ಉರಿ ಭಯೋತ್ಪಾದಕ ದಾಳಿ ನಡೆಯುವವರೆಗೂ ಒಪ್ಪಂದವನ್ನು ಹೆಚ್ಚಾಗಿ ಎರಡೂ ಕಡೆಯವರು ಅನುಸರಿಸುತ್ತಿ-ದ್ದರು.



ಜಮ್ಮು ಗಡಿಯಲ್ಲಿ ಯೋಧರಿಂದ ಕಣ್ಗಾವಲು–ಸಂಗ್ರಹ ಚಿತ್ರ

2020ರಲ್ಲಿ ಪಾಕಿಸ್ತಾನ 5,133 ಬಾರಿ ಕದನ ವಿರಾಮ ಉಲ್ಲಂಘನೆ ನಡೆಸಿ, 46 ಸಾವುಗಳಿಗೆ ಕಾರಣವಾಗಿದೆ. ಈ ವರ್ಷದ ಜನವರಿ 28ರವರೆಗೆ ಇಂತಹ 299 ಉಲ್ಲಂಘನೆಗಳು ನಡೆದಿವೆ ಎಂದು ಈ ತಿಂಗಳ ಆರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂಸತ್ತಿಗೆ ಮಾಹಿತಿ ನೀಡಿದ್ದರು.

‘ಡಿಜಿಎಂಒಗಳು ಒಪ್ಪಂದಗಳಿಗೆ ಬದ್ಧರಾಗಿರಲು ತಮ್ಮ ಕಡೆಯವರಿಗೆ ಸೂಚನೆ ನೀಡಲು ಒಪ್ಪಿಕೊಂಡಿದ್ದಾರೆ. ಇದು ಸಕಾರಾತ್ಮಕ ನಡೆ. ಆದಾಗ್ಯೂ, ಪಾಕಿಸ್ತಾನವು ಈ ಒಪ್ಪಂದಕ್ಕೆ ಹೇಗೆ ಬದ್ಧವಾಗಿರುತ್ತದೆ ಎಂಬುದರ ಮೇಲೆ ಇದರ ಯಶಸ್ಸು ಅವಲಂಬಿಸಿದೆ. ಈ ನಡೆಯು ಎಫ್‌ಎಟಿಎಫ್‌ನ-ಲ್ಲಿ ಪಾಕಿಸ್ತಾನಕ್ಕೆ ನೆರವಾಗಬಹುದು’ ಎಂದು ಭಾರತದ ಮಾಜಿ ಡಿಜಿಎಂಒ ಮತ್ತು ಸೆಂಟರ್ ಫಾರ್ ಜಾಯಿಂಟ್ ವಾರ್‌ಫೇರ್ ಸ್ಟಡೀಸ್ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ವಿನೋದ್ ಭಾಟಿಯಾ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

> **ಭಾರತವು ಪಾಕಿಸ್ತಾನದ ಜೊತೆ ಸಹಜ ಸಂಬಂಧ ಬಯಸುತ್ತದೆ. ಸಮಸ್ಯೆಗಳನ್ನು ಶಾಂತಿಯುತ ಮತ್ತು ದ್ವಿಪಕ್ಷೀಯ ರೀತಿಯಲ್ಲಿ ಪರಿಹರಿಸಲು ನಾವು ಬದ್ಧರಾಗಿದ್ದೇವೆ**
>
> **ಅನುರಾಗ್ ಶ್ರೀವಾಸ್ತವ,** ವಿದೇಶಾಂಗ ಇಲಾಖೆ ವಕ್ತಾರ

ಅಚ್ಚರಿಯ ಮಾತುಕತೆ

ಎರಡು ಡಿಜಿಎಂಒಗಳ ನಡುವಿನ ಹಾಟ್‌ಲೈನ್ ಮಾತುಕತೆ ಹಲವು ವರ್ಷಗಳಿಂದ ಜಾರಿಯಲ್ಲಿದೆ. ಸಾಮಾನ್ಯವಾಗಿ ಕಿರಿಯ ಅಧಿಕಾರಿಯೊಬ್ಬರು ದಿನನಿತ್ಯದ ಮಾತುಕತೆಗಳನ್ನು ನಡೆಸುತ್ತಾರೆ. ಕೆಲವೊಮ್ಮೆ ಇಬ್ಬರು ಬ್ರಿಗೇಡಿಯರ್‌ಗಳ ನಡುವೆ ಅಥವಾ ಡಿಜಿಎಂಒಗಳ ನಡುವೆ ಸಂಭಾಷಣೆ ನಡೆಯುತ್ತದೆ.

ಭಾರತದ ಡಿಜಿಎಂಒ ಲೆಫ್ಟಿನೆಂಟ್ ಜನರಲ್ ಪರಮ್‌ಜಿತ್ ಸಿಂಗ್ ಸಂಘ ಮತ್ತು ಪಾಕಿಸ್ತಾನದ ಡಿಜಿಎಂಒ ಮೇಜರ್ ಜನರಲ್ ನೌಮನ್ ಜಕರಿಯಾ ಅವರ ನಡುವೆ ಸೋಮವಾರ ಇಂತಹ ಒಂದು ಸಂವಾದ ನಡೆದಿದೆ. ಈ ಮಾತುಕತೆಯು ಕದನ ವಿರಾಮದ ಮಾನದಂಡಗಳನ್ನು ಮರುಸ್ಥಾಪಿಸುವ ಅಚ್ಚರಿಯ ನಿರ್ಧಾರಕ್ಕೆ ಕಾರಣವಾಗಿದೆ.



ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕೋಲ್ಕತ್ತದಲ್ಲಿ ಗುರುವಾರ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಸಚಿವಾಲಯಕ್ಕೆ ತೆರಳಿ ಇಂಧನ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು ಪಿಟಿಐ ಚಿತ್ರ

ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಮಮತಾ ಪಯಣ

ಕೋಲ್ಕತ್ತ: ಇಂಧನ ಬೆಲೆ ಏರಿಕೆ ವಿರೋಧಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ರಾಜ್ಯ ಸಚಿವಾಲಯದವರೆ-ಗೆ ಎಲೆಕ್ಟ್ರಿಕ್ ಸ್ಕೂಟರ್‌ನ ಹಿಂಬದಿಯಲ್ಲಿ ಕುಳಿತು ಪ್ರಯಾಣಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸಚಿವ ಫಿರ್ಹಾದ್ ಹಕೀಮ್ ಅವರು ಬ್ಯಾಟರಿ ಚಾಲಿತ ಎಲೆಕ್ಟ್ರಿಕ್ ಸ್ಕೂಟರ್ ಚಲಾಯಿಸಿದರು. ಭದ್ರತಾ ಸಿಬ್ಬಂದಿ ದ್ವಿಚಕ್ರ ವಾಹನಗಳಲ್ಲಿ ಹಿಂಬಾಲಿಸಿದರು. ಮಮತಾ ಅವರು ಸಾಗಿದ ಮಾರ್ಗದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಪೆಟ್ರೋಲ್ ಬೆಲೆ ಏರಿಕೆ ವಿರೋಧಿ ಫಲಕವನ್ನು ಕುತ್ತಿಗೆಗೆ ಹಾಕಿಕೊಂಡು 45 ನಿಮಿಷಗಳ ಕಾಲ ಸಂಚರಿಸಿದ ಮಮತಾ ಬ್ಯಾನರ್ಜಿ ಅವರು ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಇಂಧನ ಬೆಲೆ ಏರಿಕೆ ವಿರುದ್ಧ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಮೋದಿ ಸರ್ಕಾರ ಕೇವಲ ಸುಳ್ಳು ಭರವಸೆಗಳ-ನ್ನು ನೀಡುತ್ತಿದೆ. ಇಂಧನ ಬೆಲೆ ಕಡಿಮೆ ಮಾಡಲು ಯಾವುದೇ ರೀತಿಯ ಪ್ರಯತ್ನ ಮಾಡುತ್ತಿಲ್ಲ’ ಎಂದು ಕಿಡಿಕಾರಿದರು.

‘ಮೋದಿ ಮತ್ತು ಅಮಿತ್ ಶಾ ಅವರು ದೇಶವನ್ನು ಮಾರಾಟ ಮಾಡುತ್ತಿದ್ದಾರೆ. ಲಾಭದಲ್ಲಿರುವ ಸರ್ಕಾರಿ ಉದ್ಯಮಗಳನ್ನು ಮಾರಾಟ ಮಾಡಲಾಗುತ್ತಿದೆ. ಮೋದಿ ನೇತೃತ್ವದ ಸರ್ಕಾರ ಜನ ವಿರೋಧಿ, ಮಹಿಳಾ ವಿರೋಧಿ, ಯುವಕರ ವಿರೋಧಿ, ರೈತ ವಿರೋಧಿಯಾಗಿದೆ’ ಎಂದು ಕಿಡಿಕಾರಿದರು.

ಮಮತಾ ಬ್ಯಾನರ್ಜಿ ಅವರು ಸ್ಕೂಟರ್‌ನಲ್ಲಿ ಸಂಚರಿಸಿದ್ದು ಕೇವಲ ಚುನಾವಣಾ ಗಿಮಿಕ್ ಎಂದು ವಿರೋಧ ಪಕ್ಷಗಳು ಟೀಕಿಸಿವೆ.


ಮಹಿಳೆಯ ತಂದೆಯ ವಂಶಸ್ಥರಿಗೂ ಆಸ್ತಿಯಲ್ಲಿ ಹಕ್ಕು: ‘ಸುಪ್ರೀಂ’ ತೀರ್ಪು

ನವದೆಹಲಿ (ಪಿಟಿಐ): ಹಿಂದೂ ಉತ್ತರಾಧಿಕಾರ ಕಾಯ್ದೆಯಡಿ, ಮಹಿಳೆಯ ತಂದೆಯ ಉತ್ತರಾಧಿಕಾರಿ-ಗಳು ಸಹ ಆಕೆ ಹೊಂದಿರುವ ಆಸ್ತಿಯ ಹಕ್ಕುದಾರರಾಗಿರುತ್ತಾರೆ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಅಶೋಕಭೂಷಣ್ ಹಾಗೂ ಆರ್. ಸುಭಾಷ್‌ರೆಡ್ಡಿ ಅವರಿರುವ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿ, ಹಿಂದೂ ಮಹಿಳೆಯ ತಂದೆಯ ಕಡೆಯ ವ್ಯಕ್ತಿಗಳನ್ನು ಸಹ ಆಕೆಯ ಆಸ್ತಿಯ ಉತ್ತರಾಧಿಕಾರಿ ಎಂದೇ ಪರಿಗಣಿಸಬೇಕಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದೆ.

ಜಗ್ನೊ ಎಂಬ ಮಹಿಳೆಗೆ ಸೇರಿದ ಆಸ್ತಿಯ ಹಂಚಿಕೆಗೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ ನ್ಯಾಯಪೀಠ ಈ ಅಭಿಪ್ರಾಯ ಹೇಳಿದೆ.

ಪತಿ ಶೇರ್ ಸಿಂಗ್ ಮರಣ ಹೊಂದಿದ ನಂತರ, ಜಗ್ನೊ ಅವರು ತನ್ನ ಸಹೋದರರ ಮಕ್ಕಳಿಗೆ ತನ್ನ ಆಸ್ತಿಯನ್ನು ಹಂಚಿದ್ದರು. ಇದನ್ನು ಪ್ರಶ್ನಿಸಿ ಆಕೆಯ ಬಾಮೈದುನ ಕೋರ್ಟ್ ಮೆಟ್ಟಿಲೇರಿ-ದ್ದರು.



‘ಪತಿಯ ಮರಣದ ನಂತರ ಆತ ಹೊಂದಿದ್ದ ಆಸ್ತಿಗೆ ಜಗ್ನೊ ಉತ್ತ-ರಾಧಿಕಾರಿಯಾಗಿದ್ದಾರೆ. ಆಕೆ ತನ್ನ ಸಹೋದರರ ಮಕ್ಕಳಿಗೆ ಆಸ್ತಿಯನ್ನು ಹಂಚಿಕೆ ಮಾಡಿದ್ದರಲ್ಲಿ ಏನೂ ತಪ್ಪಿಲ್ಲ. ಆಸ್ತಿಯನ್ನು ಪಡೆದವರನ್ನು ಇಲ್ಲಿ ಅಪರಿಚಿತರು ಎಂದು ವ್ಯಾಖ್ಯಾನಿಸು-ವುದು ಸರಿಯಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಮಹಿಳೆಯ ಬಾಮೈದುನ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿತು.

ಚಿಕ್ಕಬಳ್ಳಾಪುರದ ವ್ಯಕ್ತಿ ನೀಡಿದ ಹಣದ ಮೂಲದ ಬಗ್ಗೆಯೇ ಅನುಮಾನ: ಸರ್ಕಾರಕ್ಕೆ ದೂರು

ಕೇರಳದ ದೇವಸ್ಥಾನಕ್ಕೆ ₹526 ಕೋಟಿ ದೇಣಿಗೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ದೇವಾ-ಲಯವೊಂದಕ್ಕೆ ಕರ್ನಾಟಕದ ಭಕ್ತರೊಬ್ಬರು ನೀಡಿದ ₹526 ಕೋಟಿ ದೇಣಿಗೆಯ ಬಗ್ಗೆ ಹಲವು ಅನುಮಾನಗಳು ಮೂಡಿವೆ. ಹಣದ ಮೂಲ ಮತ್ತು ವ್ಯಕ್ತಿಯ ವಿಶ್ವಾಸಾರ್ಹ-ತೆಯ ಬಗ್ಗೆ ದೂರುಗಳು ಬಂದಿದ್ದರಿಂದ ಈ ಹಣವನ್ನು ದೇವಸ್ಥಾನದ ಆಡಳಿತ ಮಂಡಳಿ ಬಳಸಲು ಹಿಂದೇಟು ಹಾಕಿದೆ.

ಕೊಚ್ಚಿ ನಗರದಿಂದ ಸುಮಾರು 10 ಕಿಲೋ ಮೀಟರ್ ದೂರದಲ್ಲಿರುವ ಛೋಟ್ಟನಿಕ್ಕರ ಭಗವತಿ ದೇವಾಲಯಕ್ಕೆ ಕಳೆದ ವರ್ಷ ಚಿಕ್ಕಬಳ್ಳಾಪುರದ ಗಾನಾ ಶ್ರವಣ್ ಅವರು ಈ ಅಪಾರ ಮೊತ್ತದ ದೇಣಿಗೆ ನೀಡಿದ್ದರು. ₹526 ಕೋಟಿ ಮೊತ್ತದಲ್ಲಿ ವಿವಿಧ ಯೋಜನೆಗಳನ್ನು ಕೈಗೊಳ್ಳಲು ಸೂಚಿಸಿದ್ದರು.

ಆದರೆ, ಶ್ರವಣ್ ಅವರು ನೀಡಿದ ಹಣದ ಮೂಲದ ಬಗ್ಗೆ ಹಲವು ದೂರುಗಳು ಸರ್ಕಾರಕ್ಕೆ ಮತ್ತು ದೇವಸ್ಥಾನದ ಆಡಳಿತ ಮಂಡಳಿಗೆ ಸಲ್ಲಿಕೆಯಾಗಿವೆ. ಹೀಗಾಗಿ, ಈ ಹಣದ ಮೂಲದ ಬಗ್ಗೆ ವಿವರ ಸಲ್ಲಿಸಬೇಕು ಎಂದು ದೇವಸ್ಥಾನದ ಆಡಳಿತ ಮಂಡಳಿ ಶ್ರವಣ್ ಅವರಿಗೆ ಸೂಚಿಸಿದೆ.



ಚಿನ್ನ, ವಜ್ರ ಮತ್ತು ಅಪರೂಪದ ಲೋಹಗಳ ವ್ಯಾಪಾರದಲ್ಲಿ ತಾವು ತೊಡಗಿದ್ದು, ‘ಸ್ವಾಮೀಜಿ’ ಕಂಪನಿಗಳ ನಿರ್ದೇಶಕ ಎಂದು ಶ್ರವಣ್ ಮಾಹಿತಿ ನೀಡಿದ್ದಾರೆ.

‘ಹಣದ ಮೂಲದ ಬಗ್ಗೆ ವಿವರ ಸಲ್ಲಿಸಲು 60 ದಿನಗಳ ಸಮಯವನ್ನು ತೆಗೆದುಕೊಂಡಿದ್ದೇನೆ. ಆಧಾರರಹಿತ ದೂರುಗಳು ಮತ್ತು ಅನುಮಾನಗ-ಳಿಂದಾಗಿ ದೇವಾಲಯದ ಅಭಿವೃದ್ಧಿ ಯೋಜನೆಗಳು ನನೆಗುದಿಗೆ ಬಿದ್ದಿವೆ’ ಎಂದು ಶ್ರವಣ್ ತಿಳಿಸಿದ್ದಾರೆ.

‘ಛೋಟ್ಟನಿಕ್ಕರಾ ಭಗವತಿ ದೇವಾಲಯಕ್ಕೆ ಐದು ವರ್ಷಗಳ ಹಿಂದೆ ಭೇಟಿ ನೀಡಿದ್ದೆ. ನಂತರ ವ್ಯಾಪಾರದಲ್ಲಿ ಅಪಾರ ಪ್ರಗತಿ ಸಾಧಿಸಿದೆ. ಎಲ್ಲ ರೀತಿಯಿಂದ ಒಳ್ಳೆಯದಾಗಿದೆ. ಹೀಗಾಗಿ, ದೇವಸ್ಥಾನಕ್ಕೆ ದೇಣಿಗೆ ನೀಡಿದ್ದೇನೆ. ದೇವಸ್ಥಾನದ ನವೀಕರಣ, ಹೊಸ ಗೋಪುರಗಳ ನಿರ್ಮಾಣ, ಕಲ್ಯಾಣ ಮಂಟಪ, ತ್ಯಾಜ್ಯ ಸಂಸ್ಕರಣಾ ಘಟಕ, ಪಾರ್ಕಿಂಗ್ ಸೌಲಭ್ಯ ಮತ್ತು ದೇವಸ್ಥಾನಕ್ಕೆ ತೆರಳುವ ರಸ್ತೆ ಅಭಿವೃದ್ಧಿಗೆ ದೇಣಿಗೆ ಹಣವನ್ನು ಬಳಸುವಂತೆ ಸೂಚಿಸಿದ್ದೇನೆ. ಆಸ್ಪತ್ರೆಯನ್ನು ಸಹ ನಿರ್ಮಿಸುವ ಉದ್ದೇಶವಿದೆ’ ಎಂದು ಶ್ರವಣ್ ವಿವರಿಸಿದ್ದಾರೆ.

‘ಇಲ್ಲಿ ನೋಂದಣಿಯಾಗಿರುವ ‘ಮುನ್ನಂಗಿ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್’ ಕಂಪನಿ ಮೂಲಕ ವಿದೇಶದಿಂದ ಹಣ ಜಮಾಯಿಸಲಾಗು-ತ್ತಿದೆ’ ಎಂದು ಶ್ರವಣ್ ತಿಳಿಸಿದ್ದಾರೆ.

ಶ್ರವಣ್ ಅವರ ಪ್ರಸ್ತಾವನೆಗಳು ಪರಿ-ಶೀಲನೆಯಲ್ಲಿವೆ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಕಾರ್ಯದರ್ಶಿ ವಿ.ಎ. ಶೀಜಾ ತಿಳಿಸಿದ್ದಾರೆ.

ಶ್ರವಣ್ ಅವರ ಹಣದ ಮೂಲ ಇನ್ನೂ ನಿಗೂಢವಾಗಿಯೇ ಉಳಿದಿದೆ. ಹಲವಾರು ದೂರುಗಳು ಸಹ ಬಂದಿರುವುದರಿಂದ ಎಚ್ಚರಿಕೆಯಿಂದ ಈ ಪ್ರಕರಣವನ್ನು ಪರಿಶೀಲಿಸಲಾಗು-ತ್ತಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಶ್ರವಣ ಅವರ ಜತೆ ಇತ್ತೀಚೆಗೆ ಮಾತುಕತೆ ನಡೆಸಿದ್ದ ಕೇರಳದ ದೇವಸ್ಥಾನ ಸಚಿವ ಕಡಕಂಪಳ್ಳಿ ಸುರೇಂದ್ರನ್, ಹೈಕೋರ್ಟ್ ಸಮ್ಮತಿ ನೀಡಿದ ಬಳಿಕ ದೇಣಿಗೆ ಮೊತ್ತವನ್ನು ವಿವಿಧ ಯೋಜನೆಗಳಿಗೆ ಬಳಸುವುದಾಗಿ ತಿಳಿಸಿದ್ದರು.

ಸಂಕ್ಷಿಪ್ತ ಸುದ್ದಿ

ತಮಿಳುನಾಡು: 9,10,11ನೇ ತರಗತಿಯ ವಿದ್ಯಾರ್ಥಿಗಳು ಪಾಸ್

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ 9, 10 ಮತ್ತು 11ನೇ ತರಗತಿ ವಿದ್ಯಾರ್ಥಿಗಳು ಈ ವರ್ಷ ಪರೀಕ್ಷೆಗೆ ಹಾಜರಾಗಬೇಕಾಗಿಲ್ಲ. ಈ ಎಲ್ಲ ವಿದ್ಯಾ-ರ್ಥಿಗಳನ್ನು ಉತ್ತೀರ್ಣಗೊಳಿಸಲಾಗಿದೆ.

ಕೊರೊನಾ ವೈರಸ್ ಸಾಂಕ್ರಾಮಿಕ ಕಾಯಿಲೆ ಹಿನ್ನೆಲೆಯಲ್ಲಿ ತಮಿಳುನಾಡು ಸರ್ಕಾರ ಈ ನಿರ್ಧಾರ ಪ್ರಕಟಿಸಿದೆ.

‘ಪೋಷಕರು ಮತ್ತು ತಜ್ಞರ ಅಭಿಪ್ರಾಯ ಪಡೆದು 2020–21ನೇ ಶೈಕ್ಷಣಿಕ ವರ್ಷದಲ್ಲಿನ 9,10 ಮತ್ತು 11ನೇ ತರಗತಿ ವಿದ್ಯಾರ್ಥಿಗಳನ್ನು ಪರೀಕ್ಷೆ ಬರೆಯದೆಯೇ ಉತ್ತೀರ್ಣ-ಗೊಳಿಸಲಾಗಿದೆ’ ಎಂದು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ವಿಧಾನಸಭೆಯಲ್ಲಿ ಗುರುವಾರ ಪ್ರಕಟಿಸಿದ್ದಾರೆ.

ಟೂಲ್‌ಕಿಟ್ ಪ್ರಕರಣ: ಶಾಂತನು ಮುಲುಕ್‌ಗೆ ಬಂಧನದಿಂದ ರಕ್ಷಣೆ

ನವದೆಹಲಿ: ಟೂಲ್‌ಕಿಟ್ ಪ್ರಕರಣದ ಆರೋಪಿ ಶಾಂತನು ಮುಲುಕ್‌ಗೆ ದೆಹಲಿ ನ್ಯಾಯಾಲಯವು ಗುರುವಾರ ಬಂಧನದಿಂದ ರಕ್ಷಣೆ ನೀಡಿದೆ.

‘ನಿರೀಕ್ಷಣಾ ಜಾಮೀನು ಅರ್ಜಿಯ ಕುರಿತಾಗಿ ಪ್ರತಿಕ್ರಿಯಿಸುವುದಕ್ಕೂ ಮುನ್ನ ತನಿಖೆ ನಡೆಸಲು ಹೆಚ್ಚಿನ ಸಮಯ ಬೇಕು’ ಎಂದು ದೆಹಲಿ ಪೊಲೀಸರು ಕೇಳಿದ್ದರು. ನ್ಯಾಯಾಲಯವು ಮಾರ್ಚ್ 9ರವರೆಗೆ ಶಾಂತನು ಅವರಿಗೆ ಬಂಧನದಿಂದ ರಕ್ಷಣೆ ನೀಡಿದೆ.

‘ಮುಂದಿನ ವಿಚಾರಣೆ ಮಾರ್ಚ್ 9 ರಂದು ನಡೆಸಲಾಗುವುದು. ಅಲ್ಲಿಯವರೆಗೆ ಪೊಲೀಸರು ಶಾಂತನು ಅವರನ್ನು ಬಂಧಿಸಬಾರದು’ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಧರ್ಮೇಂದರ್ ರಾಣಾ ಸೂಚಿಸಿದ್ದಾರೆ.

ದ್ವಿತೀಯ ಪಿಯುಸಿ ಪಠ್ಯ ಕಡಿತ

ಬೆಂಗಳೂರು: ಕೋವಿಡ್ ಕಾರಣದಿಂದ 2020-21ನೇ ಸಾಲಿನ ಶೈಕ್ಷಣಿಕ ಚಟುವಟಿಕೆ ನಿಗದಿತ ಸಮಯದಲ್ಲಿ ಆರಂಭವಾಗಿಲ್ಲ. ಹೀಗಾಗಿ ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿ ಶೇ 30ರಷ್ಟು ಕಡಿತ ಮಾಡಿ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

2021ರ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗುವ ಪುನರಾವರ್ತಿತ ಹಾಗೂ ಖಾಸಗಿಯಾಗಿ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳಿಗೂ ಇದು ಅನ್ವಯಿಸುತ್ತದೆ ಎಂದು ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.

'ಈ ಪಠ್ಯ ಕಡಿತ 2020-21ನೇ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯಿಸುತ್ತದೆ. 2021-22ರ ಶೈಕ್ಷಣಿಕ ವರ್ಷದಿಂದ ಪಠ್ಯದಲ್ಲಿ ಯಾವುದೇ ಕಡಿತ ಇರುವುದಿಲ್ಲ' ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಲಾರಿ ಮಾಲೀಕರಿಂದ ಹೆದ್ದಾರಿ ತಡೆ ಇಂದು

ಬೆಂಗಳೂರು: 'ಹಳೆ ವಾಹನ ವಿಲೇವಾರಿ ನೀತಿ, ವಾಹನ ಬಿಡಿಭಾಗಗಳು, ಟೋಲ್ ಶುಲ್ಕ ಹಾಗೂ ಡೀಸೆಲ್ ದರ ಹೆಚ್ಚಳವನ್ನು ವಿರೋಧಿಸಿ ಶುಕ್ರವಾರ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅರ್ಧಗಂಟೆ ಹೆದ್ದಾರಿ ತಡೆದು ಪ್ರತಿಭಟಿಸಲು ನಿರ್ಧರಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಲಾರಿ ಮಾಲೀಕರು ಹಾಗೂ ಏಜೆಂಟರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕೆ.ಎನ್.ಅಶ್ವಥ್ ಗುರುವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಕೇಂದ್ರದ ಹಳೆ ವಾಹನ ವಿಲೇವಾರಿ ನೀತಿಯಿಂದಾಗಿ ಎರಡು ಲಕ್ಷ ವಾಹನಗಳನ್ನು ಗುಜರಿಗೆ ಹಾಕಬೇಕಿದೆ. ಇದನ್ನೇ ನಂಬಿಕೊಂಡವರು ಬೀದಿಗೆ ಬೀಳುವಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ. ಇದನ್ನು ತಪ್ಪಿಸಲು ಸರ್ಕಾರವು ಪರ್ಯಾಯ ಮಾರ್ಗೋಪಾಯಗಳನ್ನು ಸೂಚಿಸಬೇಕು. ಹೊಸ ವಾಹನ ಖರೀದಿಯ ಮೇಲಿನ ಜಿಎಸ್‌ಟಿ ರದ್ದುಪಡಿಸಬೇಕು. ಇ-ಬಿಲ್‌ನಿಂದಲೂ ಸಾಕಷ್ಟು ಸಮಸ್ಯೆ ಎದುರಾಗಿದೆ. ಅದನ್ನೂ ಕೈಬಿಡಬೇಕು. ಈ ಸಂಬಂಧ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರಿಗೆ ಮನವಿ ಪತ್ರ ಸಲ್ಲಿಸಲಿದ್ದೇವೆ. ಮಾರ್ಚ್ 5ರವರೆಗೂ ಸರ್ಕಾರಕ್ಕೆ ಗಡುವು ನೀಡುತ್ತೇವೆ. ಇದಕ್ಕೆ ಸ್ಪಂದಿಸದಿದ್ದರೆ ಮಾರ್ಚ್ 15ರಂದು ಭಾರತ್ ಬಂದ್‌ಗೆ ಕರೆ ನೀಡುತ್ತೇವೆ' ಎಂದು ಅವರು ಹೇಳಿದರು.

'ತುಮಕೂರು ರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ 10-30ಕ್ಕೆ ಪ್ರತಿಭಟನೆ ಶುರುವಾಗಲಿದೆ' ಎಂದರು.

ನಾಯಕನಹಟ್ಟಿ ಜಾತ್ರೆ ರದ್ದು

ನಾಯಕನಹಟ್ಟಿ: ಚಿತ್ರದುರ್ಗ ಜಿಲ್ಲೆಯ ಇತಿಹಾಸ ಪ್ರಸಿದ್ಧ ಗುರುತಿಪ್ಪೇರುದ್ರಸ್ವಾಮಿ ವಾರ್ಷಿಕ ಜಾತ್ರೆಯನ್ನು ರದ್ದುಪಡಿಸಲಾಗಿದೆ.

ದೊಡ್ಡ ರಥೋತ್ಸವ ಮಾರ್ಚ್ 29ಕ್ಕೆ ನಿಗದಿಯಾಗಿತ್ತು. ಸಾಂಪ್ರದಾಯಿಕ ಆಚರಣೆ ಮಾತ್ರ ನಡೆಯಲಿದ್ದು, ಚಳ್ಳಕೆರೆ ತಾಲ್ಲೂಕು ಹೊರತುಪಡಿಸಿ ಉಳಿದೆಡೆಯ ಭಕ್ತರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ.

'ಎರಡನೇ ಹಂತದಲ್ಲಿ ಕೊರೊನಾ ಸೋಂಕು ಹರಡುತ್ತಿರುವುದರಿಂದ ದೊಡ್ಡ ರಥೋತ್ಸವ ಸೇರಿ ಜಾತ್ರೆಯನ್ನು ರದ್ದು ಮಾಡಲಾಗಿದೆ. ಆದರೆ, ಜಾತ್ರೆಯ ದಿನದಂದು ದೇವಾಲಯದಲ್ಲಿ ಎಲ್ಲ ಪೂಜಾ ವಿಧಿವಿಧಾನ, ಪೂಜಾ ಕೈಂಕರ್ಯಗಳು ನಡೆಯಲಿವೆ. ಜಾತ್ರೆಯ ದಿನ ಹೊರರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬರುವ ಭಕ್ತರಿಗೆ ನಾಯಕನಹಟ್ಟಿ ಪಟ್ಟಣಕ್ಕೆ ಪ್ರವೇಶ ಇರುವುದಿಲ್ಲ' ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಗುರುವಾರ ತಿಳಿಸಿದ್ದಾರೆ.

'ಜಾತ್ರೆಯಲ್ಲಿ ವಸ್ತುಪ್ರದರ್ಶನ ಹಾಗೂ ಅಂಗಡಿ ತೆರೆಯಲು ಅವಕಾಶವಿಲ್ಲ. ವಿಶೇಷ ಸಾರಿಗೆ ಸೌಲಭ್ಯದ ವ್ಯವಸ್ಥೆ ಕಲ್ಪಿಸುವುದಿಲ್ಲ. ಇದಕ್ಕೆ ಭಕ್ತರು ಸಹಕರಿಸಬೇಕು. ಮನೆಗಳಲ್ಲಿ ಸುರಕ್ಷಿತವಾಗಿದ್ದು, ದೇವರ ಆರಾಧನೆ ಮಾಡಬೇಕು' ಎಂದು ಮನವಿ ಮಾಡಿದರು.

'ಸಾಮಾಜಿಕ ಸ್ಥಿತಿ ಬದಲಾಗಿಲ್ಲ'

ಬೆಂಗಳೂರು: 'ದೇಶದ ಪ್ರತಿ ಪ್ರಜೆಯೂ ತನಗಿಷ್ಟ ಬಂದ ಧರ್ಮವನ್ನು ಪಾಲಿಸಲು ಸಂವಿಧಾನ ಅವಕಾಶ ನೀಡಿದೆ. ಇದು ಮೂಲಭೂತ ಹಕ್ಕೂ ಕೂಡ. ಲೋಕಸಭೆಯ ಸದಸ್ಯರಾದವರಿಗೆ ಈ ಅಂಶ ನೆನಪಿಗೆ ಬಾರದಿರುವುದು ದುರದೃಷ್ಟಕರ' ಎಂದು ಬೆಂಗಳೂರಿನ ಆರ್ಚ್ ಬಿಷಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದವರಿಗೆ ಸವಲತ್ತು ಬೇಡ' ಎಂದು ಸಂಸದ ಪ್ರತಾಪ ಸಿಂಹ ಹೇಳಿಕೆಗೆ ಸಂಬಂಧಿಸಿದಂತೆ ಅವರು ಈ ಹೇಳಿಕೆ ನೀಡಿದ್ದಾರೆ.

'ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದಲ್ಲಿ ಕ್ರೈಸ್ತ ಸಮುದಾಯವು ದೇಶದ ಶಿಕ್ಷಣ, ಆರೋಗ್ಯ, ಸಾಹಿತ್ಯ, ಸಮಾಜ ಸೇವೆ ಕ್ಷೇತ್ರಗಳಲ್ಲಿ ಅಪಾರವಾಗಿ ದುಡಿದು, ದೀನ ದಲಿತರ ಸೇವೆಯನ್ನು ಮಾಡಿಕೊಂಡು ಬರುತ್ತಿದೆ. ಮತಾಂತರವಾದ ಬುಡಕಟ್ಟು ಜನರಿಗೆ ಯಾವುದೇ ಸವಲತ್ತುಗಳನ್ನು ನೀಡುವುದು ಬೇಡ ಎಂದಿರುವ ನೀವು ಸಂವಿಧಾನದ ಮೂಲ ಆಶಯಗಳನ್ನೇ ಮರೆತಂತಿದೆ' ಎಂದು ಬೆಂಗಳೂರು ಮಹಾಧರ್ಮಕ್ಷೇತ್ರ ಆಕ್ರೋಶ ವ್ಯಕ್ತಪಡಿಸಿದೆ.

'ಕ್ರೈಸ್ತ ಧರ್ಮಕ್ಕೆ ಮತಾಂತರವಾದವರು ಆದಿವಾಸಿಗಳು, ತಳ ಸಮುದಾಯ, ಶೋಷಿತವರ್ಗದವರು. ಮತಾಂತರವಾದ ನಂತರ ಅವರ ಧಾರ್ಮಿಕ ನಂಬಿಕೆಗಳು ಬದಲಾಗಿವೆಯೇ ವಿನಾ ಅವರ ಸಾಮಾಜಿಕ ಸ್ಥಿತಿಗತಿ ಹಿಂದಿನಂತೆಯೇ ಇದೆ. ತಾವೊಬ್ಬ ಜನಪ್ರತಿನಿಧಿಯಾಗಿ ಈ ನಿಮ್ಮ ನಡೆ ಅಲ್ಪಸಂಖ್ಯಾತ ವಿರೋಧಿಯಾಗಿದೆ' ಎಂದು ಮಹಾಧರ್ಮಕ್ಷೇತ್ರದ ವಕ್ತಾರ ಜೆ.ಎ. ಕಾಂತರಾಜ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಚಾರಣೆ ರದ್ದತಿಗೆ ಹೈಕೋರ್ಟ್ ನಕಾರ


ಬೆಂಗಳೂರು: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಐಎಎಸ್ ಅಧಿಕಾರಿ ಗಂಗಾರಾಂ ಬಡೇರಿಯಾ ಅವರ ಪುತ್ರ ಗಗನ್ ಬಡೇರಿಯಾ ವಿರುದ್ಧದ ವಿಚಾರಣೆ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

'ಗಗನ್ ಬಡೇರಿಯಾ ಬ್ಯಾಂಕ್ ಖಾತೆಗೆ ಕಂಪನಿಯೊಂದರಿಂದ ₹20 ಲಕ್ಷ ಸಂದಾಯವಾಗಿದೆ. ಅದಿರು ಸಾಗಣೆಗೆ ತಂದೆ ಅನುಮತಿ ನೀಡಿದ್ದಕ್ಕಾಗಿ ಸಂದಾಯವಾದ ಹಣ ಇದು' ಎಂದು ಎಸ್‌ಐಟಿ(ವಿಶೇಷ ತನಿಖಾ ತಂಡ) ದೋಷಾರೋಪಣೆ ಸಲ್ಲಿಸಿತ್ತು.

'ಕಾನೂನು ಕ್ರಮ ಜರುಗಿಸಲು ರಾಜ್ಯ ಸರ್ಕಾರ ಅನುಮತಿ ನೀಡದ ಕಾರಣ ಗಂಗಾರಾಂ ಬಡೇರಿಯಾ ಅವರ ವಿರುದ್ಧ ದೋಷಾರೋಪ ದಾಖಲಾಗಿಲ್ಲ. ಈ ಪ್ರಕರಣದಲ್ಲಿ ನನ್ನನ್ನು ತಪ್ಪಾಗಿ ಅರ್ಥೈಸಿಕೊಂಡು ಆರೋಪಿಯನ್ನಾಗಿ ಮಾಡಲಾಗಿದೆ. 'ಟ್ವೆಂಟಿ ಫಸ್ಟ್ ಸೆಂಚುರಿ ವೈರ್ ರಾಡ್ಸ್ ಲಿಮಿಟೆಡ್'ನಿಂದ ನನ್ನ ಖಾತೆಗೆ ಹಣ ಸಂದಾಯವಾಗಿದೆ. ಈ ಕಂಪನಿ ಗಣಿಗಾರಿಕೆಗೆ ಸಂಬಂಧಿಸಿದ ವ್ಯವಹಾರ ನಡೆಸುವುದಿಲ್ಲ ಮತ್ತು ಅವರ ಸಂಪರ್ಕದಲ್ಲೂ ಇಲ್ಲ. ಸಂಗೀತ ಉದ್ಯಮದ ವ್ಯವಹಾರಕ್ಕೆ ಸಂಬಂಧಿಸಿದ ಹಣ ಇದಾಗಿದೆ' ಎಂದು ಗಗನ್ ಅರ್ಜಿಯಲ್ಲಿ ತಿಳಿಸಿದ್ದರು.

'ವರ್ಗಾವಣೆ ಆಗಿರುವ ಹಣ ಸಂಗೀತ ಉದ್ಯಮಕ್ಕೆ ಸಂಬಂಧಿಸಿರುವುದೋ ಅಥವಾ ಬೇರಾವ ವ್ಯವಹಾರಕ್ಕೆ ಸಂಬಂಧಿಸಿದ್ದು ಎಂಬುದು ವಿಚಾರಣೆ ಪೂರ್ಣಗೊಂಡ ಮೇಲೆ ತಿಳಿಯಲಿದೆ' ಎಂದು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

ಗಂಗಾರಾಂ ಬಡೇರಿಯಾ ಅವರು ಗಣಿ ಮತ್ತು ಭೂವಿಜ್ಞಾನ ಇಲಾಖೆ ಆಯುಕ್ತರಾಗಿದ್ದಾಗ ಜಂತಕಲ್ ಎಂಟರ್‌ಪ್ರೈಸಸ್ ಎಂಬ ಹೆಸರಿನ ಕಂಪನಿ 1.17 ಲಕ್ಷ ಟನ್ ಕಬ್ಬಿಣದ ಅದಿರು ಸ್ಥಳಾಂತರಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿತ್ತು.



ಕಲಾ ಬದುಕಿಗೆ 35

‘ಆನಂದ್’ ಚಿತ್ರ ಬಿಡುಗಡೆಗೊಂಡು 35 ವರ್ಷಗಳು ಪೂರ್ಣಗೊಂಡಿವೆ. ಶಿವರಾಜ್‌ಕುಮಾರ್ ಮತ್ತು ಸುಧಾರಾಣಿ ಅವರು ಬೆಳ್ಳಿತೆರೆಯಲ್ಲಿ ಕಾಣಿಸಿಕೊಂಡ ಮೊದಲ ಚಿತ್ರ ಇದು. ಈ ಗಳಿಗೆಯಲ್ಲಿ ಇಬ್ಬರ ಮನದಂಗಳದಲ್ಲೂ ಹಳೆಯ ನೆನಪುಗಳ ಮೆರವಣಿಗೆ...

1980–90ರ ದಶಕದ ಯಶಸ್ವಿ ಜೋಡಿ... ಶಿವರಾಜ್‌ಕುಮಾರ್–ಸುಧಾರಾಣಿ

ನೂರೊಂದು ನೆನಪು ಆನಂದದಿಂದ...

ಅಭಿಲಾಷ್ ಪಿ.ಎಸ್.

ಚಂದನವನಕ್ಕೆ ದೊಡ್ಡ ತಾರೆಗಳನ್ನು ಕೊಟ್ಟ ಸಿನಿಮಾ ಆನಂದ್. ಆ ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಕಾಲಿಟ್ಟ ಶಿವರಾಜ್‌ಕುಮಾರ್ ಈಗ ಕನ್ನಡ ಚಿತ್ರರಂಗದ ನೇತಾರ! ಇದೇ ಚಿತ್ರದ ಮೂಲಕ ಸಿನಿಮಾ ಜಗತ್ತಿಗೆ ಪದಾರ್ಪಣೆ ಮಾಡಿದವರು ಸುಧಾರಾಣಿ.



ಶಿವರಾಜ್‌ಕುಮಾರ್

‘ನನ್ನ ಹೆಸರು ಆನಂದ್...’ ಇದು ಕ್ಯಾಮೆರಾ ಮುಂದೆ ಶಿವಣ್ಣ ಹೊಡೆದ ಮೊದಲ ಡೈಲಾಗ್. ‘ಚಿತ್ರದ ಮುಹೂರ್ತ ಚಾಮುಂಡೇಶ್ವರಿ ಸ್ಟುಡಿಯೊದಲ್ಲಿತ್ತು. ಅಪ್ಪಾಜಿ, ಅಮ್ಮ, ಉದಯ್‌ಶಂಕರ್ ಸೇರಿದಂತೆ ಇಡೀ ಗಾಂಧಿನಗರವೇ ಅಲ್ಲಿತ್ತು. ಮೊದಲ ದೃಶ್ಯದ ಚಿತ್ರೀಕರಣದ ಬಳಿಕ, ನಾನು ಅತ್ತಿದ್ದೆ’ ಎಂದು ಅವರು ನೆನಪಿಸಿಕೊಳ್ಳುತ್ತಾರೆ.

‘ಆನಂದ್’ ಚಿತ್ರ ರೆಡಿಯಾಗಿದೆ ಅಂತ ತಿಳಿದಾಗ ನಿದ್ದೇನೇ ಬರಲಿಲ್ಲ. ಚಿತ್ರದಲ್ಲಿ ನಾನು ಹೇಗೆ ಕಾಣಿಸಿಕೊಂಡಿದ್ದೇನೆ ಎನ್ನುವ ಆತಂಕ ಕಾಡುತ್ತಿತ್ತು. ಒಂದುವೇಳೆ ನಾಯಕ ನಟನನ್ನಾಗಿ ಜನ ನನ್ನನ್ನು ಒಪ್ಪದೇ ಹೋದರೆ ಏನು ಮಾಡುವುದು ಎಂಬ ಭಯವೂ ಇತ್ತು. ಸೋತರೆ ಕಾಲೇಜಿಗೆ ಹೋಗಿ ಮತ್ತೆ ಬಿ.ಫಾರ್ಮ್ ಮಾಡಿದರಾಯಿತು ಅಂದ್ಕೊಂಡಿದ್ದೆ’ ಎಂದು ಆಗಿನ ಘಟನೆಗಳನ್ನು ಮೆಲುಕು ಹಾಕುತ್ತಾರೆ.

‘1986ರಿಂದ 2021ರವರೆಗಿನ ಪಯಣವನ್ನು ತಿರುಗಿ ನೋಡಿದರೆ ವರ್ಷ ಹೇಗೆ ಕಳೆಯಿತು ಎನ್ನುವುದೇ ತಿಳಿಯುವುದಿಲ್ಲ. ಜನರು ಪ್ರೀತಿಯಿಂದ ಈ ರೀತಿ ಸಂಭ್ರಮ ಆಚರಿಸುತ್ತಾರೆ. ‘35 ವರ್ಷ ಕಳೆಯಿತು, 50 ವರ್ಷದವರೆಗೂ ಸಿನಿಮಾ ಮಾಡೋಣ’ ಎನ್ನುವ ಮೂಲಕ ಅಭಿಮಾನಿಗಳಲ್ಲಿ ಉತ್ಸಾಹ ತುಂಬುತ್ತಾರೆ.

‘ಇಂತಹ ಪಾತ್ರ ಮಾಡಿಲ್ಲ ಎನ್ನುವ ಕೊರಗು ಇಲ್ಲ. ರೌಡಿಸಂ ಆಧರಿತ ಚಿತ್ರದಲ್ಲೇ ನನ್ನನ್ನು ಜನ ನೋಡಲು ಬಯಸುತ್ತಾರೆ. ಹೀಗೆಂದು ಬರೇ ಮಚ್ಚು ಹಿಡಿದುಕೊಂಡು ಹೊರಟರೆ, ಇವನಿಗೇನು ಬೇರೆ ಕೆಲಸ ಇಲ್ವಾ ಎನ್ನುತ್ತಾರೆ. ಕೌಟುಂಬಿಕ ಚಿತ್ರಗಳು ಹಿಟ್ ಆಗಿವೆ. ಹಳ್ಳಿ ವಿಷಯದ ಚಿತ್ರಗಳು ಹಿಟ್ ಆಗಿವೆ. ಇದನ್ನು ಬಿಟ್ಟು ವಿಭಿನ್ನವಾದ ಪಾತ್ರಗಳನ್ನು ನೋಡುತ್ತಿದ್ದೇನೆ. ಇಂತಹ ಪಾತ್ರಗಳು ಬರುತ್ತಿವೆ’ ಎನ್ನುತ್ತಾರೆ ಈ ಹ್ಯಾಟ್ರಿಕ್ ಹೀರೊ.



ಸುಧಾರಾಣಿ

ಸುಧಾರಾಣಿ ಅವರಿಗೂ ಈ ಚಿತ್ರದ ಕುರಿತು ಹೇಳಿಕೊಳ್ಳಲು ಉಮೇದಿ.

‘ಆನಂದ್’ ಚಿತ್ರದಿಂದ ಆರಂಭವಾದ ಶಿವಣ್ಣ–ಸುಧಾರಾಣಿ ಜೋಡಿ ತೆರೆಯ ಮೇಲೆ ಇತಿಹಾಸ ಮೂಡಿಸಿತ್ತು. ಇದೇ ಜೋಡಿ ಮತ್ತೆ ತೆರೆಯ ಮೇಲೆ ಖಂಡಿತವಾಗಿಯೂ ಬರಬೇಕು. ಬರಲಿ ಎನ್ನುವ ಆಸೆಯೂ ಇದೆ’ ಎನ್ನುತ್ತಾರೆ ಈ ನಟಿ.

‘ಆನಂದ್’ ಚಿತ್ರದಲ್ಲಿ ನಟನೆ ಮಾಡಿದಾಗ ನಾನಿನ್ನೂ ಚಿಕ್ಕ ಹುಡುಗಿ. ಸಿನಿಮಾದಲ್ಲಿ ನಟನೆ ಮಾಡುತ್ತಿದ್ದೇನೆ, ಬೆಳ್ಳಿ ತೆರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ ಎನ್ನುವ ಅರಿವೂ ನನಗಿರಲಿಲ್ಲ. ಸಿನಿಮಾದಲ್ಲಿ ನಟನೆ ಮಾಡಲು ಹೇಳಿದ್ದಾರೆ. ಮಾಡಿದ್ದೇನೆ ಅಷ್ಟೇ ಎನ್ನುವಂತಿತ್ತು ಆಗ. ಆ ಉದ್ವೇಗ, ಜೊತೆಗೆ ಬಂದಂತಹ ಜವಾಬ್ದಾರಿಯ ಬಗ್ಗೆಯೂ ನನಗೆ ಪರಿಜ್ಞಾನ ಇರಲಿಲ್ಲ’ ಎಂದು ನೆನಪಿಸಿಕೊಳ್ಳುತ್ತಾರೆ.

‘ಮೊದಲ ಬಾರಿಗೆ ಸಿನಿಮಾದಲ್ಲಿ ನಾಯಕಿಯಾಗಿ ತೆರೆಯ ಮೇಲೆ ನನ್ನನ್ನು ನಾನು ನೋಡಿದಾಗ ಅಲ್ಲಿಯೇ ಮುಂದೆ ತಿದ್ದಿಕೊಳ್ಳಬೇಕಾದ ಅಂಶಗಳು ತಲೆಯಲ್ಲಿ ಓಡುತ್ತಿದ್ದವು. ತಾಯಿಯೂ ಜೊತೆಯಲ್ಲಿದ್ದರು, ಅವರೂ ನಟನೆಯಲ್ಲಿ ಆಗಬೇಕಾದ ಬದಲಾವಣೆಗಳನ್ನು ಹೇಳಿಕೊಡುತ್ತಿದ್ದರು’ ಎಂದು ಹೇಳುತ್ತಾರೆ.

‘ಅದೃಷ್ಟ’

‘ಚಿಕ್ಕ ಹುಡುಗಿಯಾಗಿದ್ದಾಗ ಜಾಹೀರಾತು ಇರಲಿ ಅಥವಾ ಬಾಲನಟಿಯಾಗಿ ನಟನೆ ಮಾಡುವ ಸಂದರ್ಭದಲ್ಲಿ ಕ್ಯಾಮೆರಾ ಎದುರಿಸುವುದಕ್ಕೆ ಯಾವ ಭಯವೂ ನನಗೆ ಇರಲಿಲ್ಲ. ‘ಐ ವಾಸ್ ಮೆಂಟ್ ಟು ಬಿ ಇನ್ ದಿಸ್ ಇಂಡಸ್ಟ್ರಿ’ ಎನ್ನುವಂತೆ ಆ ಧೈರ್ಯ, ಅವಕಾಶ ತಾನಾಗಿಯೇ ಬಂತು. ಮುಂಚಿನಿಂದಲೂ ಅಪ್ಪಾಜಿ (ರಾಜ್‌ಕುಮಾರ್) ಕುಟುಂಬದ ಜೊತೆ ಒಡನಾಟವಿತ್ತು. ಅವರ ಬ್ಯಾನರ್‌ನಲ್ಲಿ ನಾನು ನಟನೆ ಮಾಡಿದ್ದೆ. ಕೇವಲ ಒಂದು ಫೋಟೊ ನೋಡಿ, ಆನಂದ್‌ಗೆ ಇವಳೇ ನಾಯಕಿಯಾಗಬೇಕು ಎನ್ನುವ ಹಟ ಹಿಡಿದು ಪಾರ್ವತಮ್ಮ ರಾಜ್‌ಕುಮಾರ್ ಅವರು ಅವಕಾಶ ನೀಡಿದರು’ ಎಂದು ಹೇಳುತ್ತಾರೆ. ❖

ಅಮ್ಮನೇ ಮೊದಲ ಡೈರೆಕ್ಟರ್

‘ಪ್ರಾರಂಭದಲ್ಲಿ ಅಮ್ಮನೇ ಕಥೆಗಳನ್ನು ಆಯ್ಕೆ ಮಾಡುತ್ತಿದ್ದರು. ನಿರ್ದೇಶಕರು ಕಥೆ ಹೇಳುವಾಗ ನಾನೂ ಇರುತ್ತಿದ್ದೆ. ಆದರೆ ಅಂತಿಮ ನಿರ್ಧಾರವನ್ನು ಅಮ್ಮನೇ ತೆಗೆದುಕೊಳ್ಳುತ್ತಿದ್ದರು. ಕುಟುಂಬದ ಹಿನ್ನೆಲೆಗೆ ಯಾವುದೇ ಧಕ್ಕೆ ಬರಬಾರದು ಎನ್ನುವುದು ಕಟ್ಟುನಿಟ್ಟಿನ ನಿಯಮ. ಈ ನಿಯಮಗಳನ್ನು ಮೀರಿ ಯಾವುದೇ ಪಾತ್ರವನ್ನು ನಾನು ಮಾಡಿಲ್ಲ. ಪಾತ್ರವು ಚೆನ್ನಾಗಿದೆಯೇ ಎಂದು ಅಳೆದು ತೂಗಿ ನಿರ್ಧಾರವನ್ನು ಅಮ್ಮ ತೆಗೆದುಕೊಳ್ಳುತ್ತಿದ್ದರು’ ಎನ್ನುತ್ತಾರೆ. ‘ಆನಂದ್’ ಚಿತ್ರದ ಮೊದಲ ದಿನವೂ ಅಮ್ಮ ಜೊತೆಯೇ ಇದ್ದರು. ಚಿತ್ರೀಕರಣಕ್ಕೂ ಮೊದಲು ಕೆಲ ವಿಚಾರಗಳನ್ನು ಅವರು ಹೇಳಿದ್ದರು. ಅಮ್ಮ ಏನೇ ವಿಚಾರಗಳನ್ನು ಹೇಳಿದ್ರೂ ನನ್ನ ಒಳ್ಳೆಯದಕ್ಕೇ ಹೇಳುವುದು ಎಂದು ತಿಳಿದಿತ್ತು. ಹೀಗಾಗಿ ಅಮ್ಮ ಹೇಳಿದ ಮಾತು ಎಂದಿಗೂ ಮೀರುತ್ತಿರಲಿಲ್ಲ. ಹೆಚ್ಚಿನ ಟೇಕ್ ತೆಗೆದುಕೊಳ್ಳಬಾರದು. ಚಂದನವನದಲ್ಲಿ ಒಂದು ಒಳ್ಳೆಯ ಹೆಸರು ಮಾಡಬೇಕು ಎನ್ನುವುದಷ್ಟೇ ಗುರಿಯಾಗಿತ್ತು’ ಎಂದು ಸುಧಾರಾಣಿ ‘ಅಮ್ಮ ಹಾಕಿದ ಸ್ಟ್ರಾಂಗ್ ಫೌಂಡೇಷನ್ ಇಲ್ಲಿಯವರೆಗೂ ಕರೆತಂದಿದೆ’ ಎಂದು ಸುಧಾರಾಣಿ ವಿವರಿಸುತ್ತಾರೆ.

‘ಕನ್ನಡದ ಅಮೃತದೂಟ’

‘ಕಲೆಗೆ ಯಾವುದೇ ಭಾಷೆ, ಜಾತಿ, ಜಾಗ ಅಡ್ಡ ಬರುವುದಿಲ್ಲ. ಬರಲೂ ಕೂಡದು. ಕನ್ನಡದ ಜೊತೆಗೆ ತೆಲುಗು, ತಮಿಳು, ಮಲಯಾಳಂ, ತುಳು ಹೀಗೆ ಹಲವು ಚಿತ್ರಗಳಲ್ಲಿ ನಟಿಸಿದ್ದೇನೆ. ಪಾತ್ರದ ವಿಚಾರ ಬಂದಾಗ 80 ಹಾಗೂ 90ರ ಕಾಲದಲ್ಲಿ ಕನ್ನಡದಲ್ಲಿ ವೈವಿಧ್ಯಮಯ ಪಾತ್ರಗಳು ಹುಡುಕಿಕೊಂಡು ಬಂದವು. ಬಾಳೆ ಎಲೆ ಹಾಕಿ ಅಮೃತದ ಊಟ ಬಡಿಸುವಾಗ ಏಕೆ ಬೇರೆ ಕಡೆ ಹೋಗಿ ಕಾದು ಬಫೆ ಊಟ ಮಾಡುವ ಆಸೆ ಅಲ್ಲವೇ. ನನ್ನವರೇ ಇಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿರುವಾಗ ಬೇರೆಡೆ ಏಕೆ ಹೋಗಲಿ. ಹೀಗಾಗಿ ನನ್ನ ಮೊದಲ ಆಯ್ಕೆ ಕನ್ನಡವಾಗಿತ್ತು’ ಎನ್ನುತ್ತಾರೆ ಸುಧಾರಾಣಿ.



ನಟ ಸುದೀಪ್ ಬಿಗ್ ಬಾಸ್ ಹ್ಯಾಶ್ ಟ್ಯಾಗನ್ನು ಗುರುವಾರ ಬಿಡುಗಡೆ ಮಾಡಿದರು. ವಯಾಕಾಮ್ 18 ಸಂಸ್ಥೆಯ ಕನ್ನಡ ಮಾರುಕಟ್ಟೆಯ ಬ್ಯುಸಿನೆಸ್ ಹೆಡ್ ಹಾಗೂ ಬಿಗ್‌ಬಾಸ್‌ನ ನಿರ್ದೇಶಕ ಪರಮೇಶ್ವರ ಗುಂಡ್ಕಲ್ ಇದ್ದರು –ಪ್ರಜಾವಾಣಿ ಚಿತ್ರ

ಬಿಗ್‌ಬಾಸ್–8 ಸೆಲೆಬ್ರಿಟಿ ಸೀಸನ್

ಕೆಲ ದಿನಗಳ ಹಿಂದಷ್ಟೇ ಬಿಗ್‌ಬಾಸ್ 8ನೇ ಆವೃತ್ತಿಗೆ ಜೋಯಿಸರಾಗಿ ಬಂದ ನಟ ಕಿಚ್ಚ ಸುದೀಪ್ ಮುಹೂರ್ತ ನಿಗದಿಗೊಳಿಸಿದ್ದರು. ಫೆ.28ರಿಂದ ಆರಂಭವಾಗಲಿರುವ ಈ ಬಾರಿಯ ಬಿಗ್‌ಬಾಸ್‌ನಲ್ಲಿ ಜನಸಾಮಾನ್ಯರು ಇರುವುದಿಲ್ಲ, ಬದಲಾಗಿ ಇದು ಸೆಲೆಬ್ರೆಟಿ ಸೀಸನ್, ರಾಜಕೀಯ ನಾಯಕರೊಬ್ಬರು ಮನೆ ಪ್ರವೇಶಿಸಲಿದ್ದಾರೆ ಎಂದು ‘ವಯಕಾಂ18’ ಕನ್ನಡ ಕ್ಲಸ್ಟರ್ ಬಿಸಿನೆಸ್ ಮುಖ್ಯಸ್ಥ ಪರಮೇಶ್ವರ ಗುಂಡ್ಕಲ್ ತಿಳಿಸಿದರು.

ನಟ ಕಿಚ್ಚ ಸುದೀಪ್ 8ನೇ ಆವೃತ್ತಿಯ ಹ್ಯಾಷ್‌ಟ್ಯಾಗ್ ಬಿಡುಗಡೆಗೊಳಿಸಿದರು. ‘ಈ ಬಾರಿ 17 ಜನ ಸ್ಪರ್ಧಿಗಳಿದ್ದು, ಸದ್ಯಕ್ಕೆ ಎಲ್ಲರೂ ಕ್ವಾರಂಟೈನ್‌ನಲ್ಲಿ ಇದ್ದಾರೆ. ಇವರಿಗೆ ಮೂರು ಬಾರಿ ಆರ್‌ಟಿಪಿಸಿಆರ್ ಪರೀಕ್ಷೆಯಾಗಿದೆ. ಕೊನೆಯ ಪರೀಕ್ಷೆಯಲ್ಲಿ ಯಾರಿಗಾದರೂ ಕೋವಿಡ್ ದೃಢಪಟ್ಟಲ್ಲಿ ಅವರು ಹೊರಹೋಗಲಿದ್ದಾರೆ. ಈ ಬಾರಿ ಕ್ವಾರಂಟೈನ್ ಆಗದೇ ಯಾರಿಗೂ ಮನೆ ಒಳಗೆ ಪ್ರವೇಶವಿಲ್ಲ. ಹೀಗಾಗಿ ಈ ಹಿಂದಿನಂತೆ ವಿಶೇಷ ಅತಿಥಿಗಳು ಮನೆ ಪ್ರತಿ ವಾರ ಮನೆ ಒಳಗೆ ಹೋಗುವುದು ಅನುಮಾನ. ಈ ಬಾರಿ ಲಾಕ್‌ಡೌನ್ ವಿಷಯಾಧಾರಿತವಾಗಿ ಬಿಗ್‌ಬಾಸ್ ನಡೆಯಲಿದೆ’ ಎಂದರು.

ಕೈಎತ್ತದೇ ಇದ್ರೆ ಹುಚ್ಚ ವೆಂಕಟ್ ಗೆಲ್ಲುತ್ತಿದ್ರು

ಹಿಂದಿನ ಆವೃತ್ತಿಗಳನ್ನು ಮೆಲುಕು ಹಾಕಿದ ಸುದೀಪ್, ‘ಮೊದಲ ಆವೃತ್ತಿ ಆರಂಭವಾದಾಗ ಜನ ಹೇಗೆ ಸ್ವೀಕರಿಸುತ್ತಾರೆ ಎನ್ನುವ ಭಯವಿತ್ತು. ಹೀಗೆ ಎಂಟನೇ ಆವೃತ್ತಿಗೆ ಬಂದಿದ್ದೇವೆ. ಕೈ ಎತ್ತದೇ ಇದ್ದಿದ್ದರೆ ಹುಚ್ಚ ವೆಂಕಟ್ ಗೆಲ್ಲುತ್ತಿದ್ದರು. ಅವರಿಗೆ ಅಷ್ಟು ಮತಗಳನ್ನು ಜನ ನೀಡಿದ್ದರು. ಇನ್ನು ಆರನೇ ಆವೃತ್ತಿ ಸಂದರ್ಭದಲ್ಲಿ ಸಾಕಪ್ಪ ಸಾಕು ಎಂದೆನಿಸಿತ್ತು. ನನಗೂ ಬಿಗ್‌ಬಾಸ್ ಮನೆ ಒಳಗೆ ಹೋಗೋ ಆಸೆ ಇದೆ. ಆದರೆ ನನ್ನ ಪೇಮೆಂಟ್ ಅನ್ನು ಕಲರ್ಸ್ ಕನ್ನಡದವರಿಗೆ ನಿಭಾಯಿಸಲು ಸಾಧ್ಯವೇ ಎನ್ನುವುದು ಮುಖ್ಯ. ನಟರೆಲ್ಲರೂ ಬಿಗ್‌ಬಾಸ್ ಮನೆ ಒಳಗೆ ಸೇರಿಕೊಂಡರೆ ಹೇಗಿರುತ್ತದೆ ಎನ್ನುವ ಕಲ್ಪನೆ ಅದ್ಭುತ. ಆದರೆ ಬೀಗ ಹಾಕಬೇಕಾದೀತು’ ಎಂದು ಮುಗುಳ್ನಕ್ಕರು. ❖

ರಾಜಕೀಯದವರು ಇದ್ದಾರಾ?


ಸ್ಪರ್ಧಿಗಳಲ್ಲಿ ರಾಜಕೀಯ ನಾಯಕರೊಬ್ಬರು ಇರುತ್ತಾರೆ ಎಂದು ಗುಂಡ್ಕಲ್ ಅವರು ಹೇಳಿದಾಕ್ಷಣ, ಒಂದು ಕ್ಷಣ ಅಚ್ಚರಿಗೊಂಡ ಸುದೀಪ್, ‘ರಾಜಕೀಯದೋರು ಇರ್ತಾರ? ನಾನೇನಾದ್ರೂ ಅವರಿಗೆ ಹೇಳಿದರೆ ಸಮಸ್ಯೆ ಆಗೋದಿಲ್ಲ ತಾನೆ. ರಾಜಕೀಯದವರು ಬಂದರೆ ಮುಖ್ಯಮಂತ್ರಿ ಸ್ಥಾನದಲ್ಲಿ ಇರೋರೆ ಬಂದರೆ ಬೆಸ್ಟ್’ ಎಂದರು.

ಹೊಸಬರ ಸಾಲು ಚಿತ್ರಗಳು ತೆರೆಗೆ

ಈ ವಾರ ತೆರೆಗೆ

ಆಟೊ ರಾಮಣ್ಣ: ಬಹುಮುಖಿ ಪ್ರತಿಭಾವಂತ, ಕಲಾವಿದ, ಸಮಾಜ ಸೇವಕ, ವೃತ್ತಿಯಲ್ಲಿ ರಿಕ್ಷಾ ಚಾಲಕ ಆಟೊ ರಾಮಣ್ಣ ಅವರು ತಮ್ಮದೇ ಹೆಸರಿನ ಶೀರ್ಷಿಕೆಯ ಚಿತ್ರ ನಿರ್ಮಿಸಿದ್ದಾರೆ. ಫೆ. 26ರಂದು ತೆರೆ ಕಾಣುತ್ತಿದೆ. ಸ್ವತಃ ಆಟೊ ರಾಮಣ್ಣ ಮತ್ತು ಮಹೇಂದ್ರ ಮನ್ನೋತ್ ಪ್ರಧಾನ ಪಾತ್ರಗಳಲ್ಲಿದ್ದಾರೆ. ಕಥೆ, ಸಂಭಾಷಣೆ, ಚಿತ್ರಕಥೆ, ಸಾಹಸ ಮತ್ತು ನಿರ್ಮಾಣ ಆಟೊ ರಾಮಣ್ಣ ಅವರದ್ದೇ. ದೊಡ್ಡರಂಗೇಗೌಡ ಅವರು ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ರಿಷಬ್ ರತ್ನಂ ಅವರ ಸಂಗೀತವಿದೆ. ಅಜಯ್ ವಾರಿಯರ್ ಅವರು ಹಾಡಿದ್ದಾರೆ.

ಸ್ಕೇರಿ ಫಾರೆಸ್ಟ್: ‘ಸ್ಕೇರಿ ಫಾರೆಸ್ಟ್’ ಚಿತ್ರ ಈ ವಾರ ತೆರೆ ಕಾಣುತ್ತಿದೆ. ಈ ಚಿತ್ರಕ್ಕೆ ಪ್ರೀತಿ- ಭಯ- ಆತ್ಮ ಎಂಬ ಅಡಿಬರಹವಿದೆ. ಮೂಲತಃ ತುಮಕೂರಿನ ಮಾರಶೆಟ್ಟಿ ಹಳ್ಳಿಯ ಜಯಪ್ರಭು ಆರ್. ಲಿಂಗಾಯತ್ ಈ ಚಿತ್ರದ ನಿರ್ಮಾಪಕ ಹಾಗೂ ನಾಯಕ. ಜೀತ್ ರಾಯ್ದತ್ ಈ ಚಿತ್ರದ ದ್ವಿತೀಯ ನಾಯಕ. ಬಹುಭಾಷಾ ನಟ ಯಶ್‌ಪಾಲ್ ಶರ್ಮ ಪ್ರಮುಖ ಪಾತ್ರದಲ್ಲಿದ್ದಾರೆ. ಕೊಡಗಿನ ಟೀನಾ ಪೊನ್ನಪ್ಪ, ಆಮ್ ರೀನ್, ಕಲ್ಪನಾ ಈ ಚಿತ್ರದ ನಾಯಕಿಯರು. ಸಂಜಯ್ ಅಭೀರ್ ಈ ಚಿತ್ರದ ನಿರ್ದೇಶಕರು. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ನಿರ್ದೇಶಕರೇ ಬರೆದಿದ್ದಾರೆ. ಆದಿ ಹಾಗೂ ಎಲ್.ಕೆ.ಲಕ್ಷ್ಮೀಕಾಂತ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ತ್ರಿಕೋನ ಪ್ರೇಮ ಕಥೆಯನ್ನೊಳಗೊಂಡಿದೆ ಈ ಚಿತ್ರ. ನಿರ್ಮಾಪಕರ ಪುತ್ರಿ ಬೇಬಿ ಪೂಜಾ ಸಹ ಈ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. ❖



ಸುಭಾಷಿತ

ಹೇಗೆ ನಡೆದುಕೊಳ್ಳಬೇಕು, ಬದುಕಿನಲ್ಲಿ ಹೇಗೆಲ್ಲಾ ಇರಬೇಕು, ಹೇಗೆ ಕೆಲಸ ಮಾಡಬೇಕು ಎಂದೆಲ್ಲಾ ಮಕ್ಕಳಿಗೆ ಉಪದೇಶಿಸುವ ಬದಲು, ಮಕ್ಕಳಿಂದಲೇ ಕಲಿಯುವುದು ಹೆಚ್ಚು ಆಸಕ್ತಿದಾಯಕವಾಗಿರುತ್ತದೆ.

-ಯು.ಜಿ.ಕೃಷ್ಣಮೂರ್ತಿ

ಸಾಧಕರ ಹೆಸರು ಮುನ್ನೆಲೆಗೆ ಬರಲಿ ಪ್ರದರ್ಶನಪ್ರಿಯತೆ ಕೊನೆಗೊಳ್ಳಲಿ

ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣ ಎನ್ನುವ ಹೆಗ್ಗಳಿಕೆಯ, ಅಹಮದಾಬಾದ್‌ನ ಮೊಟೇರಾದಲ್ಲಿರುವ ಕ್ರೀಡಾಂಗಣಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹೆಸರನ್ನು ಇಟ್ಟಿರುವುದು ಸಾರ್ವಜನಿಕವಾಗಿ ಒಳ್ಳೆಯ ಮಾದರಿಯಲ್ಲ. ಕ್ರಿಕೆಟ್ ಸ್ಟೇಡಿಯಂ ಹೆಸರನ್ನಷ್ಟೇ ಬದಲಾಯಿಸಲಾಗಿದ್ದು, ಅಲ್ಲಿನ ಕ್ರೀಡಾ ಸಮುಚ್ಚಯಕ್ಕೆ ವಲ್ಲಭಭಾಯಿ ಪಟೇಲ್ ಅವರ ಹೆಸರನ್ನೇ ಮುಂದುವರಿಸಿರುವುದಾಗಿ ಅಧಿಕಾರಸ್ಥರು ಹೇಳಿದ್ದಾರೆ. ಆದರೆ, ಈ ಸಮರ್ಥನೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ಮೊದಲು 'ಗುಜರಾತ್ ಸ್ಟೇಡಿಯಂ' ಎಂದು ಕರೆಸಿಕೊಳ್ಳುತ್ತಿದ್ದ ಕ್ರೀಡಾಂಗಣವನ್ನು 1982ರಲ್ಲಿ 'ಸರ್ದಾರ್ ಪಟೇಲ್ ಸ್ಟೇಡಿಯಂ' ಎಂದು ಹೆಸರಿಸಲಾಯಿತು. ಸಬರಮತಿ ನದಿ ದಂಡೆಯಲ್ಲಿ 100 ಎಕರೆ ಜಮೀನನ್ನು ನೀಡಿ ಕ್ರೀಡಾಂಗಣವನ್ನು ಮರು ನಿರ್ಮಿಸಲಾಗಿತ್ತು. 2015ರಲ್ಲಿ ಮತ್ತೊಮ್ಮೆ ಕ್ರೀಡಾಂಗಣದ ಮರು ನಿರ್ಮಾಣಕ್ಕೆ ಚಾಲನೆ ದೊರೆತು, ಈಗ ಪೂರ್ಣಗೊಂಡಿರುವ ಅಂಗಳಕ್ಕೆ ನರೇಂದ್ರ ಮೋದಿ ಅವರ ಹೆಸರಿಡಲಾಗಿದೆ. ಹೆಸರು ಬದಲಾವಣೆಯ ಈ ಎಲ್ಲ ಹಂತಗಳಲ್ಲಿ ನಡೆದಿರುವುದು ರಾಜಕಾರಣವೇ ವಿನಾ ಕ್ರೀಡಾಸ್ಫೂರ್ತಿಯನ್ನು ಎತ್ತಿಹಿಡಿಯುವಂತಹ ವರ್ತನೆಯಲ್ಲ. ವಿಶ್ವದ ಅತ್ಯಂತ ಎತ್ತರದ ಪ್ರತಿಮೆ ಎನ್ನುವ ಹಿರಿಮೆಯ ವಲ್ಲಭಭಾಯಿ ಪಟೇಲರ ಪ್ರತಿಮೆಯನ್ನು ಗುಜರಾತ್‌ನಲ್ಲಿ 'ಏಕತೆ'ಯ ಹೆಸರಿನಲ್ಲಿ ಸರ್ಕಾರ ನಿರ್ಮಿಸಿದೆ. ಈಗ ವಿಶ್ವದ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣಕ್ಕೆ ಮೋದಿ ಹೆಸರಿನ ಬದಲಿಗೆ ಕ್ರಿಕೆಟ್ ಸಾಧಕರೊಬ್ಬರ ಹೆಸರನ್ನು ಇಟ್ಟಿದ್ದರೆ, ಸಂಬಂಧಿಸಿದ ಸಂಸ್ಥೆಗಳು ಹಾಗೂ ವ್ಯಕ್ತಿಗಳ ಗೌರವ ಹೆಚ್ಚುತ್ತಿತ್ತು. ಇಂತಹ ಅವಕಾಶವನ್ನು ಕೈಚೆಲ್ಲಲಾಗಿದೆ. ದೇಶದಲ್ಲಿ 'ನಾಮಕರಣ ರಾಜಕೀಯ' ಮುಂದುವರಿದಿದೆ. ದೇಶದ ಅನೇಕ ಕ್ರೀಡಾ ಅಂಗಳಗಳು ರಾಜಕಾರಣಿಗಳ ಹೆಸರಿನೊಂದಿಗೆ ತಳಕು ಹಾಕಿಕೊಂಡಿವೆಯೇ ಹೊರತು, ಆಟಗಾರರ ಹೆಸರು–ಸಾಧನೆಯ ನೆನಪುಗಳನ್ನು ಹೊಂದಿಲ್ಲ. ಪಕ್ಷದ ಕೆಲವೇ ಮುಖಂಡರ ಹೆಸರುಗಳನ್ನು ಸರ್ಕಾರದ ವಿವಿಧ ಯೋಜನೆಗಳಿಗೆ, ಕ್ರೀಡಾಂಗಣಗಳಿಗೆ ಇರಿಸುವ ಕಾಂಗ್ರೆಸ್ ಪಕ್ಷದ ಚಾಳಿಯನ್ನು ಬಿಜೆಪಿ ಬಲವಾಗಿ ವಿರೋಧಿಸಿಕೊಂಡು ಬಂದಿದೆ. ಈಗ ಆ ಪಕ್ಷವೇ ಕೇಂದ್ರ ಮತ್ತು ಗುಜರಾತ್‌ನಲ್ಲಿ ಅಧಿಕಾರದಲ್ಲಿದೆ. ಇಂತಹ ಮಹತ್ವದ ಕ್ರೀಡಾಂಗಣಕ್ಕೆ ಮೋದಿ ಅವರ ಹೆಸರನ್ನು ಇರಿಸುವ ನಿರ್ಧಾರವನ್ನು ಯಾರೇ ಕೈಗೊಂಡಿರಲಿ, ಅದನ್ನು ಬಿಜೆಪಿ ವಿರೋಧಿಸಬೇಕಿತ್ತು. ಈ ಹಿಂದಿನ ರಾಜಕೀಯ ನಾಮಕರಣಗಳನ್ನು ಮುಂದಿರಿಸಿ ಸಮರ್ಥಿಸಿಕೊಳ್ಳುವುದು ಸರಿಯಾದ ನಡೆ ಎನಿಸಿಕೊಳ್ಳುವುದಿಲ್ಲ.



ಕ್ರೀಡಾಂಗಣ ಮಾತ್ರವಲ್ಲ, ಯಾವುದೇ ಕ್ಷೇತ್ರ, ಸಂಸ್ಥೆಗೆ ಸಂಬಂಧಿಸಿದಂತೆ ನಾಮಕರಣ ಮಾಡುವಾಗ, ಆಯಾ ಕ್ಷೇತ್ರದ ಸಾಧಕರ ಹೆಸರುಗಳನ್ನೇ ಪರಿಗಣಿಸುವುದು ಔಚಿತ್ಯಪೂರ್ಣ

ಕ್ರೀಡಾಂಗಣದ ಮರುನಾಮಕರಣದ ಚರ್ಚೆಯಲ್ಲಿ ಗಮನಿಸಬೇಕಾಗಿರುವುದು ನರೇಂದ್ರ ಮೋದಿ ಅವರ ಅರ್ಹತೆಯ ವಿಷಯವನ್ನಲ್ಲ. ಇಂಥ ನಾಮಕರಣಗಳ ಮೂಲಕ ಸಮಾಜಕ್ಕೆ ಯಾವ ರೀತಿಯ ಸಂದೇಶ ರವಾನೆ ಆಗುತ್ತದೆ ಎನ್ನುವುದನ್ನು ಸಂಬಂಧಿಸಿದವರು ಯೋಚಿಸಬೇಕು. ಮೊಟೇರಾದಲ್ಲಿರುವ ಕ್ರೀಡಾಂಗಣಕ್ಕೆ ಕ್ರಿಕೆಟ್‌ನಲ್ಲಿ ಉನ್ನತ ಸಾಧನೆ ಮಾಡಿರುವ ಸಾಧಕರ ಹೆಸರನ್ನು ಇಡುವುದು ಎಲ್ಲ ರೀತಿಯಿಂದಲೂ ಸರಿಯಾಗಿದ್ದ ಕ್ರಮ. ಕ್ರೀಡಾಂಗಣ ಮಾತ್ರವಲ್ಲ, ಯಾವುದೇ ಕ್ಷೇತ್ರ, ಸಂಸ್ಥೆ ಅಥವಾ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಾಮಕರಣ ಮಾಡುವಾಗ, ಆಯಾ ಕ್ಷೇತ್ರದ ಸಾಧಕರ ಹೆಸರುಗಳನ್ನೇ ಪರಿಗಣಿಸುವುದು ಔಚಿತ್ಯಪೂರ್ಣ. ಉನ್ನತ ಸಂಸ್ಥೆಗಳನ್ನು ಹೆಸರಿಸುವ ಸಂದರ್ಭಗಳನ್ನು ಪ್ರಾದೇಶಿಕ ನಾಯಕರನ್ನು ಗೌರವಿಸುವುದಕ್ಕೆ ಬಳಸಿಕೊಳ್ಳುವುದು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಅಗತ್ಯವಾದುದು. ಇಡುವ ಹೆಸರುಗಳು ಆ ಕ್ಷೇತ್ರಗಳ ಯುವ ಸಾಧಕರಿಗೆ ಪ್ರೇರಣೆಯ ರೂಪದಲ್ಲಿ ಒದಗಿಬರುವಂತಿರಬೇಕು; ಸಾಧ್ಯವಾದಷ್ಟೂ ಪ್ರಾದೇಶಿಕ ಅನನ್ಯತೆಯನ್ನೂ ಪ್ರತಿನಿಧಿಸಬೇಕು. ಅಧಿಕಾರಬಲದಿಂದ ರಾಜಕಾರಣಿಗಳ ಹೆಸರನ್ನು ಎಲ್ಲೆಡೆ ತೂರಿಸುವುದು ರಾಜಕೀಯ ಪ್ರದರ್ಶನಪ್ರಿಯತೆ ಎನ್ನಿಸಬಹುದೇ ಹೊರತು ರಚನಾತ್ಮಕ ಬೆಳವಣಿಗೆಗೆ ಸಹಕಾರಿ ಆಗುವಂತಹದ್ದಲ್ಲ. ಅಧಿಕಾರದಲ್ಲಿರುವ ಪಕ್ಷ ತನ್ನ ನಾಯಕರ ಹೆಸರುಗಳನ್ನು ಸಂಸ್ಥೆಗಳಿಗೆ ಅಥವಾ ಆಟದ ಮೈದಾನಗಳಿಗೆ ಇಡುವುದು, ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಅದನ್ನು ಬದಲಾಯಿಸುವುದು ರಾಜಕೀಯದ ಕ್ಷುಲ್ಲಕ ವರ್ತನೆಗಳೇ ವಿನಾ ಸಾರ್ವಜನಿಕವಾಗಿ ಮಾದರಿ ನಡಾವಳಿಗಳಲ್ಲ.

ದಿನದ ಟ್ವೀಟ್



ಇನ್ನೂ ಕಾಯಬೇಕು

ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಯುನೈಟೆಡ್ ಕಿಂಗ್ಡಂನ (ಯು.ಕೆ) ನ್ಯಾಯಾಲಯವೊಂದು ಅನುಮತಿ ಕೊಟ್ಟಿದೆ. ಆದರೆ ಅವರು ಇನ್ನೂ ಅಲ್ಲಿನ ಕ್ರೌನ್ ಕೋರ್ಟ್/ಹೈಕೋರ್ಟ್ ಮತ್ತು ನಂತರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ. ನೆನಪಿಡಿ, ಮಲ್ಯ ಅವರು ಯು.ಕೆ.ಯ ಎಲ್ಲ ನ್ಯಾಯಾಲಯಗಳಲ್ಲೂ ಸೋತಿದ್ದಾರೆ. ಅಷ್ಟಾದರೂ ಅವರನ್ನು ಇನ್ನಷ್ಟೇ ಭಾರತಕ್ಕೆ ಹಸ್ತಾಂತರಿಸಬೇಕಾಗಿದೆ.

ಉತ್ಕರ್ಷ್ ಆನಂದ್, ಪತ್ರಕರ್ತ

25 ವರ್ಷಗಳ ಹಿಂದೆ

ಸೋಮವಾರ, 26-2-1996

• ಸಿನಿಮಾ ಪ್ರದರ್ಶಕರ 'ಕನ್ನಡ ದ್ರೋಹ'– ಗಣ್ಯರ ಪ್ರಹಾರ

ಬೆಂಗಳೂರು, ಫೆ. 25– 'ಕನ್ನಡ ಚಿತ್ರಗಳ ಪಾಲಿಗೆ 'ರಾಹು ಕೇತುಗಳಂತೆ' ಕಾಡುತ್ತಿರುವ ಚಿತ್ರ ಪ್ರದರ್ಶಕರು ಮತ್ತು ವಿತರಕರ ಧೋರಣೆ ಕನ್ನಡದ್ರೋಹಿ ನಿಲುವಾಗಿದೆ' ಎಂದು ಇಲ್ಲಿ ಇಂದು ನಡೆದ ಚಿಂತನ ಕಾರ್ಯಕ್ರಮವೊಂದರಲ್ಲಿ ಒಟ್ಟಾರೆ ಅಭಿಪ್ರಾಯ ಮೂಡಿಬಂತು.

ಕನ್ನಡ ಚಿತ್ರಗಳ ಅಳಿವು ಉಳಿವಿಗಾಗಿ ಈಗ ನಡೆದಿರುವ ಹೋರಾಟದಲ್ಲಿ ಕನ್ನಡ ಸಾಹಿತ್ಯ ಲೋಕದ ಗಣ್ಯರು ಸಕ್ರಿಯವಾಗಿ ಪಾಲ್ಗೊಂಡಲ್ಲಿ ಈ ಆಂದೋಲನ ಇನ್ನಷ್ಟು ವ್ಯಾಪಕ ಸ್ವರೂಪವನ್ನು ತಳೆದೀತು ಎಂಬ ಮನವಿಯನ್ನೂ ಈ ಚಿಂತನ ವೇದಿಕೆ ಮಾಡಿಕೊಂಡಿತು.

ಮಲಯಾಳಂ, ತೆಲುಗು ಭಾಷೆಗಳಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಂಥ ಸಾಹಿತಿಗಳೂ ಚಿತ್ರ ನಿರ್ಮಾಣದ ಚಟುವಟಿಕೆಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದಾರೆ. ಕನ್ನಡದಲ್ಲಿಯೂ ಇಂಥ ಬೆಳವಣಿಗೆಯಾದರೆ ಕಳಪೆ ಚಿತ್ರಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿ ಉದ್ಯಮಕ್ಕೆ ಅಂಟಿರುವ ಕಳಂಕ ನಿವಾರಣೆಯಾಗುವ ಸಾಧ್ಯತೆಯೂ ಇದೆ ಎಂದೂ ಪ್ರತಿಪಾದಿಸಲಾಯಿತು.

• ಬೇಸಿಗೆಗೆ ಮೊದಲೇ ನೀರಿನ ಬವಣೆ

ಬೆಂಗಳೂರು, ಫೆ. 25– ಬೇಸಿಗೆ ಹತ್ತಿರ ಬಂದಂತೆ ಬೆಂಗಳೂರಿನಲ್ಲಿ ಚಡಪಡಿಕೆ ಶುರುವಾಗುತ್ತದೆ. ತಿಪ್ಪಗೊಂಡನಹಳ್ಳಿ, ಹೆಸರಘಟ್ಟಗಳಲ್ಲಿ ನೀರಿನ ಪ್ರಮಾಣ ಕುಗ್ಗಿ ನಲ್ಲಿಗಳು ಸೊರ್ರನೆ 'ಅಳಲಾರಂಭಿಸುತ್ತವೆ': ನೀರಿಗಾಗಿ ಮನೆ ಮಂದಿಯೆಲ್ಲಾ ರಾತ್ರಿ ಪಾಳಿ ಮಾಡಿ ಸುಸ್ತಾಗಿ ಜನರ ಸಹನೆ ಆವಿಯಾಗುತ್ತದೆ. ಜಲಮಂಡಲಿಗೆ ಈ ನಾಲ್ಕು ತಿಂಗಳು ಶರಶಯ್ಯೆಯ ಮೇಲೆ ಮಲಗಿದಂತೆ. ಮಿನಿ ಜಲ ವಿವಾದಗಳು ಅಲ್ಲಲ್ಲಿ.

50 ವರ್ಷಗಳ ಹಿಂದೆ

ಶುಕ್ರವಾರ, 26-2-1971

• ಬಂಗಾಳ ಪೊಲೀಸ್ ಠಾಣೆಗೆ ಸೈನ್ಯದ ಕಾವಲು: 5 ಸಾವು

ಕಲ್ಕತ್ತ, ಫೆ. 25– ಪಶ್ಚಿಮ ಬಂಗಾಳದ ಪೊಲೀಸ್ ಠಾಣೆಗಳಲ್ಲಿ ಸೈನ್ಯ ಪಡೆಗಳನ್ನು ಕಾವಲಿಗೆ ಇಟ್ಟಿರುವುದಾಗಿ ಅಧಿಕೃತ ವಲಯಗಳಿಂದ ಗೊತ್ತಾಗಿದೆ. ಚುನಾವಣೆ ಸಂಬಂಧದ ಕೆಲಸಗಳಿಗೆ ಪೊಲೀಸರನ್ನು ಒದಗಿಸುವುದು ಹಾಗೂ ಈಚೆಗೆ ರೈಫಲ್‌ಗಳನ್ನು ಶಸ್ತ್ರಸಜ್ಜಿತರು ಕಸಿದುಕೊಂಡು ಹೋದುದರಿಂದ ಠಾಣೆಗಳಿಗೆ ರಕ್ಷಣೆ ನೀಡುವುದು ಈ ಕ್ರಮದ ಉದ್ದೇಶ.

ಐದು ಜನರ ಸಾವು: ಇಬ್ಬರು ಉಗ್ರವಾದಿ ಕೈದಿಗಳೂ ಸೇರಿ ಒಟ್ಟು ಐದು ಜನ ಕಲ್ಕತ್ತ ನಗರ ಮತ್ತು ಪಶ್ಚಿಮ ಬಂಗಾಳದ ಇತರ ಜಿಲ್ಲೆಗಳಲ್ಲಿ ಹಿಂಸಾಕೃತ್ಯಗಳಿಂದ ಈ ದಿನ ಸತ್ತರು. ಹತ್ತು ಜನ ಗಾಯಗೊಂಡಿದ್ದಾರೆ.

• ನಿರ್ಧಾರ ಅಚಲವಾದರೆ ಅಧ್ಯಯನ ತಂಡದಿಂದ ಭಾರತದ ನಿರ್ಗಮನ

ನವದೆಹಲಿ, ಫೆ. 25– ದಕ್ಷಿಣ ಆಫ್ರಿಕಾಕ್ಕೆ ಶಸ್ತ್ರಾಸ್ತ್ರಗಳನ್ನು ಮಾರುವ ಬ್ರಿಟನ್ ನಿರ್ಧಾರದಿಂದ ಉದ್ಭವಿಸಿರುವ ಹೊಸ ಪರಿಸ್ಥಿತಿಯಲ್ಲಿ ಭಾರತವು ಎಂಟು ಸದಸ್ಯ ರಾಷ್ಟ್ರಗಳ ಕಾಮನ್‌ವೆಲ್ತ್ ಅಧ್ಯಯನ ತಂಡ ತ್ಯಜಿಸುವುದೆಂದು ವಿದೇಶಾಂಗ ಸಚಿವ ಶ್ರೀ ಸ್ವರಣ್‌ಸಿಂಗ್ ಅವರು ಇಂದು ಇಂಗಿತ ಕೊಟ್ಟಿದ್ದಾರೆ.

ಬ್ರಿಟಿಷ್ ನಿರ್ಧಾರ ಆಖೈರು ಮತ್ತು ಅಚಲವಾದರೆ ಅಧ್ಯಯನ ತಂಡದ ಸಮಾವೇಶ ವ್ಯಥಾ ಶ್ರಮವಾಗುವುದೆಂಬ ಭಾರತದ ಹೇಳಿಕೆ ಬ್ರಿಟನ್ನಿಗೆ ಕಟ್ಟಕಡೆಯ ಎಚ್ಚರಿಕೆ ಎಂದು ರಾಜತಾಂತ್ರಿಕ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

ಅರಣ್ಯ, ವನ್ಯಜೀವಿ ಸಂರಕ್ಷಣಾ ಕಾರ್ಯ ಅನುದಾನದ ಕೊರತೆಯಿಂದ ಸೊರಗುವ ಆತಂಕವಿದೆ

ಹವಾಗುಣ ಮತ್ತು ಅನುದಾನದ ಮಹತ್ವ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಸ್ವಾತಂತ್ರ್ಯೋತ್ತರ ಭಾರತವು ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬ್ರಿಟಿಷರ ಆಳ್ವಿಕೆ ಕೊನೆಗೊಂಡ ಮೇಲೆ ದೇಶ ಹಲವು ಸ್ತರದ ಅಭಿವೃದ್ಧಿಗಳನ್ನು ಕಂಡಿದೆ. ಆಹಾರಭದ್ರತೆಯ ವಿಷಯದಲ್ಲಿ ಸ್ವಾವಲಂಬನೆ ಹೊಂದಿದೆ. ದೇಶದ ಉದ್ದಗಲಕ್ಕೂ ರೈಲು ಹಳಿಗಳು ಚಾಚಿಕೊಂಡಿವೆ. ರಸ್ತೆಗಳು, ಹೆದ್ದಾರಿಗಳು ಸುಗಮ ಸಂಚಾರಕ್ಕೆ ನಾಂದಿ ಹಾಡಿವೆ. ಶಿಕ್ಷಣ ಕ್ಷೇತ್ರ ಬಲವೃದ್ಧಿಗೊಂಡಿದೆ. ನೆಲ-ಜಲ-ಆಕಾಶ ಮಾರ್ಗಗಳು, ದೇಶದ ಭದ್ರತೆ ಹೀಗೆ ಪ್ರತಿಯೊಂದು ಕ್ಷೇತ್ರವೂ ಉತ್ತಮಗೊಳ್ಳುತ್ತಾ ಸಾಗಿದೆ. ಜನಸಂಖ್ಯಾ ಸ್ಫೋಟ ಮತ್ತು ಮಾನವಕೇಂದ್ರಿತ ಅಭಿವೃದ್ಧಿಯೆಂಬ ಮಹಾ ಕತ್ತರಿಗಳು ಬಾಳೆದಿಂಡಿನಷ್ಟು ನಾಜೂಕಾದ 'ಪರಿಸರ'ವನ್ನು ನಿರ್ದಯವಾಗಿ ಕತ್ತರಿಸುತ್ತಿವೆ.

ಆಯಾ ಕಾಲಕ್ಕೆ ಆಳಿದ ಸರ್ಕಾರಗಳು ದೇಶದ ಒಳಿತಿಗಾಗಿ 'ಪರಿಸರ, ವನ್ಯಜೀವಿ, ಜೀವಿವೈವಿಧ್ಯ'ಗಳನ್ನು ರಕ್ಷಿಸುವಲ್ಲಿ ತಮ್ಮದೇ ಕೊಡುಗೆ ನೀಡಿವೆ. ರಾಷ್ಟ್ರೀಯ ಅರಣ್ಯ ನೀತಿ– 1988ರ ಪ್ರಕಾರ, ದೇಶದ ಗುಡ್ಡಗಾಡುಗಳಲ್ಲಿ ಶೇ 66 ಮತ್ತು ಸಮತಟ್ಟಾದ ಪ್ರದೇಶದಲ್ಲಿ ಶೇ 33ರಷ್ಟು ಅರಣ್ಯ ಪ್ರದೇಶವಿರಬೇಕು. ಇಷ್ಟು ಪ್ರಮಾಣದ ಅರಣ್ಯ ಪ್ರದೇಶಗಳು ವಾಸ್ತವಿಕವಾಗಿ ಇಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ದೇಶದ ಒಟ್ಟೂ ಭೌಗೋಳಿಕ ವಿಸ್ತೀರ್ಣದ ಬರೀ ಶೇ 4ರಷ್ಟು ಪ್ರದೇಶ ಈಗ ರಾಷ್ಟ್ರೀಯ ವನ್ಯಜೀವಿಧಾಮ, ಅಭಯಾರಣ್ಯಗಳ ಹೆಸರಿನಲ್ಲಿ ಉಳಿದಿದೆ.

ಪರಿಸರಕ್ಕೆ ಸಂಬಂಧಿಸಿದ ಬಿಗಿ ಕಾನೂನುಗಳನ್ನು ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರ ಸಡಿಲಗೊಳಿಸುತ್ತಾ ಬಂದಿದೆ. ಖುದ್ದು ಪ್ರಧಾನಿಯೇ ಅಧ್ಯಕ್ಷರಾಗಿರುವ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ವನ್ಯಜೀವಿ ಸಂರಕ್ಷಣಾ ಪ್ರದೇಶಗಳ ಸೂಕ್ಷ್ಮ ಪ್ರದೇಶಗಳಲ್ಲೂ ರೈಲು ಮಾರ್ಗಗಳಿಗೆ ಪರವಾನಗಿ ನೀಡಲಾಗುತ್ತಿದೆ. ಕಲ್ಲಿದ್ದಲು ಗಣಿಗಾರಿಕೆಗೆ ವಿಶೇಷ ಒತ್ತು ನೀಡಿ, ವನ್ಯಜೀವಿಗಳ ಆವಾಸಸ್ಥಾನವನ್ನು ಛಿದ್ರಗೊಳಿಸಲಾಗುತ್ತಿದೆ.

ಇಪ್ಪತ್ತು ವರ್ಷಗಳಿಂದ ಅಂತರರಾಷ್ಟ್ರೀಯವಾಗಿ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿರುವ ವಿಷಯ 'ಹವಾಗುಣ ಬದಲಾವಣೆ' ಮತ್ತು ಅದರಿಂದ ಆಗುವ ಜಾಗತಿಕ ದುಷ್ಪರಿಣಾಮಗಳು. ವಾತಾವರಣದಲ್ಲಿ ಇಂಗಾಲಾಮ್ಲದ ಪ್ರಮಾಣ ಏರಿಕೆಯಾಗುತ್ತಿದ್ದಂತೆ, ನೈಸರ್ಗಿಕ ವಿಕೋಪಗಳ ಸಂಖ್ಯೆಯೂ ವೃದ್ಧಿಯಾಗುತ್ತದೆ. ಅಕಾಲಿಕವಾದ ಮಳೆಯು ನೆರೆಯನ್ನು ತಂದು ಬದುಕನ್ನು ನಾಶ ಮಾಡಿದರೆ, ಬರದ ವಿಕೋಪವು ಜಾಗತಿಕ ಜನಸಂಖ್ಯೆಗೇ ಮಾರಕವಾಗಿ ಪರಿಣಮಿಸುತ್ತದೆ. ಹಿಮಕವಚಗಳು ಬಿಸಿಯೇರಿಕೆಯಿಂದ ಕಳಚಿ ನದಿಗೆ ಬೀಳುತ್ತವೆ. ಜಲಭದ್ರತೆ, ಆಹಾರಭದ್ರತೆ, ಆರೋಗ್ಯ ಭದ್ರತೆ... ಹೀಗೆ ಎಲ್ಲಾ ಕ್ಷೇತ್ರಗಳು ಸೊರಗಿ ಹೋಗುತ್ತವೆ.

ಹವಾಮಾನ ವಿಜ್ಞಾನಿಗಳು, ಪರಿಸರ ತಜ್ಞರು, ಜಾಗತಿಕ ಮಟ್ಟದ ಆರ್ಥಿಕ ವಿಶ್ಲೇಷಕರು ಒಳಗೊಂಡಂತೆ ವಿವಿಧ ಕ್ಷೇತ್ರಗಳ ಚಿಂತಕರು ಹೇಳುವಂತೆ, ಹವಾಗುಣ ಬದಲಾವಣೆಗೆ ಕಡಿವಾಣ ಹಾಕಲು ಅತ್ಯಂತ ಸುಲಭದ ಮಾರ್ಗವೆಂದರೆ, ಈಗಿರುವ ಅರಣ್ಯ ಪ್ರದೇಶವನ್ನು ಉಳಿಸಿಕೊಳ್ಳುವುದು ಹಾಗೂ ಅರಣ್ಯ ವ್ಯಾಪ್ತಿಯನ್ನು ಹೆಚ್ಚು ಮಾಡುವುದು. ಇದೇ ಅತ್ಯಂತ ಅಗ್ಗದ, ಸುಲಭದ ಮತ್ತು ಎಲ್ಲರ ಕೈಗೆಟಕುವ ತಂತ್ರಜ್ಞಾನ. ವನ್ಯಜೀವಿಗಳ ಆವಾಸಸ್ಥಾನವನ್ನು ಹೆಚ್ಚು ಮಾಡುವುದರಿಂದ ವಾತಾವರಣದ ಇಂಗಾಲಾಮ್ಲದ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದಾಗಿದೆ.

ಭಾರತವನ್ನು ಕೇಂದ್ರವಾಗಿಟ್ಟುಕೊಂಡು ಹವಾಗುಣ ಬದಲಾವಣೆಯಂತಹ ಗಂಭೀರ ವಿಷಯವನ್ನು ಚರ್ಚೆ ಮಾಡುವುದಾದಲ್ಲಿ, ನಮ್ಮ ಒಟ್ಟೂ ಭೌಗೋಳಿಕ ವ್ಯಾಪ್ತಿಯ ಶೇ 96ರಷ್ಟು ಪ್ರದೇಶವನ್ನು ಮಾನವಕೇಂದ್ರಿತ ಚಟುವಟಿಕೆಗಳಿಗಾಗಿಯೇ ಮೀಸಲಾಗಿಟ್ಟುಕೊಂಡಿದ್ದೇವೆ. ಇನ್ನುಳಿದ ಶೇ 4ರಷ್ಟು ಪ್ರದೇಶವನ್ನಾದರೂ ಅಭಿವೃದ್ಧಿ ಚಟುವಟಿಕೆಗಳಿಂದ ಹೊರತಾಗಿಡಬೇಕು ಹಾಗೂ ಮುಂದಿನ ದಿನಗಳಲ್ಲಿ ಸಂರಕ್ಷಿತ ಪ್ರದೇಶಗಳನ್ನು ಶೇ 10-20ರವರೆಗೆ ಹೆಚ್ಚು ಮಾಡಬೇಕು.

ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ 'ಕಾಗದರಹಿತ ಬಜೆಟ್' ಮಂಡನೆ ಮಾಡುವುದರ ಮೂಲಕ ಅಷ್ಟು ಕಾಗದವನ್ನೇನೋ ಉಳಿಕೆ ಮಾಡಿದರು. ಆದರೆ, ಪರಿಸರ, ಅರಣ್ಯ ಮತ್ತು ಹವಾಗುಣ ಬದಲಾವಣೆ ಸಚಿವಾಲಯಕ್ಕೆ ಸಂದ ಅನುದಾನ ಬರೀ ₹ 2869.93 ಕೋಟಿ, ಇದು ಕಳೆದ ವರ್ಷ ನೀಡಿದ ಹಣಕ್ಕಿಂತ ಶೇ 7.4ರಷ್ಟು ಕಡಿಮೆ. ಹಿಂದಿನ ಬಜೆಟ್ಟಿನಲ್ಲಿ ಇದರ ಮೊತ್ತ ₹ 3,100 ಕೋಟಿ ಇತ್ತು. ಇಷ್ಟು ಮಟ್ಟದ ಹಣಕಾಸು ಕಡಿತದಿಂದ, ಅರಣ್ಯ, ವನ್ಯಜೀವಿ, ಜೀವಿವೈವಿಧ್ಯ ಸಂರಕ್ಷಣೆ ಮಾಡುವ ಇಲಾಖೆಗಳು ನಿಶ್ಚಿತವಾಗಿ ಸೊರಗಿ ಹೋಗಲಿವೆ.

ಪ್ಯಾರಿಸ್ ಹವಾಗುಣ ಬದಲಾವಣೆ ಒಪ್ಪಂದದ ಭಾಗವಾಗಿ ಉತ್ತರದಾಯಿತ್ವ ತೋರುವ ದಿಸೆಯಲ್ಲಿ ದೇಶದ ಹಸಿರು ಕವಚವನ್ನು ಹೆಚ್ಚು ಮಾಡುವ ಉದ್ದೇಶ ಹೊಂದಿದ ಹಸಿರು ಭಾರತ ಯೋಜನೆಯ ಹಣಕಾಸಿನ ನೆರವನ್ನೂ ಕಡಿಮೆ ಮಾಡಲಾಗಿದೆ. ಇದರಿಂದ, ಪ್ಯಾರಿಸ್ ಒಪ್ಪಂದಕ್ಕೆ ನೀಡಿದ ವಾಗ್ದಾನಕ್ಕೆ ಅಪಚಾರವಾದಂತಾಗಿದೆ. 2019ರಲ್ಲಿ ಹೆಚ್ಚೂ ಕಡಿಮೆ ದಿನಕ್ಕೆ ನೂರು ಎಕರೆಯಂತೆ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಪರಿವರ್ತನೆ ಮಾಡಿರುವುದು ಅಂತರರಾಷ್ಟ್ರೀಯ ಒಪ್ಪಂದಕ್ಕೆ ಬಗೆದ ದ್ರೋಹವೆಂದು ಹೇಳಬಹುದು.

ಪರಿಸರ ಪಥ್ಯ, ಜಾಗೃತಿ ಮತ್ತು ತರಬೇತಿ ಉದ್ದೇಶಗಳಿಗೆ 2021-22ರ ಬಜೆಟ್ಟಿನಲ್ಲಿ ಶೇ 32.5ರಷ್ಟು ಕಡಿಮೆ ಹಣವನ್ನು ಮೀಸಲಿಡಲಾಗಿದೆ. 2020-21ರಲ್ಲಿ ನೀಡಿದ ₹ 114.35 ಕೋಟಿ ಅನುದಾನದ ಮೊತ್ತವನ್ನು ಕಡಿಮೆ ಮಾಡಿ ಈ ಸಾಲಿನಲ್ಲಿ ಬರೀ ₹ 77.13 ಕೋಟಿಯನ್ನು ಮೀಸಲಿಡಲಾಗಿದೆ. ಹಾಗೆಯೇ ಸಂಶೋಧನೆ ಮತ್ತು ಅಭಿವೃದ್ಧಿ ಬಾಬತ್ತನ್ನು ₹ 7 ಕೋಟಿಯಿಂದ ₹ 5 ಕೋಟಿಗೆ ಇಳಿಸಲಾಗಿದೆ. ವನ್ಯಜೀವಿ ಆವಾಸಸ್ಥಾನಗಳ ಸಮಗ್ರ ಅಭಿವೃದ್ಧಿಯ ಅನುದಾನವನ್ನು ₹ 532 ಕೋಟಿಯಿಂದ ₹ 414 ಕೋಟಿಗೆ ಇಳಿಸಲಾಗಿದೆ. ಈ ಮೊತ್ತವನ್ನು ಹುಲಿ ಮತ್ತು ಆನೆ ಯೋಜನೆಗಳ ಅಡಿಯಲ್ಲಿ ವನ್ಯಜೀವಿಗಳ ಸಮಗ್ರ ಅಭಿವೃದ್ಧಿಗಾಗಿ ಬಳಸಲಾಗುತ್ತದೆ. ಜೊತೆಗೆ ಹುಲಿ ಯೋಜನೆಗಾಗಿ ಮೀಸಲಾಗಿಡುತ್ತಿದ್ದ ಅನುದಾನವನ್ನು ₹ 350 ಕೋಟಿಯಿಂದ ₹ 250 ಕೋಟಿಗೆ ಇಳಿಸಲಾಗಿದೆ. ರಾಷ್ಟ್ರೀಯ ಸಂರಕ್ಷಣೆ ನಿಗಮದ ಅಡಿಯಲ್ಲಿ ಬರುವ 73,000 ಚ.ಕಿ.ಮೀ. ವ್ಯಾಪ್ತಿಯ 51 ಹುಲಿ ಸಂರಕ್ಷಿತ ಪ್ರದೇಶಗಳ ರಕ್ಷಣೆ ಮತ್ತು ಉಸ್ತುವಾರಿಗಾಗಿ ನೀಡಿದ ಅನುದಾನ ಬರೀ ₹ 10 ಕೋಟಿ!

ಆನೆ ಯೋಜನೆ ಅನುದಾನದಲ್ಲಿ ₹ 2 ಕೋಟಿಯಷ್ಟು ಕಡಿಮೆ ಮಾಡಿ ₹ 33 ಕೋಟಿಯನ್ನು ನಿಗದಿ ಮಾಡಲಾಗಿದೆ. ಭಾರತೀಯ ವನ್ಯಜೀವಿ ಸಂಸ್ಥೆ ಹಾಗೂ ಭಾರತೀಯ ಅರಣ್ಯ ನಿರ್ವಹಣೆ ಸಂಸ್ಥೆಯಂತಹ ಅತಿ ಪ್ರಮುಖ ಸಂಸ್ಥೆಗಳಿಗೆ ನೀಡುವ ಅನುದಾನದಲ್ಲೂ ಗಮನಾರ್ಹವಾಗಿ ಕಡಿತ ಮಾಡಲಾಗಿದೆ. ₹ 34 ಕೋಟಿಯಿಂದ ₹ 25 ಕೋಟಿಗೆ ಅನುದಾನದ ಪ್ರಮಾಣವನ್ನು ಇಳಿಸಲಾಗಿದೆ. ವಿಪರ್ಯಾಸವೆಂದರೆ, ಇದೇ ಬಜೆಟ್ಟಿನಲ್ಲಿ ಕೇಂದ್ರ ರೇಷ್ಮೆ ಅಭಿವೃದ್ಧಿ ಮಂಡಳಿಗೆ ನೀಡುವ ಅನುದಾನವನ್ನು ₹ 75 ಕೋಟಿಯಿಂದ ₹ 875 ಕೋಟಿಗೆ ಹೆಚ್ಚಿಸಲಾಗಿದೆ. ಹುಲಿ ಯೋಜನೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಮತ್ತು ಆನೆ ಸಂರಕ್ಷಣಾ ಯೋಜನೆಗಾಗಿ ನೀಡುವ ಮೊತ್ತಕ್ಕಿಂತ ಈ ಮೊತ್ತ ಸುಮಾರು ಮೂರು ಪಟ್ಟು ಹೆಚ್ಚು. ವಿಶ್ವದಲ್ಲೇ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದಲ್ಲಿ ಜೀವಿವೈವಿಧ್ಯದ ಮೇರು ಸ್ಥಾನದಲ್ಲಿರುವ ಹುಲಿಗಳಿಗಿಂತ ರೇಶಿಮೆ ಎಳೆಗಳಿಗೆ ತೂಕ ಹೆಚ್ಚು!

ಈಗಿರುವ ಪ್ರಮುಖ ಪ್ರಶ್ನೆಯೆಂದರೆ, ಭಾರತದಲ್ಲಿ ಬಹಳಷ್ಟು ವನ್ಯಜೀವಿ ಆವಾಸಸ್ಥಾನಗಳನ್ನು ಸಂರಕ್ಷಿಸಲಾಗಿದ್ದು, ಈ ಪ್ರಮಾಣ ಸಂತೃಪ್ತಿದಾಯಕ ಎನಿಸಿ ಅನುದಾನದಲ್ಲಿ ಕಡಿತ ಮಾಡಲಾಗಿದೆಯೇ? ಪರಿಸರ, ವನ್ಯಜೀವಿ, ಜೀವಿವೈವಿಧ್ಯಕ್ಕೆ ಸಂಬಂಧಿಸಿದಂತೆ ಇವುಗಳ ರಕ್ಷಣೆಯಾಗಲೀ ಅಭಿವೃದ್ಧಿಯಾಗಲೀ ಆಗಿರುವುದಿಲ್ಲ. ಜೀವಿವೈವಿಧ್ಯ ಸಂರಕ್ಷಣೆಯಂತಹ ಮೇರು ಸಂಗತಿಗೆ ಒಂದು ನಗರಪಾಲಿಕೆಯ ನೀರು ಸರಬರಾಜು ವ್ಯವಸ್ಥೆಗೆ ಇಡುವಷ್ಟು ಅನುದಾನ, ಅಂದರೆ ಬರೀ ₹ 12 ಕೋಟಿಯಷ್ಟನ್ನು ಮೀಸಲಿಡಲಾಗಿದೆ ಎಂದರೆ, ನಮ್ಮ ದೇಶದಲ್ಲಿ ಪರಿಸರ ಸಂರಕ್ಷಣೆಗೆ ತೋರುತ್ತಿರುವ ಕಾಳಜಿ ಎಷ್ಟೆಂಬುದನ್ನು ಬೇರೆ ದೃಷ್ಟಿಕೋನದಿಂದ ಅಳೆಯುವ ಅಗತ್ಯವೇ ಇಲ್ಲ.

ಹೀಗೆ ಪ್ರಥಮಾದ್ಯತೆಗೆ ಮಾನ್ಯವಾಗಬೇಕಾಗಿದ್ದ ಪರಿಸರ, ವನ್ಯಜೀವಿ, ಜೀವಿವೈವಿಧ್ಯ ರಕ್ಷಣೆ ವಿಷಯವೂ ಕನಿಷ್ಠ ಮಟ್ಟದ ಆದ್ಯತೆಯನ್ನು ಈ ಬಜೆಟ್ಟಿನಲ್ಲಿ ಗಳಿಸಲಿಲ್ಲ ಹಾಗೂ ಈ ವಿಷಯವು ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಅತ್ಯಂತ ಅಪಾಯಕಾರಿ. ಜಾಗತಿಕ ಮಟ್ಟದಲ್ಲಿ ಅತ್ಯಂತ ಪ್ರಮುಖವಾಗಿ ಗಮನ ಸೆಳೆಯಬೇಕಾದ ಮಹತ್ತರ ಜವಾಬ್ದಾರಿ ಮತ್ತು ಉತ್ತರದಾಯಿತ್ವ ಹೊಂದಿದ ಭಾರತದಂತಹ ದೇಶದ ಪರಿಸರ ವಿರೋಧಿ ಧೋರಣೆಯನ್ನು ಯಾರೂ ಸ್ವಾಗತಿಸಲಾರರು.



ಚುರುಮುರಿ



ಟ್ವೀಟ್ ಸಿಕ್ತಾ?

• ಸುಧೀಂದ್ರ

ವಾಕಿಂಗ್ ಮುಗಿಸಿ ಹೊರಡುವಾಗ ಪ್ರಸಾದ್ 'ಟ್ವೀಟ್ ಕಳ್ಸಿದ್ದೆ, ಬಂತಾ?' ಅಂದ.

ಅವಸರದಲ್ಲಿದ್ದ ನಾನು 'ನೋಡ್ಲಿಲ್ಲ, ಮನೆಯವರಿಗೆ ಥ್ಯಾಂಕ್ಸ್ ಹೇಳು' ಎಂದೆ.

ಅಮೆರಿಕದಿಂದ ಮಗಳು- ಅಳಿಯ ಬರ್ತಾರೆ ಅಂದಿದ್ದ. ಅವ್ರಿಗೋಸ್ಕರ ಪ್ರಸಾದ್ ಹೆಂಡ್ತಿ ಸ್ವೀಟ್ ಮಾಡಿ ಮನೆಗೆ ಕಳಿಸಿರಬಹುದು. ಆದರೆ ಈ ವಿಷ್ಯ ನನ್ನ ಹೆಂಡ್ತಿ ಯಾಕೆ ಹೇಳ್ಲೇ ಇಲ್ಲ ಅಂದ್ಕೊಂಡು ಮನೆಯತ್ತ ಹೊರಟೆ.

ಒಳಗೆ ಬಂದವನೇ 'ಎಲ್ಲಿ ಸ್ವೀಟು?' ಎಂದೆ. 'ಸಾಕು ರೊಮಾನ್ಸು. ವಾಕಿಂಗ್ ಮಾಡಿದ್ರೋ ಅಥ್ವಾ ವಾಕಿಂಗ್ ಮಾಡೋರನ್ನು ನೋಡ್ತಾ ನಿಂತ್ಕೊಂಡಿದ್ರೋ' ಅಂತ ಹೆಂಡ್ತಿ ಕಾಫಿ ಕಪ್ ಕೈಗೆ ಕೊಟ್ಲು. 'ಯಾವಾಗ ನೋಡಿದ್ರೂ ಸ್ವೀಟು, ಸ್ವೀಟು ಅಂತೀರಲ್ಲ, ಅದಕ್ಕೇ ಕಾಫಿಗೆ ಎರಡು ಸ್ಪೂನ್ ಸಕ್ರೆ ಹೆಚ್ಚಿಗೆ ಹಾಕಿದೀನಿ. ನೀವು ಹೀಗೆ ಸ್ವೀಟ್ ತಿಂತಾಯಿದ್ರೆ, ತೂಕ ಕಮ್ಮಿ ಮಾಡ್ಕೊಂಡಂಗೆ' ಅಂತ ಒಳಗೆ ಹೋದ್ಲು.

ಉಪ್ಪಿಟ್ಟು ತಿನ್ನೋವಾಗ ಮೆಣಸಿನಕಾಯಿ ಬಾಯಿಗೇ ಸಿಕ್ತು. 'ಖಾರಾ, ಒಂಚೂರು ಸ್ವೀಟಾದರೂ ಕೊಡೆ' ಎಂದೆ. 'ತಿನ್ಬೇಕಾದ್ರೆ ತಟ್ಟೆ ಮೇಲೆ ಗ್ನಾನ ಇರಬೇಕು' ಅನ್ನೋ ಹಿತವಚನ ಕಿವಿಗೆ ಬಿತ್ತು.

ಲಂಚ್ ಅವರ್‌ನಲ್ಲಿ ಸಹೋದ್ಯೋಗಿ ನಟರಾಜ್, 'ಪ್ರಸಾದ್ ಕಳ್ಸಿದ ಟ್ವೀಟು ಸಿಕ್ತಾ?' ಅಂತ ಕೇಳಿದಾಗ ಕೆಫೆಟೇರಿಯಾದಲ್ಲಿ ವಿಪರೀತ ಗದ್ದಲವಿತ್ತು. ನನ್ನ ಕಾಲೇಜ್ ಕ್ಲಾಸ್ಮೇಟ್ ಪ್ರಸಾದ್ ಇವರಿಗೆ ಹೇಗೆ ಗೊತ್ತು, ನಮ್ಮನೇಗೆ ಅವ್ರು ಸ್ವೀಟು ಕಳ್ಸಿದ್ದು ಇವರಿಗ್ಯಾರು ಹೇಳಿದ್ರು ಅಂದ್ಕೊಂಡು 'ಯಾವ ಸ್ವೀಟು?' ಎಂದೆ.

'ಸ್ವೀಟಲ್ರಿ, ಸೆಂಟ್ರಲ್ ಐ.ಟಿ. ಮಿನಿಸ್ಟ್ರು ಕಳ್ಸಿರೋ ಟ್ವೀಟು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದಿದೆ, ಟ್ವೀಟ್ ಕಳ್ಸೋದು ದೇಶದ್ರೋಹ ಅಲ್ಲ ಅಂತ ಇದುವರೆಗೂ ಕುಣಿದಾಡ್ತಿದ್ರಲ್ಲ. ಈಗ ನೋಡಿ ಸೋಶಿಯಲ್ ಮೀಡಿಯಾದಲ್ಲಿ ಯದ್ವಾತದ್ವಾ ಬರೆಯೋರ ಮೇಲೆ ಇನ್ಮುಂದೆ ಹದ್ದಿನ ಕಣ್ಣಿಡ್ತಾರಂತೆ' ಅಂದ್ರು. ಇದು ಯಾರ ಬಾಯಿಗೆ ಬಿದ್ದ ಸ್ವೀಟು ಅಂತ ಗೊತ್ತಾಗಲಿಲ್ಲ.

ಸಂಗತ

ಇಳಿಸಂಜೆಗೆ ಸುಭದ್ರ ಹೂಡಿಕೆ

ಅತಿ ಹೆಚ್ಚು ವರಮಾನ ಪಡೆಯುವ ಕೆಲವರಿಂದ ಈ ಸೌಲಭ್ಯ ದುರ್ಬಳಕೆ ತಡೆಯುವ ಭರದಲ್ಲಿ ಉಳಿದವರ ಹಿತಾಸಕ್ತಿಗೆ ಭಂಗ ಬಾರದಿರಲಿ

• ಯು.ಪಿ.ಪುರಾಣಿಕ್

ಜೀವನದ ಸಂಜೆಯಲ್ಲಿ ಹಂಗಿಲ್ಲದ ಬದುಕು ಸಾಗಿಸಲು ಪ್ರತೀ ನೌಕರನೂ ಆರಂಭದಿಂದಲೇ ಆರ್ಥಿಕ ಯೋಜನೆ ಹಾಕಿಕೊಳ್ಳಬೇಕು. ಇದಕ್ಕಾಗಿ ಒಳ್ಳೆಯ ಪ್ರತಿಫಲ ತಂದುಕೊಡುವ, ಅತ್ಯಂತ ಸುಭದ್ರವಾದ ಹೂಡಿಕೆ ಭವಿಷ್ಯ ನಿಧಿ (ಎಂಪ್ಲಾಯೀಸ್ ಪ್ರಾವಿಡೆಂಟ್ ಫಂಡ್). ಇದು ಕ್ರಮಬದ್ಧವಾದ, ಉತ್ತಮ ವರಮಾನ ತರುವ ಹಾಗೂ ಬಡ್ಡಿ ವರಮಾನಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿಯುಳ್ಳ ಯೋಜನೆ.

ಪಿ.ಎಫ್. ಖಾತೆಗೆ ಐಚ್ಛಿಕವಾಗಿ ಹಣ ಜಮಾ ಮಾಡಲು ಮಿತಿ ಇಲ್ಲದ ಕಾರಣ ಹಾಗೂ ದೊಡ್ಡ ಮೊತ್ತ ಹೂಡಿ ಬಡ್ಡಿ ವರಮಾನದಲ್ಲಿ ಸಂಪೂರ್ಣ ತೆರಿಗೆ ವಿನಾಯಿತಿ ಪಡೆಯುವ ಸವಲತ್ತು ಇರುವುದರಿಂದ ಬಹುರಾಷ್ಟ್ರೀಯ ಕಂಪನಿಗಳಲ್ಲಿ, ದೊಡ್ಡ ಖಾಸಗಿ ಕಂಪನಿಗಳಲ್ಲಿ ಹಾಗೂ ಸರ್ಕಾರಿ ವಲಯದಲ್ಲಿ ಅತಿಹೆಚ್ಚು ಸಂಬಳ ಪಡೆಯುವ (ಹೈ ನೆಟ್‌ವರ್ಥ್ ಇಂಡಿವಿಷುಯಲ್ಸ್) ನೌಕರರು ಇದರಲ್ಲಿ ಕೋಟಿಗಟ್ಟಲೆ ಹಣ ಜಮಾ ಮಾಡಿ, ತೆರಿಗೆ ವಿನಾಯಿತಿ ಪಡೆಯುತ್ತಿರುವುದನ್ನು ಸರ್ಕಾರ ಗಮನಿಸಿದೆ. ಭಾರತದಲ್ಲಿ ಅತಿಹೆಚ್ಚು ಸಂಬಳ ಪಡೆಯುವ ಬರೀ 20 ಜನ ಈ ನಿಧಿಯಲ್ಲಿ ಒಟ್ಟು ₹ 825 ಕೋಟಿ ಜಮಾ ಇರಿಸಿದ್ದಾರೆ ಎಂದರೆ ಯಾರಿಗೆ ತಾನೇ ಅಚ್ಚರಿ ಎನಿಸದು?

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ನೌಕರರ ಭವಿಷ್ಯನಿಧಿ ಹೂಡಿಕೆಯ ಮಿತಿ ವಿಚಾರದಲ್ಲಿ ತೋರಿರುವ ಧೋರಣೆಯು ಕೆಲವು ನೌಕರರಲ್ಲಿ ಗೊಂದಲ ಉಂಟುಮಾಡಿರುವ ಸಾಧ್ಯತೆ ಇದೆ. ಬಜೆಟ್‌ನಲ್ಲಿ ಮಾಡಿರುವ ಪ್ರಸ್ತಾವದ ಪ್ರಕಾರ, ಒಬ್ಬ ನೌಕರ ವಾರ್ಷಿಕವಾಗಿ ಗರಿಷ್ಠ ಎರಡೂವರೆ ಲಕ್ಷ ರೂಪಾಯಿ ವರ್ಗಾಯಿಸಿ, ಬಡ್ಡಿ ವರಮಾನದಲ್ಲಿ ತೆರಿಗೆ ವಿನಾಯಿತಿ ಪಡೆಯಬಹುದಾಗಿದೆ. ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಆತ ಪಿ.ಎಫ್.ಗೆ ಜಮಾ ಮಾಡಿದ್ದರೆ, ಅದಕ್ಕೆ ಬರುವ ಬಡ್ಡಿಯು ತೆರಿಗೆ ವಿನಾಯಿತಿಯಿಂದ ಹೊರತಾಗಿರಲಿದೆ.

ಈ ಹಿಂದೆ ಸೆಕ್ಷನ್ 10 (34) ಆಧಾರದ ಮೇಲೆ ಕಂಪನಿ ಷೇರುಗಳ ಮೇಲೆ ಪಡೆಯುವ ಡಿವಿಡೆಂಡ್ ಆದಾಯವು ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಹೊಂದಿತ್ತು. ಅತಿ ಶ್ರೀಮಂತರಾದ ಕೆಲವು ಷೇರುದಾರರು ಪ್ರತಿವರ್ಷ ಕೋಟಿಗಟ್ಟಲೆ ಡಿವಿಡೆಂಡ್ ಹಣವನ್ನು ತೆರಿಗೆರಹಿತವಾಗಿ ಪಡೆಯುತ್ತಿದ್ದರು. ಇದನ್ನು ಮನಗಂಡ ಸರ್ಕಾರವು ಕಳೆದ ವರ್ಷದ ಬಜೆಟ್‌ನಲ್ಲಿ ಡಿವಿಡೆಂಡ್ ಆದಾಯದ ತೆರಿಗೆ ವಿನಾಯಿತಿ ಮಿತಿಯನ್ನು ₹ 10 ಲಕ್ಷಕ್ಕೆ ಸೀಮಿತಗೊಳಿಸಿತ್ತು.

ಇಂದಿನ ಹಣದುಬ್ಬರದ ಪರಿಸ್ಥಿತಿಯಲ್ಲಿ ಪಿ.ಎಫ್.ನಲ್ಲಿ ವಾರ್ಷಿಕ ಹೂಡಿಕೆ ಮಾಡಲು ಬಜೆಟ್‌ನಲ್ಲಿ ನಿಗದಿಗೊಳಿಸಿದ ಎರಡೂವರೆ ಲಕ್ಷ ರೂಪಾಯಿ ಮೊತ್ತವು ಅತಿ ಕಡಿಮೆ. ಹಣದುಬ್ಬರ ಪ್ರಮಾಣವು ಕಳೆದ ವರ್ಷ ಶೇ 7ರ ಗಡಿಯನ್ನೂ ದಾಟಿತ್ತು. ತೈಲ ಬೆಲೆಯ ಏರಿಕೆಯನ್ನು ಗಮನಿಸಿದರೆ, ಮುಂದಿನ ದಿನಗಳಲ್ಲಿ ಹಣದುಬ್ಬರ ಮತ್ತೆ ಹೆಚ್ಚಾಗುವ ಸಾಧ್ಯತೆ ದಟ್ಟವಾಗಿದೆ. ಹಣದುಬ್ಬರ ಹೆಚ್ಚಿನ ಪ್ರಮಾಣದಲ್ಲಿಯೇ ಇರುವಾಗ, ಪಿ.ಎಫ್. ಬಡ್ಡಿಗೆ ತೆರಿಗೆ ವಿಧಿಸಲೇಬೇಕು ಎಂದು ಸರ್ಕಾರಕ್ಕೆ ಅನ್ನಿಸಿದರೆ, ತುಸು ಹೆಚ್ಚಿನ ಮೊತ್ತಕ್ಕೆ ವಿನಾಯಿತಿ ನೀಡುವ ಬಗ್ಗೆ ಆಲೋಚಿಸಬೇಕು. ತಿಂಗಳಿಗೆ ₹ 21 ಸಾವಿರದವರೆಗೆ ಪಿ.ಎಫ್.ನಲ್ಲಿ ಉಳಿತಾಯ ಮಾಡುವುದು ಹಣದುಬ್ಬರ ಹೆಚ್ಚಿರುವ ಇಂದಿನ ದಿನಗಳಲ್ಲಿ ವಿಶೇಷವೇನೂ ಅಲ್ಲ. ಅಷ್ಟು ಉಳಿತಾಯವನ್ನು ಮಾಡಿದರೆ ಮಾತ್ರವೇ ವೃದ್ಧಾಪ್ಯದಲ್ಲಿ ಒಳ್ಳೆಯ ಗುಣಮಟ್ಟದ ಬದುಕು ಸಾಗಿಸಲು ಹಣ ಸಿಗುತ್ತದೆ. ಪಿ.ಎಫ್.ನಲ್ಲಿ ಮಾಡಿದ ಹೂಡಿಕೆಗಳು ಸಾರ್ವಜನಿಕ ಆಸ್ತಿ ಸೃಷ್ಟಿಗೆ ಕೂಡ ಲಭಿಸುತ್ತವೆಯಾದ ಕಾರಣ, ಅಲ್ಲಿ ನೌಕರರು ಇನ್ನಷ್ಟು ಉಳಿತಾಯ ಮಾಡುವುದನ್ನು ಸರ್ಕಾರ ಪ್ರೋತ್ಸಾಹಿಸಬಹುದು. ಹೀಗೆ ಮಾಡುವುದರಿಂದ ವಿವಿಧ ಯೋಜನೆಗಳಿಗೆ ಪಿ.ಎಫ್. ಸಂಸ್ಥೆಯ ಮೂಲಕ ಬಂಡವಾಳ ಹೂಡಿಕೆಯೂ ಆಗುತ್ತದೆ, ನೌಕರರ ಭವಿಷ್ಯ ಹೆಚ್ಚು ಭದ್ರ ಕೂಡ ಆಗುತ್ತದೆ.



ಭಾರತದಲ್ಲಿ ಸರ್ಕಾರಿ ಸ್ವಾಮ್ಯದ ಉದ್ದಿಮೆ, ಸರ್ಕಾರಿ ಬ್ಯಾಂಕ್ ಹಾಗೂ ಸರ್ಕಾರದ ಇನ್ನಿತರ ನೌಕರ ವಲಯಗಳಲ್ಲಿ ಮಾತ್ರ ಉದ್ಯೋಗ ಭದ್ರತೆ ಇದೆ. ಖಾಸಗಿ ಕಂಪನಿಗಳ ನೌಕರರು ಪಿ.ಎಫ್.ನಲ್ಲಿ ತುಸು ಹೆಚ್ಚು ಹಣ ತೊಡಗಿಸುವ ಅನಿವಾರ್ಯ ಇದೆ. ಪಿಂಚಣಿ ಎನ್ನುವ ಸಾಂಪ್ರದಾಯಿಕ ಪರಿಕಲ್ಪನೆ ಇಂದು ಮಾಯವಾಗಿದೆ. ಸಾಕ್ಷರತೆ, ಜೀವರಕ್ಷಕ ಔಷಧಗಳು, ಆರೋಗ್ಯ ಪ್ರಜ್ಞೆ ಇವೇ ಮೊದಲಾದವುಗಳಿಂದ ಮನುಷ್ಯನ ಸರಾಸರಿ ಆಯುಷ್ಯದ ಪ್ರಮಾಣ 70 ವರ್ಷಗಳಿಗೆ ಏರಿದೆ. ಜೀವನದ ಸಂಜೆಯಲ್ಲಿ ನೆಮ್ಮದಿಯಾಗಿ ಬಾಳಲು ಪಿ.ಎಫ್ ಹೂಡಿಕೆ ಅನಿವಾರ್ಯ.

ದೇಶದ 130 ಕೋಟಿಗೂ ಹೆಚ್ಚಿನ ಜನರಿಗೆ ಸರ್ಕಾರದಿಂದ ಸಾಮಾಜಿಕ ಭದ್ರತೆ ಒದಗಿಸುವುದು ಸುಲಭದ ಕೆಲಸವಲ್ಲ. ಇಂದು ಮಕ್ಕಳ ಮೇಲೆ ಅವಲಂಬನೆ, ಅವಿಭಕ್ತ ಕುಟುಂಬ, ನಿವೃತ್ತಿಯಲ್ಲಿ ಪಿಂಚಣಿ ಇವೆಲ್ಲ ಬರೀ ಪರಿಕಲ್ಪನೆಯಾಗಿ ಉಳಿದಿವೆ. ಠೇವಣಿ ಮೇಲಿನ ಬಡ್ಡಿ ಕೂಡ ಬಹಳ ಕಡಿಮೆಯಾಗಿದೆ. ಹೆಚ್ಚಿನ ಖರ್ಚು ಬರುವುದೇ ಇಳಿವಯಸ್ಸಿನಲ್ಲಿ. ಆದ್ದರಿಂದ ದುಡಿಯುವ ವಯಸ್ಸಿನಲ್ಲಿ ಸ್ವಲ್ಪಮಟ್ಟಿಗೆ ತ್ಯಾಗ ಮಾಡಿಯಾದರೂ ಎಷ್ಟಾದರಷ್ಟು ಉಳಿಸುವುದು ಅನಿವಾರ್ಯ. ಸರ್ಕಾರ ಇವನ್ನೆಲ್ಲ ಗಮನದಲ್ಲಿ ಇಟ್ಟುಕೊಂಡು, ನೌಕರ ವರ್ಗವು ಇನ್ನಷ್ಟು ಉಳಿತಾಯ ಮಾಡಲು ಪ್ರೋತ್ಸಾಹ ನೀಡುವುದು ಸೂಕ್ತ ಕ್ರಮವಾದೀತು.

ವಾಚಕರ ವಾಣಿ

ಇಂತಹವರ ಸಂತತಿ ಸಹಸ್ರವಾಗಲಿ

ಧಾರವಾಡದ ಮುರುಘಾಮಠದ ಸಂಸ್ಥಾಪಕ ಗುರುಗಳಾದ ಮೃತ್ಯುಂಜಯ ಸ್ವಾಮೀಜಿ ತಾವು ನಡೆಸುತ್ತಿದ್ದ ಉಚಿತ ಪ್ರಸಾದ ನಿಲಯಕ್ಕೆ ಸರ್ಕಾರ ಧನಸಹಾಯ ನೀಡಲು ಮುಂದೆ ಬಂದರೂ ಅದನ್ನು ಪಡೆಯದಿದ್ದುದು ಮತ್ತು ಇತ್ತೀಚೆಗೆ ವಿಜಯಪುರದ ಸಿದ್ಧೇಶ್ವರ ಸ್ವಾಮೀಜಿ ತಮ್ಮ ಆಶ್ರಮಕ್ಕೆ ಸರ್ಕಾರ ನೀಡಲು ಬಂದ ಅನುದಾನವನ್ನು ನಿರಾಕರಿಸಿರುವುದು ಶ್ಲಾಘನೀಯ. ಆದರೆ ರಾಜ್ಯದ ಜಾತಿವಾರು ಮಠಗಳು ಸ್ಪರ್ಧಾತ್ಮಕವಾಗಿ ತಮ್ಮ ಜಾತ್ರೆಗೆ ಮುಖ್ಯಮಂತ್ರಿಯನ್ನು ಕರೆಸುವುದು, ತಮ್ಮ ಜಾತಿಯ ಇಷ್ಟು ಮಠಗಳಿವೆ, ಇಷ್ಟು ಮಂದಿ ಶಾಸಕರಿದ್ದಾರೆ, ಹೀಗಾಗಿ ಮಂತ್ರಿಗಿರಿ, ಇಷ್ಟು ಕೋಟಿ ಅನುದಾನ ಕೊಡದಿದ್ದರೆ ನಿಮ್ಮ ಸರ್ಕಾರ ಉರುಳಿಸುತ್ತೇವೆ ಎಂದೆಲ್ಲ ಬ್ಲ್ಯಾಕ್‌ಮೇಲ್ ಮಾಡುವುದು ವಚನಗಳ ಆಶಯ ಹಾಗೂ ಬಸವಣ್ಣನ ತತ್ವ, ಸಿದ್ಧಾಂತಗಳಿಗೆ ಕಿಂಚಿತ್ತಾದರೂ ಹೊಂದುತ್ತದೆಯೇ ಎಂದು ಯೋಚಿಸಲಿ.

ಜಾತಿ ಹಿಡಿದು ಮೀಸಲಾತಿ ಕೇಳುತ್ತಾ ಹೊರಟಿರುವವರ ಅಬ್ಬರಕ್ಕೆ ಏನೆನ್ನುವುದು? ಬಾಯಲ್ಲಿ ಬಸವಣ್ಣನ ನುಡಿಮುತ್ತುಗಳನ್ನು ಉದುರಿಸುತ್ತಾ ಅಂತರಂಗದಲ್ಲಿ ಬರೀ ಕುಟಿಲ, ಸ್ವಾರ್ಥ, ಪ್ರತಿಷ್ಠೆ, ಜಾತೀಯತೆ ಇಟ್ಟುಕೊಂಡು ಕಟ್ಟಕಡೆಯ ಜಾತಿಗಳ ಮನುಷ್ಯರಿಗೆ ದೊರೆಯಬೇಕಾದ ಮೀಸಲಾತಿಯು ಬಹುಸಂಖ್ಯೆಯ ಬಲಾಢ್ಯರಾದ ತಮಗೇ ದೊರೆಯಬೇಕೆಂದು ಒತ್ತಡ ಹೇರುವುದು ಸರಿಯೇ? ಇಂತಹ ನಡೆಯು ಸಂವಿಧಾನದ ತತ್ವಗಳಾದ ಸಾಮಾಜಿಕ ನ್ಯಾಯ, ಸಹೋದರತೆ, ಸಮಾನತೆ, ಸ್ವಾತಂತ್ರ್ಯಕ್ಕೆ ತದ್ವಿರುದ್ಧ. ಇನ್ನಾದರೂ ಈ ಸ್ವಾಮಿಗಳು 'ಇವ ನಮ್ಮವ, ಇವ ನಮ್ಮವ' ಎಂಬ ವಿಶಾಲ ತತ್ವದಡಿ ಆತ್ಮಾವಲೋಕನ ಮಾಡಿಕೊಂಡು ಬಸವಣ್ಣನ ನಿಜ ತತ್ವ ಆಚರಿಸಲು ಮುಂದಾಗಲಿ. ಬೇಡುವವರಾಗದೆ ನೀಡುವವರಾಗಲಿ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ವೀರಪುತ್ರನ ಶ್ಲಾಘನೀಯ ನಡೆ

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಬೈರಗೊಂಡನಹಳ್ಳಿಯಲ್ಲಿ ತಾಯಿ– ಮಗ ಹೊಲದಿಂದ ಮನೆಗೆ ತೆರಳುವಾಗ, ದಿಢೀರನೆ ತಾಯಿಯ ಮೇಲೆರಗಿದ ನರಭಕ್ಷಕ ಚಿರತೆಯೊಂದಿಗೆ ಮಗ ಹೋರಾಡಿ ತಮ್ಮಿಬ್ಬರ ಪ್ರಾಣವನ್ನೂ ರಕ್ಷಿಸಿರುವುದು ನಾಡಿನ ಜನ ಹೆಮ್ಮೆ ಪಡುವಂತಹ ವಿಷಯ. ಈಗಿನ ಕಾಲದಲ್ಲಿ ಎಷ್ಟೋ ಮಕ್ಕಳು ಹೆತ್ತವರನ್ನು ವೃದ್ಧರಾದಾಗ ಸರಿಯಾಗಿ ನೋಡಿಕೊಳ್ಳದೆ ಅನಾಥಾಶ್ರಮಕ್ಕೆ ಸೇರಿಸುವ ನಿದರ್ಶನಗಳಿವೆ. ಇಂತಹ ಸ್ಥಿತಿಯ ನಡುವೆ ತಾಯಿಯ ಮೇಲಿನ ಈ ಬಗೆಯ ಉತ್ಕಟ ಪ್ರೀತಿ ಎಲ್ಲ ಮಕ್ಕಳಲ್ಲೂ ಮೂಡುವಂತಾಗಲಿ. ಸರ್ಕಾರ ಈ ವೀರ ಮಗ ಮತ್ತು ತಾಯಿಯ ಚಿಕಿತ್ಸಾ ವೆಚ್ಚ ಭರಿಸಿ ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡಲಿ.

ಇರ್ಫಾನ್, ರೋಣ

ಇವರೆಲ್ಲ ಬರಹಗಾರರಲ್ಲವೇ?

ರೈತ ಚಳವಳಿ ಕುರಿತು ಬರಹಗಾರರು ಮೌನ ವಹಿಸಿರುವುದೇಕೆ ಎಂದು ಪುರುಷೋತ್ತಮ ಬಿಳಿಮಲೆ ಅವರು ಪ್ರಶ್ನಿಸಿದ್ದಕ್ಕೆ ಆರ್.ಲಕ್ಷ್ಮಿನಾರಾಯಣ ಅವರ ಒಂದು ದೃಷ್ಟಿಕೋನದ ಪ್ರತಿಕ್ರಿಯೆ ಪ್ರಕಟವಾಗಿದೆ. ಬಿಳಿಮಲೆ ಅವರ ಪ್ರಶ್ನೆಗೆ ಇನ್ನೊಂದು ದೃಷ್ಟಿಕೋನದಿಂದಲೂ ಪ್ರತಿಕ್ರಿಯಿಸಬಹುದಾಗಿದೆ. ರೈತ ಚಳವಳಿ ಕುರಿತು ಬರಹಗಾರರು ಮೌನ ವಹಿಸಿದ್ದಾರೆ ಎಂಬುದೇ ತಪ್ಪು ತಿಳಿವಳಿಕೆ. ರೈತ ಚಳವಳಿಯಷ್ಟೇ ಅಲ್ಲ, ಎಲ್ಲ ಜನವಿರೋಧಿ ಕ್ರಮಗಳ ಕುರಿತು ಬರಹಗಾರರಾದ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಜಿ.ರಾಮಕೃಷ್ಣ, ಕುಂ.ವೀರಭದ್ರಪ್ಪ, ಕೆ.ಮರುಳಸಿದ್ಧಪ್ಪ, ಜಿ.ಕೆ.ಗೋವಿಂದರಾವ್, ಕೆ.ಶರೀಫಾ, ಸುಕನ್ಯಾ, ಸಿದ್ಧನಗೌಡ ಪಾಟೀಲ್, ಬಸವರಾಜ ಸಬರದ, ಬಂಜಗೆರೆ ಜಯಪ್ರಕಾಶ್ ಮುಂತಾದ ಹಿರಿಯರಲ್ಲದೆ ಅನೇಕ ಯುವ ಬರಹಗಾರರು ಪ್ರತಿಕ್ರಿಯಿಸುತ್ತಲೇ ಇದ್ದಾರೆ. ಕೆಲವರು ನೇರವಾಗಿ ಚಳವಳಿಯಲ್ಲೂ ಭಾಗವಹಿಸಿದ್ದಾರೆ. ಎಲ್ಲ ಬರಹಗಾರರನ್ನೂ ಸಾಮಾನ್ಯೀಕರಿಸಿ ಮೌನ ವಹಿಸಿದ್ದಾರೆಂದು ಟೀಕಿಸುವುದರಿಂದ ಕ್ರಿಯಾಶೀಲ ಬರಹಗಾರರಿಗೆ ಅವಮಾನ ಮಾಡಿದಂತಾಗುತ್ತದೆ.

ಬಿ.ರಾಜಶೇಖರಮೂರ್ತಿ, ಬೆಂಗಳೂರು

ತಿಳಿಯಾದ ವಾತಾವರಣದಲ್ಲಿ ಇತ್ಯರ್ಥಗೊಳ್ಳಲಿ

'ರೈತ ಚಳವಳಿ ಮತ್ತು ಬರಹಗಾರರ ವಿರೋಧ' ಎಂಬ ಪತ್ರದಲ್ಲಿ (ವಾ.ವಾ., ಫೆ. 25) ಹೇಳಿರುವಂತೆ, ಬರಹಗಾರರು ಬರಹಗಾರರಾಗಿ ಉಳಿಯದೆ ವಿಭಕ್ತಗೊಂಡು ಒಂದಲ್ಲ ಒಂದು ರಾಜಕೀಯ ಪಕ್ಷದವರಾಗಿರುವ ವಿದ್ಯಮಾನ ನಿರ್ಮಾಣವಾಗಿದೆ ಎನ್ನುವುದು ನಿಜವೆನಿಸುತ್ತದೆ. ಅಂದರೆ, ನಮ್ಮ ರಾಜಕೀಯದ ಬಕಾಸುರ ಪ್ರವೃತ್ತಿಯ ವ್ಯಾಪ್ತಿ ಇಂಥದ್ದು! ಈಗ ದೆಹಲಿಯಲ್ಲಿನ ರೈತ ಚಳವಳಿಗೆ ಕಾರಣವಾಗಿರುವುದು ಕೇಂದ್ರ ಸರ್ಕಾರ ಜಾರಿಗೊಳಿಸಲು ಮುಂದಾಗಿರುವ ಮೂರು ಕೃಷಿ ಕಾಯ್ದೆಗಳು. ಇವು ಕೃಷಿ ಕ್ಷೇತ್ರಕ್ಕೆ ಹಾಗೂ ಕೃಷಿಕರಿಗೆ ಮಾರಕ ಎಂದು ಸಾಧಿಸಿ ತೋರಿಸಲು ಬರಹಗಾರರಾಗಿರುತ್ತಲೇ ಕಾನೂನು ಪಂಡಿತರೂ ಆಗಿರುವವರೆಷ್ಟು ಮಂದಿ? ಕೃಷಿ ಪ್ರಪಂಚದಲ್ಲಿ ಈಗ ಇರುವ ವಿಸಂಗತಿಗಳು ಯಾವುವು, ಈ ಕಾಯ್ದೆಗಳು ಅವುಗಳನ್ನು ತೊಡೆದು ಹಾಕಿ ಕೃಷಿಕರ ಬದುಕು ಹಸನು ಮಾಡುವುವೇ ಅಥವಾ ಅವರನ್ನು ಇನ್ನಷ್ಟು ಶೋಷಣೆಗೆ ನೂಕುವ ಗುರಿಯುಳ್ಳವೇ ಎನ್ನುವುದನ್ನು ಎಷ್ಟು ಬರಹಗಾರರು ವಿಶ್ಲೇಷಿಸಲು ಸಮರ್ಥರಾಗಿದ್ದಾರೆ?

ಯಾರೂ ಸರ್ವಜ್ಞರಲ್ಲ. ಬರಹಗಾರ ತನ್ನ ಸುತ್ತಮುತ್ತಲಿನ ವಿದ್ಯಮಾನಗಳಿಗೆ ವಿಮುಖನಾಗಿರಲು ಸಾಧ್ಯವಿಲ್ಲ; ಅದು ಸಾಧುವೂ ಅಲ್ಲ. ಹಾಗಂತ ಎಲ್ಲೆಲ್ಲೂ ಅವನು ಕಾಣಿಸಿಕೊಳ್ಳಬೇಕೆಂದೇನೂ ಇಲ್ಲ. ಪ್ರಸ್ತುತ ರೈತ ಚಳವಳಿ ಬಗ್ಗೆ ಹೇಳುವುದಾದರೆ, ಎರಡು ಪಕ್ಷಗಳಿಂದಲೂ ದೂರ ನಿಂತು ಸಮಚಿತ್ತದಿಂದ ಎರಡು ಕಡೆಯ ನಿಲುವುಗಳನ್ನೂ ಪರಾಮರ್ಶಿಸುವವರು ಎಲ್ಲಿದ್ದಾರೆ ಎನ್ನುವುದೇ ತಿಳಿಯದು. ಆದಾಗ್ಯೂ ಇರುವ ಎರಡು ಸಾಧ್ಯತೆಗಳಲ್ಲಿ ಒಂದಾದರೂ ಆದರೆ ಆದೀತು. ಮೊದಲನೆಯದು: ಸರ್ಕಾರ ಕೆಲ ಕಾಲ ಕಾಯ್ದೆಗಳನ್ನು ತಡೆಹಿಡಿಯಲು ಸಿದ್ಧವಿರುವುದರಿಂದ ರೈತರು ಚಳವಳಿಯನ್ನು ನಿಲ್ಲಿಸುವುದು. ತಿಳಿಯಾದ ವಾತಾವರಣದಲ್ಲಿ ಈ ಕಾಯ್ದೆಗಳಲ್ಲಿನ ಉತ್ತಮ ಅಂಶಗಳನ್ನು ತಜ್ಞರು ಪರಿಶೀಲಿಸಿ ನೀಡುವ ಅಭಿಪ್ರಾಯವನ್ನು ರೈತರು ಮತ್ತು ಸರ್ಕಾರ ಅಂಗೀಕರಿಸಬೇಕು. ಆದರೆ, ರೈತ ನಾಯಕರು ಇದಕ್ಕೆ ಒಪ್ಪಿದರೆ ಅದು ತಮ್ಮ ಸೋಲು ಎಂದು ಭಾವಿಸುವುದರಿಂದ, ಈಗಿನ ಜಟಿಲಾವಸ್ಥೆಯನ್ನು ನೀಗಲು ಇರುವ ಎರಡನೇ ಸಾಧ್ಯತೆ ಎಂದರೆ, ಕಾಯ್ದೆಗಳ ಸಿಂಧುತ್ವದ ಬಗ್ಗೆ ದಾಖಲಾಗಿರುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ತಕ್ಷಣ ವಿಚಾರಣೆಗೆ ಕೈಗೆತ್ತಿಕೊಂಡು ಇತ್ಯರ್ಥಗೊಳಿಸುವುದೇ ಸರಿಯಾದ ಮಾರ್ಗ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕುರುಬ ಸಮುದಾಯವೂ ಸೇರಿದಂತೆ ರಾಜ್ಯದ ವಿವಿಧ ಸಮುದಾಯಗಳು ಮೀಸಲಾತಿಯಲ್ಲಿ ಬದಲಾವಣೆಗೆ ಒತ್ತಾಯಿಸಿ ಬೀದಿಗಿಳಿದಿವೆ. ಈ ಹೋರಾಟದ ಹಿಂದೆ ರಾಜಕೀಯ ಲೆಕ್ಕಾಚಾರ ಇದೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕುರುಬ ಸಮುದಾಯದಲ್ಲಿ ಹೊಂದಿರುವ ವರ್ಚಸ್ಸು ಕುಂದಿಸುವುದು ಕೂಡ ಹೋರಾಟದ ಹಿಂದಿನ ಉದ್ದೇಶ ಎನ್ನಲಾಗುತ್ತಿದೆ. ಆದರೆ, ಹೋರಾಟ ಯಾರ ವಿರುದ್ಧವೂ ಅಲ್ಲ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ. ಮೀಸಲಾತಿ ನೀಡಲು ಸಂವಿಧಾನ ಮಾನದಂಡವೇ ಹೊರತು ಬೀದಿ ಹೋರಾಟ ಅಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಇಬ್ಬರೂ ನಾಯಕರ ಸಂದರ್ಶನದ ಆಯ್ದ ಭಾಗ ಇಲ್ಲಿದೆ

ಪ್ರಜಾವಾಣಿ ಸಂದರ್ಶನ

ಸಿದ್ದರಾಮಯ್ಯ ದೃಢ ನುಡಿ

‘ಸಂವಿಧಾನವೇ ಮಾನದಂಡ, ಬೀದಿ ಹೋರಾಟವಲ್ಲ’

• ರಾಜೇಶ್ ರೈ ಚಟ್ಲ

• ಪರಿಶಿಷ್ಟ ಪಂಗಡ ಪಟ್ಟಿಗೆ ಕುರುಬರು, ಹಿಂದುಳಿದ ವರ್ಗಗಳ ‘ಪ್ರವರ್ಗ 2ಎ’ ಮೀಸಲಾತಿಗೆ ಪಂಚಮಸಾಲಿಗಳು, ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ವಾಲ್ಮೀಕಿಗಳು... ಹೀಗೆ ರಾಜ್ಯದಲ್ಲಿ ಮೀಸಲಾತಿಗಾಗಿ ನಡೆಯುತ್ತಿರುವ ಬೇಡಿಕೆಗಳ ಬಗ್ಗೆ ನಿಮ್ಮ ನಿಲುವೇನು?

ನನ್ನದು ಸಂವಿಧಾನದ ನಿಲುವು. ಸಂವಿಧಾನ ಏನು ಹೇಳುತ್ತದೆ ಅದೇ ನನ್ನ ನಿಲುವು (ಗಟ್ಟಿ ಧ್ವನಿಯಲ್ಲಿ). ಯಾರು ಮೀಸಲಾತಿಗೆ ಅರ್ಹರಿದ್ದಾರೆ ಅವರಿಗೆ ಮೀಸಲಾತಿ ಕೊಡಬೇಕು. ಸಂವಿಧಾನದ ವಿಧಿ 15, 16 ಏನು ಹೇಳುತ್ತದೆ ಅದರ ಪ್ರಕಾರ ಕೊಡಬೇಕು.

• ಈವರೆಗೆ ನೀಡಿದ ಜಾತಿ ಮೀಸಲಾತಿ ಸಮರ್ಪಕವಾಗಿ ತಲುಪಿದೆಯೇ?

ಇನ್ನೂ ಅನೇಕರಿಗೆ ಮೀಸಲಾತಿ ಸಿಕ್ಕಿಲ್ಲ. ಸುಪ್ರೀಂ ಕೋರ್ಟ್‌ನವರು ಶೇ 50ಕ್ಕಿಂತ ಜಾಸ್ತಿ ಇರಬಾರದು ಮೀಸಲಾತಿ ಎಂದು ಹೇಳಿಬಿಟ್ಟಿದ್ದಾರೆ. ಅದನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಒಪ್ಪಬೇಕು. ಸಂವಿಧಾನ ತಿದ್ದುಪಡಿ ಮಾಡಿ ಮೀಸಲಾತಿ ಕೊಡಬೇಕು.

• ಕೇಳಿದವರಿಗೆಲ್ಲ ಮೀಸಲಾತಿ ಕೊಡುತ್ತಾ ಹೋದರೆ ಸಾಮಾಜಿಕ ನ್ಯಾಯ ಹೇಗೆ ಸಾಧ್ಯ?

ಎಲ್ಲರಿಗೂ ಕೊಡಿ ಎಂದು ನಾನು ಹೇಳಿಲ್ಲ. ಸಂವಿಧಾನದ ಪ್ರಕಾರ ಯಾರು ಅರ್ಹರಿದ್ದಾರೆ ಅವರಿಗೆ ಕೊಡಬೇಕು.

• ಹಾಗಿದ್ದರೆ, ಯಾವುದು ಮಾನದಂಡ?

ಸಂವಿಧಾನದ ಷೆಡ್ಯೂಲ್ 15 ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕೊಡಬೇಕು ಎಂದು ಹೇಳಿದೆ. ಅದೇ ಮಾನದಂಡ. ಬೇರೆ ಇನ್ನೇನೂ ಇಲ್ಲ. ಜಾತಿ ಮಾನದಂಡ ಅಲ್ಲ. ದೊಡ್ಡದಾಗಿ ಪ್ರತಿಭಟನೆ ಮಾಡುವುದೂ ಮಾನದಂಡ ಅಲ್ಲ.

• ಸ್ವಾಮೀಜಿಗಳೇ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ?

ಯಾರಾದರೂ ಬೀದಿಗೆ ಇಳಿಯಲಿ. ಹೋರಾಟ ಮಾಡೋಕೆ, ಮೀಸಲಾತಿ ಕೇಳೋಕೆ ಎಲ್ಲರಿಗೂ ಹಕ್ಕಿದೆ. ಅಂತಿಮವಾಗಿ ಸರ್ಕಾರ ಸಂವಿಧಾನದ ಪ್ರಕಾರವೇ ಹೋಗಬೇಕು.

• ಬೆದರಿಕೆ ಒಡ್ಡುವುದು ಸರಿಯೇ?

ನಾನು ಸರಿ, ತಪ್ಪು ಎಂದು ಹೇಳೋಕೆ ಹೋಗಲ್ಲ. ಅವರು (ಸ್ವಾಮೀಜಿಗಳು) ಕೇಳುತ್ತಾ ಇದ್ದಾರೆ. ನೀವು (ಸರ್ಕಾರ), ಅವರು ಮೀಸಲಾತಿಗೆ ಅರ್ಹರೊ, ಅಲ್ಲವೊ ಎಂಬುವುದನ್ನು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ವರದಿ ತಂದು ನೋಡಬೇಕು.

• ಸಚಿವರುಗಳೇ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರಲ್ಲ?

ಅದು ಬಿಜೆಪಿಯವರು ತೀರ್ಮಾನ ಮಾಡಬೇಕು. ಅವರ ಸರ್ಕಾರದ ವಿರುದ್ಧ ಮಾಡುತ್ತಿದ್ದಾರೆ ಅಲ್ವಾ.. ಯಾರು ಮೀಸಲಾತಿ ಕೊಡಬೇಕು. ಯತ್ನಾಳ ಯಾವ ಪಕ್ಷದವನು? ಬಿಜೆಪಿಯವನು. ಈಶ್ವರಪ್ಪ ಯಾವ ಪಕ್ಷವನು? ಬಿಜೆಪಿಯವನು. ಅವರ ಸರ್ಕಾರದ ವಿರುದ್ಧ ಅವರೇ ಹೋರಾಟ ಮಾಡುತ್ತಿದ್ದಾರೆ.

• ನೀವು ರಾಜ್ಯದಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡಿಸಿದಿರಿ. ಆ ವರದಿಯನ್ನು ಸರ್ಕಾರ ಸ್ವೀಕರಿಸಿಲ್ಲ. ಸ್ವೀಕರಿಸಬೇಕೆಂದು ಆಗ್ರಹಿಸಿದ್ದೀರಿ. ಬಿಜೆಪಿಯವರು ನಿಮ್ಮ ಕಡೆ ಬೆರಳು ತೋರಿಸುತ್ತಿದ್ದಾರೆ?

ಕೂಡಲೇ ಸರ್ಕಾರ ವರದಿಯನ್ನು ಸ್ವೀಕರಿಸಬೇಕು. ನಾನು ಇದ್ದಾಗ (ಮುಖ್ಯಮಂತ್ರಿ ಆಗಿದ್ದಾಗ) ಅದು ಪೂರ್ಣ ಆಗಿರಲಿಲ್ಲ. ಈಗ ಪೂರ್ಣ ಆಗಿದೆ. ಈಗ ಅವರು (ಹಿಂದುಳಿದ ವರ್ಗಗಳ ಆಯೋಗ) ಸಲ್ಲಿಸಲು ತಯಾರಾಗಿದ್ದಾರೆ. ಅದನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ನ್ಯಾಯ ಕೊಡಲು, ಮೀಸಲಾತಿ ಕೊಡಲು ಅನುಕೂಲ ಆಗುತ್ತದೆ.

• ಕುರುಬ ಸಮುದಾಯದ ಎಸ್‌ಟಿ ಹೋರಾಟದ ಹಿಂದೆ ಆರೆಸ್ಸೆಸ್, ಬಿಜೆಪಿಯವರು ಇದ್ದಾರೆ ಎಂದು ನೀವು ಆರೋಪಿಸಿದ್ದಿರಿ?

ನೋಡಿ ನಾನು ಏನು ಹೇಳಿದೆ... ಹೋರಾಟದ ಅಗತ್ಯ ಇಲ್ಲ. ಇನ್ನೂ ಕುಲಶಾಸ್ತ್ರ ಅಧ್ಯಯನ ವರದಿಯೇ ಬಂದಿಲ್ಲ. ಅದು ಬರೋಕೆ ಮುಂಚಿತವಾಗಿ ಹೋರಾಟ ಏನು ಮಾಡುತ್ತೀರಿ. ಬೇಡ ಈಗ, ಅನಗತ್ಯ ಅಂತ ಹೇಳಿದೆ. ನಾನು ಎಸ್‌ಟಿ ಮೀಸಲಾತಿ ಬೇಡಿಕೆಯ ವಿರುದ್ಧ ಇಲ್ಲ. ಈಗ ಆತುರ ಅಗತ್ಯ ಇಲ್ಲ ಎಂದೆ. ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಸಂಬಂಧ ಕುಲಶಾಸ್ತ್ರ ಅಧ್ಯಯನ ಮಾಡುವಂತೆ ನಾನು ಮುಖ್ಯಮಂತ್ರಿಯಾಗಿದ್ದಾಗ ಆದೇಶಿಸಿದ್ದೆ. ಈಗಲೂ ಅಧ್ಯಯನ ನಡೆಯುತ್ತಿದೆ. ಅದು ಮುಗಿದು ವರದಿ ಬಂದ ನಂತರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಅನ್ನೋದು ನನ್ನ ಅನಿಸಿಕೆ.

• ಕುರುಬರ ಎಸ್‌ಟಿ ಹೋರಾಟದ ಮುಂಚೂಣಿಯಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ ಇದ್ದಾರೆಂಬ ಕಾರಣಕ್ಕೆ ನೀವು ಹಿಂದೆಸರಿದಿರಾ?

ಈಶ್ವರಪ್ಪನೇ ಮಂತ್ರಿ ಇದ್ದಾನೆ ಅಲ್ವಾರೀ. ಚಳವಳಿ ಏಕೆ ಬೇಕು? ಕ್ಯಾಬಿನೆಟ್‌ನಲ್ಲಿ ಇಲ್ವಾ ಈಶ್ವರಪ್ಪ. ಯಾರ ಸರ್ಕಾರ ಇದೆ? ಕೇಂದ್ರದಲ್ಲಿ ಯಾರದ್ದು ಸರ್ಕಾರ? ರಾಜ್ಯದಲ್ಲಿ ಯಾರದ್ದು ಸರ್ಕಾರ? ಒತ್ತಡ ಹಾಕಿ ಮಾಡಿಸು (ಈಶ್ವರಪ್ಪಗೆ). ಅದಕ್ಕೆ ಪಾದಯಾತ್ರೆ ಯಾಕೆ ಮಾಡುತ್ತಿ. ಜನರಿಗೆಲ್ಲ ತೊಂದರೆ ಕೊಡೋಕೆ. ಈಶ್ವರಪ್ಪ ಇದ್ದಾರೆ ಅಂತ ಅಲ್ಲ, ಅನಗತ್ಯವಾಗಿ ಈಶ್ವರಪ್ಪ ರಾಜಕಾರಣ ಮಾಡುತ್ತಿದ್ದಾರೆ. ನೀವು ಶಿಫಾರಸು ಮಾಡಬೇಕಾದರೆ ಕುಲಶಾಸ್ತ್ರ ಅಧ್ಯಯನ ವರದಿ ಬೇಕು. ಅದು ಬಾರದೇನೆ ಈಶ್ವರಪ್ಪ ಮುಂದುಗಡೆ ಇದ್ದಾನೆ, ಅದಕ್ಕೆ ನೀವು ಬಂದಿಲ್ಲ ಎಂದರೆ ಏನರ್ಥ.

• ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಮೀಸಲಾತಿ ಶೇ 50 ದಾಟುವಂತಿಲ್ಲ. ಹೆಚ್ಚಿಸಿದರೆ ಸಮತೋಲನ ಹೇಗೆ ಸಾಧ್ಯ?

ಸಂವಿಧಾನ ತಿದ್ದುಪಡಿ ಆಗಬೇಕು. ಇಂದ್ರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಶೇ 50 ಮೀರಬಾರದು ಎಂದಿದೆ. ಕೇಂದ್ರದವರು ಮತ್ತೆ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರೂ ಸೇರಿದಂತೆ ಇತರರಿಗೆ ಶೇ 10 ಮೀಸಲಾತಿ ಮಾಡಿಬಿಟ್ಟಿದ್ದಾರೆ. ನಾಯಕರು (ವಾಲ್ಮೀಕಿ ಸಮುದಾಯ) ಬೇರೆ ಶೇ 3ರಿಂದ ಶೇ 7 ಮಾಡಬೇಕು ಎಂದು ಕೇಳುತ್ತಿದ್ದಾರೆ. ಅದು ಬೇರೆ ಕೊಡಬೇಕು. ನಾಗಮೋಹನದಾಸ ವರದಿ ಕೊಟ್ಟಿದ್ದಾರೆ. ಆ ವರದಿ ಮೇಲೆ ಸಚಿವ ಸಂಪುಟ ಉಪ ಸಮಿತಿ ಆಗಿದೆ. ಅವರಿನ್ನೂ ವರದಿ ಕೊಟ್ಟಿಲ್ಲ. ಇವೆಲ್ಲ ಗೊಂದಲಗಳಿವೆ. ಇದು ಆರೆಸ್ಸೆಸ್‌ನವರು ಏನೊ ಮಾಡೋಕೆ ಹೋಗಿ, ಅದೇನೊ ತಾಳ ಹಾಕೋಕೆ ಹೋಗಿ ಸಿಕ್ಕಿ ಹಾಕಿಕೊಳ್ಳುತ್ತಾರಲ್ಲ ಹಾಗಾಗಿದೆ.

• ಈಗಿನ ಹೋರಾಟದ ಹಿಂದೆ ರಾಜಕೀಯ ಹಿತಾಸಕ್ತಿ, ಲಾಭನಷ್ಟ ಕಾಣುತ್ತಿದೆಯೇ?


ನಾನು ಮೀಸಲಾತಿ ಕೇಳೋರಿಗೆ ಯಾಕೆ ಕೇಳುತ್ತೀರಿ ಎಂದು ಕೇಳೋಕೆ ಹೋಗಲ್ಲ. ಮೀಸಲಾತಿ ಅರ್ಹತೆ ಇದ್ದವರು ಎಲ್ಲರೂ ಕೇಳಬೇಕು. ಅರ್ಹತೆ ಇದ್ದವರಿಗೆ ಕೊಡಬೇಕು. ಸಂವಿಧಾನದ ಚೌಕಟ್ಟಿನ ಒಳಗಡೆ ಕೊಡಬೇಕು ಅಷ್ಟೆ.

• ಅಂದರೆ, ಹೋರಾಟಗಳಲ್ಲಿ ರಾಜಕೀಯ ಇಲ್ಲ ಎಂದೇ?

ಹೋರಾಟಕ್ಕೂ ಸಕಾರಣ ಇರಬೇಕಲ್ಲರೀ. ರಾಜಕಾರಣಕ್ಕಾಗಿ ಹೋರಾಟ ಮಾಡಬಾರದು. ಕುರುಬರು ಎಸ್‌ಟಿ ಪಟ್ಟಿಗೆ ಸೇರಿಸುವಂತೆ ಹೋರಾಟ ಮಾಡುತ್ತಿದ್ದಾರೆ. ಓಕೆ ಫೈನ್. ಅದಕ್ಕೂ ಸಂದರ್ಭ ಇರಬೇಕಲ್ಲ. ಯಾವಾಗ ಮಾಡಬೇಕು? ಈಗ ಮಾಡುವ ಅಗತ್ಯ ಇದೆಯಾ? ಇನ್ನೂ ಕುಲಶಾಸ್ತ್ರ ಅಧ್ಯಯನ ಆಗಬೇಕು. ಅದು ಇನ್ನೂ ನಡೆಯುತ್ತಿದೆ. ಅದು ಬಂದ ಬಳಿಕ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕು. ಎಸ್‌ಟಿಗೆ ಸೇರಿಸುವ ಕೆಲಸವನ್ನು ಕೇಂದ್ರದವರು ಮಾಡಬೇಕು.

• ಮೀಸಲಾತಿ ಹೋರಾಟವನ್ನು ನಿಭಾಯಿಸಲು ಸರ್ಕಾರ ವಿಫಲ ಆಗಿದೆಯೇ?

ಸರ್ಕಾರ ಸರಿಯಾದ ರೀತಿಯಲ್ಲಿ ನಿಭಾಯಿಸುತ್ತಿಲ್ಲ. ಹೋರಾಟಗಾರರ ಜೊತೆ ಮಾತುಕತೆ ನಡೆಸಿ, ಮನವೊಲಿಸಬೇಕು. ಪಂಚಮಸಾಲಿ ಸಮುದಾಯದವರು 2 ಎಗೆ ಸೇರಿಸುವಂತೆ ಹೋರಾಟ ಮಾಡುತ್ತಿದ್ದಾರೆ. ಸೇರಿಸುವ ಮೊದಲು ಅವರ ಮನವಿ ಹಿಂದುಳಿದ ವರ್ಗಗಳ ಶಾಶ್ವತ ಆಯೋಗಕ್ಕೆ ಹೋಗಬೇಕು. ಆಯೋಗದವರು ಅಧ್ಯಯನ ಮಾಡಿ ಶಿಫಾರಸು ಮಾಡಬೇಕು. ಅದು ಸಚಿವ ಸಂಪುಟಕ್ಕೆ ಹೋಗಬೇಕು. ಅಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಹೀಗಾಗಿ, ಮೊದಲು ಮುಖ್ಯಮಂತ್ರಿ ಕರೆದು ಅವರ ಮನವೊಲಿಸಬೇಕು.



ರಾಜಕೀಯ ಲಾಭನಷ್ಟ, ಹಿತಾಸಕ್ತಿ, ಸಮುದಾಯಗಳ ಮೇಲಿನ ಹಿಡಿತದ ದಾಳವಾಗಿ ಪ್ರಯೋಗವಾಗುತ್ತಿರುವ ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆಗಳ ಈಡೇರಿಕೆಗೆ ಸಂವಿಧಾನದಲ್ಲಿರುವ ಅಂಶ– ಆಶಯ ಮಾನದಂಡ ಆಗಬೇಕೇ ಹೊರತು ಜಾತಿ ಅಲ್ಲ; ಬೀದಿ ಹೋರಾಟವಲ್ಲ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಸಿದ್ದರಾಮಯ್ಯ ಸಂದರ್ಶನ ನೋಡಲು ಕೋಡ್ ಸ್ಕ್ಯಾನ್ ಮಾಡಿ | ಪ್ರಜಾವಾಣಿ ನೋಡಿಯೊ

ಈಶ್ವರಪ್ಪ ಪ್ರತಿಪಾದನೆ

‘ಕುರುಬರ ಹೋರಾಟ ಯಾರ ವಿರುದ್ಧವೂ ಅಲ್ಲ’

• ಚಂದ್ರಹಾಸ ಹಿರೇಮಳಲಿ

• ಕುರುಬ ಸಮುದಾಯದ ಮೀಸಲಾತಿ ಹೋರಾಟದ ರೂವಾರಿಗಳು ಯಾರು?

ಕುರುಬ ಸಮುದಾಯದ ಇಬ್ಬರು ಶ್ರೀಗಳು ಹೋರಾಟದ ರೂವಾರಿಗಳು. ಅವರ ಮಾರ್ಗದರ್ಶನದಂತೆ ಕುರುಬ ಸಮಾಜದ ಎಸ್‌ಟಿ ಮೀಸಲಾತಿ ಹೋರಾಟ ಸಮಿತಿ ಪಾದಯಾತ್ರೆ, ಸಮಾವೇಶ ಸಂಘಟಿಸಿತ್ತು. ಸಮಿತಿಯಲ್ಲಿ ನಾನು, ಎಚ್.ಎಂ.ರೇವಣ್ಣ, ಎಚ್. ವಿಶ್ವನಾಥ್, ಬಂಡೆಪ್ಪ ಕಾಶೆಂಪುರ್, ವಿರೂಪಾಕ್ಷಪ್ಪ ಸೇರಿದಂತೆ ಎಲ್ಲ ಪಕ್ಷಗಳ ಮುಖಂಡರೂ ಇದ್ದೆವು.

• ಧರ್ಮನಿರಪೇಕ್ಷವಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ಪ್ರಮಾಣವಚನ ಸ್ವೀಕರಿಸಿದ ಸಚಿವರೇ ಒಂದು ಜಾತಿಯ ಪರವಾದ ಹೋರಾಟದಲ್ಲಿ ಭಾಗವಹಿಸಬಹುದೇ?

ಧ್ವನಿ ಇಲ್ಲದ, ತುಳಿತಕ್ಕೆ ಒಳಗಾದ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ಸಮಾಜಗಳಿಗೆ ಅಗತ್ಯ ಮೀಸಲಾತಿ ನೀಡಬೇಕು ಎನ್ನುವುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಸ್ವಾತಂತ್ರ್ಯಾನಂತರ ಸುದೀರ್ಘ ಅವಧಿ ಆಡಳಿತ ನಡೆಸಿದ ಕಾಂಗ್ರೆಸ್ ಶೋಷಿತ ಎಲ್ಲ ಸಮುದಾಯಗಳನ್ನು ಗುರುತಿಸುವಲ್ಲಿ ವಿಫಲವಾಗಿದೆ. ಅತ್ಯಂತ ಹಿಂದುಳಿದ ಕುರುಬರು, ಗಂಗಾಮತಸ್ಥರು, ಉಪ್ಪಾರರು, ಸವಿತಾ ಸಮಾಜ ಸೇರಿ ಕೆಲವು ಸಮುದಾಯಗಳಿಗೆ ನ್ಯಾಯ ದೊರೆತಿಲ್ಲ. ಕುರುಬರಷ್ಟೆ ಅಲ್ಲ, ಇಂತಹ ಸಮುದಾಯಗಳು ಕರೆದಾಗ ಅವರ ಅಹವಾಲು ಕೇಳಿದ್ದೇನೆ. ನನ್ನ ಸಮಾಜದ ಶ್ರೀಗಳು ಕರೆದಾಗಲೂ ಹೋಗಿರುವೆ. ನಾನು ಕುರುಬ ಸಮುದಾಯ ಮತ್ತು ಸರ್ಕಾರದ ಪ್ರತಿನಿಧಿಯಾಗಿ ಈ ಎರಡರ ನಡುವೆ ಕೊಂಡಿಯ ರೀತಿ ಕೆಲಸ ಮಾಡಿ ಕುರುಬ ಸಮುದಾಯದ ಧ್ವನಿಯನ್ನು ಸರ್ಕಾರಕ್ಕೆ ತಲುಪಿಸುವ ಪ್ರಯತ್ನ ಮಾಡಿರುವೆ.

• ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕುರುಬ ಸಮುದಾಯದ ದೊಡ್ಡ ನಾಯಕ ಎಂದು ಹೇಳಲಾಗುತ್ತಿದೆ. ಈಗ, ಸಮುದಾಯದಲ್ಲಿ ಅವರ ವರ್ಚಸ್ಸು ಕುಗ್ಗಿಸುವ ತಂತ್ರದ ಭಾಗವಾಗಿ ಮೀಸಲಾತಿ ಹೋರಾಟ ನಡೆಸಲಾಗುತ್ತಿದೆ ಎಂಬ ವಾದವೂ ಕೇಳಿಬರುತ್ತಿದೆಯಲ್ಲ...

ಕುರುಬರ ಹೋರಾಟ ಸಿದ್ದರಾಮಯ್ಯ ವಿರುದ್ಧವೂ ಅಲ್ಲ, ಪರವೂ ಅಲ್ಲ. ಸಮಾಜದ ಶ್ರೀಗಳ ಆಶಯಕ್ಕೆ ಮನ್ನಣೆ ಅಷ್ಟೆ. ಶ್ರೀಗಳು ಹೋರಾಟದ ಮೂಲಕ ಸರ್ಕಾರದ ಗಮನ ಸೆಳೆಯಲು ನಿರ್ಧರಿಸಿದ್ದರು. ಮೊದಲು ಅವರು ಭೇಟಿ ಕೊಟ್ಟಿದ್ದೇ ಸಿದ್ದರಾಮಯ್ಯ ಮನೆಗೆ. ಹೋರಾಟದಲ್ಲಿ ಭಾಗವಹಿಸುವುದಿಲ್ಲ. ಬೆಂಬಲ ನೀಡುವುದಾಗಿ ಅವರು ತಿಳಿಸಿದ್ದರಂತೆ. ನಂತರ ನಮ್ಮ ಮನೆಯಲ್ಲೇ ವಿವಿಧ ಪಕ್ಷದಲ್ಲಿರುವ ಸಮುದಾಯದ ಮುಖಂಡರ ಸಭೆ ನಡೆಸಿದ್ದೆವು. ಮೀಸಲಾತಿ ಹೋರಾಟ ಯಾವುದೇ ಪಕ್ಷದ ಹೋರಾಟವಲ್ಲ. ಸಿದ್ದರಾಮಯ್ಯ ಬರದೇ ಇದ್ದರೆ ಏನೂ ಆಗುತ್ತಿರಲಿಲ್ಲ. ಆದರೆ, ವಿಭಾಗೀಯ ಸಮಾವೇಶಗಳ ಯಶಸ್ಸಿನ ನಂತರ ಸಿದ್ದರಾಮಯ್ಯ ಆಡಿದ ಮಾತುಗಳು ರಾಜಕೀಯ ಬಣ್ಣ ಪಡೆದವು. ಪಾದಯಾತ್ರೆ, ಸಮಾವೇಶಕ್ಕೆ ಆರ್‌ಎಸ್‌ಎಸ್ ದುಡ್ಡುಕೊಟ್ಟಿದೆ ಎಂದು ಟೀಕಿಸುವ ಮೂಲಕ ಶ್ರೀಗಳಿಗೆ, ಸಮಾಜಕ್ಕೆ ನೋವು ಮಾಡಿದರು.

• ಆರ್‌ಎಸ್‌ಎಸ್ ವಿರುದ್ಧ ಸಿದ್ದರಾಮಯ್ಯ ನೀಡಿದ ಹೇಳಿಕೆಯಲ್ಲಿ ಯಾವುದೇ ಹುರುಳು ಇಲ್ಲವೇ?

ಆರ್‌ಎಸ್‌ಎಸ್ ಹಣ ನೀಡಿಲ್ಲ. ಹೋರಾಟದಲ್ಲಿ ಭಾಗಿಯಾದ ಶ್ರೀಗಳು, ಸಮಾಜದ ಜನರನ್ನು ಟೀಕೆ ಮಾಡಲು ಸಾಧ್ಯವಾಗದೆ ಆರ್‌ಎಸ್‌ಎಸ್ ಹಾಗೂ ನನ್ನನ್ನು ಟೀಕೆ ಮಾಡುವ ಮೂಲಕ ಹೋರಾಟದ ದಿಕ್ಕು ತಪ್ಪಿಸಲು ಪ್ರಯತ್ನಿಸಿದರು.

• ಕುಲಶಾಸ್ತ್ರೀಯ ಅಧ್ಯಯನದ ವರದಿ ಬರುವವರೆಗೆ ಕಾಯಬಹುದಿತ್ತಲ್ಲವೇ?

ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರುವ ಅರ್ಹತೆ ಸಮುದಾಯಕ್ಕೆ ಇದೆ ಎನ್ನುವ ವಿಷಯ ಬಹುತೇಕರಿಗೆ ತಿಳಿದಿಲ್ಲ. ಅಧ್ಯಯನದ ವರದಿ ಬರುವಷ್ಟರಲ್ಲಿ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಬೇಕು ಎನ್ನುವುದಷ್ಟೇ ಶ್ರೀಗಳ ನಿಲುವಾಗಿತ್ತು. ಅದಕ್ಕಾಗಿ ಪಾದಯಾತ್ರೆ ಹಮ್ಮಿಕೊಂಡರು. ಇತರೆ ಸಮಾಜಗಳಂತೆ ಅವರು ಮೀಸಲಾತಿ ನಿರ್ಧಾರಕ್ಕೆ ಗಡುವು ನೀಡಲಿಲ್ಲ. ಸಿದ್ದರಾಮಯ್ಯ ಅವಧಿಯಲ್ಲಿ ನಾಲ್ಕು ಜಿಲ್ಲೆಗಳ ಕುರುಬರಿಗೆ ಪರಿಶಿಷ್ಟ ಪಂಗಡದ ಮೀಸಲಾತಿ ನೀಡಲು ಮಾಡಿದ್ದ ಶಿಫಾರಸು ತಿರಸ್ಕೃತವಾಗಿದೆ. ಸರಿಯಾದ ದಾಖಲೆ ಸಲ್ಲಿಸಿದ್ದರೆ ಇಂತಹ ಯಡವಟ್ಟು ಆಗುತ್ತಿರಲಿಲ್ಲ. ಮುಂದೆ ಜಾಗೃತವಾಗಿ ಹೆಜ್ಜೆ ಇಡಲು ಈ ಹೋರಾಟ ಪೂರ್ವ ಸಿದ್ಧತೆ ಅಷ್ಟೆ.

• ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ ಈಗ ಎಸ್‌ಟಿ ಸೌಲಭ್ಯ ಪಡೆಯುತ್ತಿರುವ ನಾಯಕ, ವಾಲ್ಮೀಕಿ ಮತ್ತಿತರ ಸಮುದಾಯಗಳ ಮೀಸಲಾತಿ ಸೌಲಭ್ಯ ಏರುಪೇರಾಗುವುದಿಲ್ಲವೇ?

ಇಲ್ಲ. ಕುರುಬರೂ ಸೇರಿ ಯಾವ ಸಮುದಾಯವನ್ನು ಸೇರಿಸಿದರೂ ಅವರು ಈಗ ಪಡೆಯುತ್ತಿರುವ ಮೀಸಲಾತಿ ಪ್ರಮಾಣದ ಶೇಕಡಾವಾರು ವರ್ಗಾವಣೆಯಾಗುತ್ತದೆ. ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣದಲ್ಲೂ ಹೆಚ್ಚಳವಾಗುತ್ತದೆ.

• ಎಲ್ಲ ಸಮುದಾಯದ ಸ್ವಾಮಿಗಳೂ ಬೀದಿಗಿಳಿದಿದ್ದಾರಲ್ಲ...

ಅವರು ಬೀದಿಗಿಳಿದ ಕಾರಣಕ್ಕೆ ಜನರಿಗೆ ನಂಬಿಕೆ ಬಂದಿದೆ. ಹಿಂದೆ ಆಡಳಿತ ನಡೆಸಿದ ಜನಪ್ರತಿನಿಧಿಗಳು ಬೇಡಿಕೆ ಈಡೇರಿಸದ ಕಾರಣ ಮೀಸಲಾತಿ ಸೌಲಭ್ಯ ಪಡೆಯುವ ವಿಶ್ವಾಸವೇ ಇಲ್ಲವಾಗಿತ್ತು. ಸ್ವಾಮೀಜಿಗಳು ನೇತೃತ್ವ ವಹಿಸಿರುವುದು ಜನರಲ್ಲಿ ಹೊಸ ಭರವಸೆ ಮೂಡಿಸಿದೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ‘ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಉತ್ತರ ಪ್ರದೇಶದ ಮಥುರಾದಲ್ಲಿ ಉದ್ಧಟತನ ತೋರಿದ್ದಾರೆ. ಫೆ. 23ರಂದು ಸಮಾವೇಶದಲ್ಲಿ ತಮ್ಮನ್ನು ಭೇಟಿಯಾಗಲು ಬಂದ ಅತ್ಯಾಚಾರ ಸಂತ್ರಸ್ತೆಯ ಮಾತನ್ನೂ ಕೇಳಿಸಿಕೊಳ್ಳುವ ಗೋಜಿಗೆ ಹೋಗಿಲ್ಲ. ನ್ಯಾಯ ಕೇಳಲು ಬಂದಿದ್ದ ರಾಜಸ್ಥಾನದ ಸಂತ್ರಸ್ತೆಯ ಕುಟುಂಬವನ್ನು ನಿರ್ಲಕ್ಷಿಸಿ ಮುಂದೆ ಸಾಗಿದ್ದಾರೆ. ಭೇಟಿಯಾಗಲು ಬಂದವರನ್ನು ಪೊಲೀಸರು ಬಂಧಿಸಿದ್ದಾರೆ’ ಎಂಬ ವರದಿಯನ್ನು ರಿಪಬ್ಲಿಕ್ ಭಾರತ್ ಮಾಧ್ಯಮ ಪ್ರಕಟಿಸಿದೆ. ಪ್ರಿಯಾಂಕಾ ವರ್ತನೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ. ಸ್ವಲ್ಪ ಸಮಯದ ಬಳಿಕ ಈ ವರದಿಯನ್ನು ಡಿಲೀಟ್ ಮಾಡಲಾಗಿದೆ.



✓ ವರದಿ ಸಂಪೂರ್ಣ ತಪ್ಪಾಗಿದೆ ಎಂದು ಲಾಜಿಕಲ್ ಇಂಡಿಯನ್ಸ್ ವೆಬ್‌ಸೈಟ್ ವರದಿ ಮಾಡಿದೆ. ಪ್ರಿಯಾಂಕಾ ಗಾಂಧಿ ಅವರು ಮಹಾಪಂಚಾಯಿತಿಯಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡುವಾಗ ಭಾಷಣವನ್ನು ಮಧ್ಯದಲ್ಲಿ ನಿಲ್ಲಿಸಿ ಅತ್ಯಾಚಾರ ಸಂತ್ರಸ್ತೆಯನ್ನು ಖುದ್ದಾಗಿ ಭೇಟಿ ಮಾಡಿದರು. ತಕ್ಷಣ ರಾಜಸ್ಥಾನ ಮುಖ್ಯಮಂತ್ರಿಗೆ ಕರೆ ಮಾಡಿ ಕ್ರಮ ತೆಗೆದುಕೊಳ್ಳುವಂತೆ ಹೇಳಿದರು. ಎಎನ್‌ಐ ಸೇರಿ ಹಲವು ಮಾಧ್ಯಮಗಳು ಈ ವರದಿಯನ್ನು ಪ್ರಕಟಿಸಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತೋರಿಕೆಗಳ ಸತ್ಯತೆ

ಹುರಿಯುರುಳೆ ಹಾವಲ್ಲವಾದೊಡಂ ಮಬ್ಬಿನಲಿ|
ಹರಿದಾಡಿದಂತಾಗೆ ನೋಳ್ಪವಂ ಬೆದರಿ||
ಸುರಿಸುವಾ ಬೆವರು ದಿಟ; ಜಗವುಮಂತುಟೆ ದಿಟವು|
ಜರೆಯದಿರು ತೋರ್ಕೆಗಳ – ಮಂಕುತಿಮ್ಮ || 391||

ಪದ-ಅರ್ಥ: ಹುರಿಯುರುಳೆ = ಹುರಿಯ + ಉರುಳೆ (ಸುರಳಿ), ಹಾವಲ್ಲವಾದೊಡಂ = ಹಾವಲ್ಲ + ಆದೊಡಂ (ಆದರೂ), ನೋಳ್ಪವಂ = ನೋಡುವವ, ಜಗವುಮಂತುಟೆ = ಜಗವು + ಅಂತುಟೆ (ಹಾಗೆಯೇ), ಜರೆಯದಿರು = ತಿರಸ್ಕರಿಸದಿರು, ತೋರ್ಕೆಗಳ = ತೋರಿಕೆಗಳ.

ವಾಚ್ಯಾರ್ಥ: ಹಗ್ಗದ ಸುರುಳಿ ಹಾವಲ್ಲ. ಆದರೂ ನಸುಕತ್ತಲೆಯಲ್ಲಿ ಅದು ಹರಿದಾಡಿದಂತೆ ಕಂಡಾಗ ಬೆದರಿ, ಸುರಿಸುವ ಬೆವರು ಸತ್ಯವೆ. ಅಂತೆಯೇ ಜಗತ್ತು ಸತ್ಯ. ಕಣ್ಣಿಗೆ ಕಾಣುವ ತೋರಿಕೆಗಳನ್ನು ತಿರಸ್ಕರಿಸಬೇಡ.

ವಿವರಣೆ: ಅಧ್ಯಾತ್ಮ ಚಿಂತನೆಯಲ್ಲಿ ಇದನ್ನು ‘ಸರ್ಪ-ರಜ್ಜು ನ್ಯಾಯ’ ಎನ್ನುತ್ತಾರೆ. ರಜ್ಜು ಎಂದರೆ ಹಗ್ಗ. ಹಗ್ಗಕ್ಕೂ-ಸರ್ಪಕ್ಕೂ ಕೇವಲ ಆಕಾರದಲ್ಲಿ ಸ್ವಲ್ಪ ಸಾಮ್ಯತೆ ಇದೆ. ಸಂಜೆ ನಸುಕತ್ತಲಿನ ಸಮಯದಲ್ಲಿ ದಾರಿಯಲ್ಲಿ ನಡೆದು ಹೋಗುವವನೊಬ್ಬ ಯಾವುದರ ಮೇಲೋ ಕಾಲಿಟ್ಟು, ಬೆದರಿ, ಹಾರಿ ದೂರ ನಿಂತು ಹಗ್ಗವನ್ನು ನೋಡಿ ಹಾವು ಎಂದು ಭ್ರಮಿತನಾಗುತ್ತಾನೆ. ಅಯ್ಯೋ ಅಯ್ಯೋ ಹಾವು ಎಂದು ಕೂಗುತ್ತಾನೆ. ನಾಲಿಗೆಯ ದ್ರವ ಒಣಗಿದೆ, ಮೈ ಬೆವರಿ ನಡುಗುತ್ತದೆ. ಹಾವು ತನಗೆ ಕಚ್ಚೇ ಬಿಟ್ಟಿತು ಎಂದು ಭಾವಿಸಿದ್ದಾನೆ. ಹತ್ತಿರದ ಮನೆಗಳಿಂದ ಜನ ಓಡಿ ಬಂದರು. ಕೆಲವರು ಬ್ಯಾಟರಿ ತಂದಿದ್ದರು. ‘ಏನಾಯಿತು?’ ಎಂದು ಕೇಳಿದರೆ ಆತ ರಸ್ತೆಯ ಬದಿಗೆ ಬೆರಳು ತೋರಿಸಿ, ‘ಹಾವು, ಹಾವು’ ಎನ್ನುತ್ತಿದ್ದಾನೆ. ಅವನು ಶಕ್ತಿಹೀನನಾಗಿ ಕುಸಿದು ನೆಲದ ಮೇಲೆ ಕುಳಿತಿದ್ದಾನೆ. ಜನ ಬ್ಯಾಟರಿ ಬೆಳಕಿನಿಂದ ಅತ್ತ ನೋಡಿದರೆ ಅದೊಂದು ಹಗ್ಗದ ಸುರುಳಿ. ಅವರು ಜೋರಾಗಿ ನಕ್ಕುಬಿಟ್ಟು. ‘ಸ್ವಾಮಿ ಅದಾವುದೂ ಕೃಷ್ಣಸರ್ಪವಲ್ಲ, ಹಳೆಯ, ಕತ್ತರಿಸಿದ ಹಗ್ಗ’ ಎಂದು ತೋರಿಸಿದಾಗ ಅವನ ಭ್ರಾಂತಿ ಕರಗಿ, ಪೆಚ್ಚಾಗಿ ನಕ್ಕ.

ಶ್ರೀಮದ್ ಭಾಗವತದ 11ನೇ ಸ್ಕಂಧದ, 26ನೇ ಅಧ್ಯಾಯದಲ್ಲಿ ಈ ಸರ್ಪ-ರಜ್ಜುವಿನ ಮಾತು ಸುಂದರವಾಗಿ ಬರುತ್ತದೆ.

ಕಿಮೇತಯಾ ನೋಽಪಕೃತಂ ರಜ್ಜ್ವಾ ವಾ ಸರ್ಪಚೇತಸ: |
ರಜ್ಜು ರೂಪಾವಿದುಷೋ ಯೋಽಹಂ ಯದಜಿತೇಂದ್ರಿಯ || 17 ||

‘ಹಗ್ಗವನ್ನು ಸರ್ಪವೆಂದು ತಿಳಿದು ಅದರಲ್ಲಿ ಸರ್ಪದ ಕಲ್ಪನೆಮಾಡಿ, ದು:ಖಿತನಾದವನಿಗೆ, ಆ ಹಗ್ಗ ಏನು ಮಾಡೀತು? ಸ್ವತ: ನಾನೇ ಅಜಿತೇಂದ್ರಿಯನಾದದ್ದರಿಂದ ಅಪರಾಧಿಯಾಗಿದ್ದೇನೆ’.

ಕಂಡದ್ದು ಸರ್ಪವಲ್ಲ ನಿಜ, ಆದರೆ ಬೆವೆತದ್ದು, ಹೆದರಿ ನಡುಗಿದ್ದು, ಸಂಕಟಪಟ್ಟದ್ದು ಸುಳ್ಳೇ? ಕಗ್ಗ ಅದನ್ನು ಹೇಳುತ್ತದೆ. ನಮ್ಮ ಅನುಭವ ಸತ್ಯ. ಅದನ್ನು ಮರೆಯುವುದು, ತಿರಸ್ಕರಿಸುವುದು ಸರಿಯಲ್ಲ. ಪ್ರಪಂಚ ಮಾಯೆಯೇ ಇದ್ದೀತು, ಅಧ್ಯಾತ್ಮದ ಉತ್ತುಂಗದಲ್ಲಿ. ಆದರೆ ಅನುಭವ ಪ್ರಪಂಚದಲ್ಲಿಯೇ ಬದುಕಿರುವ ಬಹುಪಾಲು ಜನರಿಗೆ ಅದು ಮಾಯೆಯಲ್ಲ. ಒಬ್ಬ ತರುಣ ಸನ್ಯಾಸಿಗೆ ಜಗತ್ತೆಲ್ಲ ಮಾಯೆ, ತನ್ನ ದೇಹವೂ ಒಂದು ಮಾಯೆ ಎಂದು ಖಚಿತವಾಗಿತ್ತಂತೆ. ಅವನಿಗೊಂದು ಶಸ್ತ್ರಚಿಕಿತ್ಸೆ ಮಾಡುವಾಗ ವೈದ್ಯರು ಅರವಳಿಕೆ ಕೊಡದೇ ದೇಹವನ್ನು ಕುಯ್ಯಲು ಹೋದಾಗ ಆತ ಹೌಹಾರಿ ನೋವು ತಡೆದುಕೊಳ್ಳಲು ಅಸಾಧ್ಯ, ಅರವಳಿಕೆ ಕೊಡಿ ಎಂದರಂತೆ. ಆಗ ವೈದ್ಯರು, ‘ಸ್ವಾಮಿ, ದೇಹ ಮಾಯೆಯಲ್ಲವೆ? ಅದಕ್ಕೇಕೆ ಚಿಂತೆ?’ ಎಂದಾಗ ಆತನಿಗೆ ದೇಹ ಸತ್ಯವೆಂದು ನಂಬಿಕೆಯಾಯಿತು.

ದೃಶ್ಯಪ್ರಪಂಚದ ಅನುಭವವನ್ನು ತಿರಸ್ಕರಿಸುವುದು ಸಾಧ್ಯವಿಲ್ಲ. ❖

ದಿನ ಭವಿಷ್ಯ

ಶುಕ್ರವಾರ 26 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಬಿಷ ಚತುರ್ದಶೀ ಗಂ. 20-48 (ಹ. 3-03) ಶುಕ್ರವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ 13-3 (ಹ. 11-57) ಅತಿಗಂಡ ನಾಮ ಯೋಗ ಗಂ 39-29 ವಣಿಜ ಕರಣ ಗಂ 20-48 ವಿಷ. ಗಂ. 42-41 ಅಮೃತ ಗಂ. 7-54 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-42 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 5 9

ಮೇಷ: ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರ. ವ್ಯಾಪಾರಸ್ಥರಿಗೆ ಗಣನೀಯ ಲಾಭ. ಮನೆಮಂದಿಯೊಂದಿಗೆ ಪ್ರವಾಸ ಮಾಡುವ ಸಯೋಗ.

ವೃಷಭ: ಸಂಬಂಧವಿಲ್ಲದ ವಿಷಯಗಳು ನಿಮ್ಮನ್ನು ಗೊಂದಲಕ್ಕೆ ಸಿಕ್ಕಿಸುವ ಸಾಧ್ಯತೆ. ಅಂತಹ ವಿಷಯಗಳಲ್ಲಿ ಅತ್ಯುತ್ಸಾಹ ಸಲ್ಲ. ಮನೆಯವರೊಂದಿಗೆ ದೂರದ ಪ್ರಯಾಣ. ದೇವತಾ ದರ್ಶನ ಭಾಗ್ಯ ಕಂಡುಬರುತ್ತಿದೆ.

ಮಿಥುನ: ನಿಮ್ಮ ವಿರುದ್ಧ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುವ ಸಾಧ್ಯತೆಯಿದ್ದು, ಆ ಬಗ್ಗೆ ತಲೆಕೆಡಿಸಿಕೊಳ್ಳದೇ ಮುಗ್ಧತೆ ಕಾಪಾಡುವುದು ಒಳ್ಳೆಯದು. ಸಮಾಧಾನ ನಿಮ್ಮ ನೆರವಿಗೆ ಬರುವುದು.

ಕರ್ಕಾಟಕ: ಸಾಲಕೊಟ್ಟವರು ಯಡೆಬಿಡದೆ ಮರುಪಾವತಿಗಾಗಿ ತಗಾದೆ ಹೂಡಬಹುದು. ದ್ವೇಷಕ್ಕೆ ಮುಂದಾಗದೇ ಉಪಾಯದಿಂದ ಪಾರಾಗುವ ಬಗ್ಗೆ ಯೋಚಿಸಿ. ಸಂಗಾತಿಯೊಂದಿಗೆ ಸಮಾಲೋಚಿಸಿ ಉತ್ತಮ ನಿರ್ಣಯ ಕೈಗೊಳ್ಳಿ.

ಸಿಂಹ: ಗುಂಪುಗಾರಿಕೆಯಿಂದಾಗಿ ಧನ ಮಾನಗಳ ಹಾನಿ ಸಂಭವ. ಅನ್ಯರ ಮೇಲೆ ಸಂಶಯ ಒಳ್ಳೆಯದಲ್ಲ. ದೂರದಲ್ಲಿರುವ ಮಕ್ಕಳ ಆಗಮನ ಸಾಧ್ಯತೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿ.

ಕನ್ಯಾ: ನಿಮ್ಮ ಇಂದಿನ ಅನಿವಾರ್ಯವಲ್ಲದ ಕೆಲಸ ಕಾರ್ಯಗಳನ್ನು ಮುಂದೂಡುವುದು ಉತ್ತಮ. ದೂರದ ಪ್ರಯಾಣ ಖಂಡಿತ ಬೇಡ. ಮಕ್ಕಳಿಂದ ಮನಸ್ಸಿಗೆ ಸಂತಸ. ಮಡದಿ ನಿಮ್ಮ ಚಿಂತೆಗಳನ್ನು ದೂರಮಾಡಲಿದ್ದಾಳೆ.

ತುಲಾ: ಗೆಳೆಯರೊಂದಿಗೆ ಸಮಾಲೋಚನೆಯ ಸಾಧ್ಯತೆ. ಕೆಲಸಕಾರ್ಯಗಳಲ್ಲಿ ನಿಮ್ಮ ಸ್ವಭಾವದಿಂದಾಗಿ ಹಿನ್ನಡೆ. ದೃಢನಿರ್ಧಾರದಿಂದ ವ್ಯವಹರಿಸಿ. ಹಿರಿಯರ ಬೆಂಬಲದಿಂದಾಗಿ ಯಶಸ್ಸನ್ನು ಕಾಣುವಿರಿ.

ವೃಶ್ಚಿಕ: ಬೇರೆಯವರ ಥಳುಕು ಬಳುಕಿನ ಮಾತಿಗೆ ಮರುಳಾಗಿ ಮೋಸಹೋಗುವ ಸಾಧ್ಯತೆ. ಹಿರಿಯರ ಹಿತನುಡಿಗಳನ್ನು ಮನ್ನಿಸಿ ಅವರ ಆರೋಗ್ಯದ ಕಡೆಗೆ ಗಮನ ವಹಿಸಿ. ದಿನದ ಮಟ್ಟಿಗೆ ದೂರದ ಪ್ರಯಾಣ ಬೇಡ.

ಧನು: ಕೆಲವರೊಂದಿಗೆ ಅತಿಯಾದ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ. ವ್ಯವಹಾರಗಳಲ್ಲಿ ಸಂಬಂಧ ಹಳಸದಂತೆ ಎಚ್ಚರಿಕೆ ಅಗತ್ಯ. ವಿದ್ಯಾರ್ಥಿಗಳಿಗೆ ಗುರು ವೃಂದದವರಿಂದ ಸೂಕ್ತ ಮಾರ್ಗದರ್ಶನ.

ಮಕರ: ಮನಸ್ಸಿನಲ್ಲಿ ಹರಿಯುತ್ತಿರುವ ಪ್ರೀತಿ ಪ್ರೇಮಗಳ ಹುಚ್ಚು ಹೊಳೆಗೆ ಲಗಾಮು ಹಾಕಿಕೊಳ್ಳಿ. ಸ್ನೇಹದ ವಿಷಯದಲ್ಲಿ ಎಡವಿ ಬೀಳುವ ಸಾಧ್ಯತೆ. ಅಪರಿಚಿತ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಎಚ್ಚರವಿರಲಿ.

ಕುಂಭ: ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಪಡೆಯುವವರ ವಿಷಯದಲ್ಲಿ ಎಚ್ಚರದಿಂದಿರುವುದು ಒಳಿತು. ಬಾಲ ಬಡುಕರನ್ನು ದಿನದಮಟ್ಟಿಗೆ ದೂರವಿಡಿ. ಹಿರಿಯರ ಆರೋಗ್ಯದ ಬಗ್ಗೆ ಗಮನವಿರಲಿ.

ಮೀನ: ಸತ್ಯವನ್ನು ಬಯಲುಗೊಳಿಸಲು ಹೋಗಿ ಅವಘಡಕ್ಕೆ ತುತ್ತಾಗುವ ಸಾಧ್ಯತೆ. ಅಂತಹ ಸಂದರ್ಭಗಳನ್ನು ಮುಂದೂಡುವುದೇ ಲೇಸು. ವಾಹನ ಖರೀದಿಯ ಯೋಗ.

ನಿಮ್ಮ ಜನ್ಮದಿನ 26-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ಬಟ್ಟೆ, ಸಿದ್ಧ ಉಡುಪು, ನಾರಿನ ಸಾಮಗ್ರಿಗಳ ವ್ಯಾಪಾರದಲ್ಲಿರುವವರಿಗೆ ವ್ಯವಹಾರದಲ್ಲಿ ವೃದ್ಧಿ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ಯಶಸ್ಸು. ವಿವಿಧ ಮೂಲಗಳಿಂದ ಆರ್ಥಿಕ ಸದೃಢತೆ ದೊರಕಲಿದೆ. ಮಹಿಳಾ ಉದ್ಯೋಗಿಗಳಿಗೆ ಬಿಡುವಿಲ್ಲದ ಕೆಲಸದಿಂದಾಗಿ ಅಧಿಕ ಶ್ರಮ.

ಪದಬಂಧ 4520 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಸುಗಂಧಯುಕ್ತ ನೀರು (3)
4.ಹತ್ತು ನೂರಿದು (3)
5.ಒಬ್ಬರಿಂದ ಒಬ್ಬರಿಗೆ ಹರಡುವ ಕಾಹಿಲೆ (4)
6.ನಡುವೆ ಕರ ತಿರುಗಿಸಿ ಪಡೆದ ಪಚ್ಚೆ (4)
7.ಸಮ್ಮುಖದಲ್ಲಿರುವ ಗೆಳೆಯ! (2)
9.ಅಂಗವಿಕಲನು ತೋರಿದ | ಗುಹೆ (2)
13.ಪ್ರಾಣಿಗಳನ್ನು ಪ್ರದರ್ಶನಕ್ಕಾಗಿ ಇಟ್ಟಿರುವ ಜಾಗ (4)
14.ಅಂಗದಲ್ಲಿರುವ ಸುಗಂಧ ಲೇಪನ ದ್ರವ್ಯ (4)
15.ವ್ಯಾಕರಣಶಾಸ್ತ್ರವನ್ನು ತಿಳಿಸುವವನು (3)
16.ಇದು ಅಸಲಿಯಂತೂ ಅಲ್ಲವೇ ಅಲ್ಲ! (3)

ಮೇಲಿಂದ ಕೆಳಕ್ಕೆ
1.ವಲಸೆ ಹೊರಟವರು ನೆಲೆನಿಂತ ಪ್ರದೇಶ (4)
2.ಶ್ರೇಷ್ಠವರ್ಗದ ಸನ್ಯಾಸಿ (5)
3.ಜಾಣ ಹಿಡಿದುಕೊಂಡಿರುವ ಹಕ್ಕಿ (3)
5.ಒಳಗಿನ ಅಭಿಪ್ರಾಯವಿದು (4)
8.ಕಾಡುಕೋಣ ಇಲ್ಲಿದೆ (4)
10.ಗೆಲುವನ್ನು ಪಡೆದವನು (4)
11.ಕತ್ತು ಬಗ್ಗಿಸಿ ಹಾಕಿದ ಸಹಿ! (5)
12.ಚಲುವಾದ ಅಂಗಗಳನ್ನು ಹೊಂದಿದವಳು (3)

1	■	2			■	■	3	■
4			■	■	5			
	■	6				■		■
	■		■	■		■	■	■
■	■	7	8	■	9	10	■	■
■	■	■		■	■		■	11
■	12	■	13				■	
14				■	■	15		
■		■	■	16			■	

4519ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದ್ರೋಹ 4.ಸಭಾಸದ 6.ನಿಶಾಚರಿ 8.ಖಚಿತ 11.ಗುಲಾಮ 13.ಪರಿಹಾಸ 17.ಮಹಾರಾಜ 18.ರುಸುಮು

ಮೇಲಿಂದ ಕೆಳಕ್ಕೆ: 1.ವಿದ್ಯಾರ್ಥಿ 2.ಹಸನ್ಮುಖಿ 3.ಎಡಚ 5.ದನಿ 7.ರಿವಾಜು 9.ತರಗು 10.ಪ್ರತಾಪ 12.ಮಹಜರು 14.ರಿಕಾಪು 15.ಸಮ 16.ಗೋದಾಮು

ಸುಡೊಕು 4906

		7	1		2		6	
				3		8		9
2	9	4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4905 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಮುಂಬೈ ಧಾರಣೆ

ಶೇಂಗಾ

25-2-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1530)
ಒಂದು ವಾರದ ಡೆಲಿವರಿ	1535 (1525)
ಸೋಯಾ ಕಚ್ಚಾ	1165 (1150)
ಪಾಮ್ ವಾರದ ಡೆಲಿವರಿ	1170 (1150)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1490)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,150 (46,500)
ಬೆಳ್ಳಿ ಕೆ.ಜಿ
70,150 (69,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು

257



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,982
ಇಂದಿನ ಅಂತ್ಯ	15,097
▲	115
ದಿನದ ಗರಿಷ್ಠ	15,176

ವಿನಿಮಯ ದರ

$ ಡಾಲರ್	72.43
£ ಪೌಂಡ್	102.53
€ ಯುರೊ	88.16
¥ ಯೆನ್ (100ಕ್ಕೆ)	68.44

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1520)
ಸೋಯಾ (ರಿಫೈನ್ಡ್)	₹1185(1170)
ಸೂರ್ಯಕಾಂತಿ (ರಿಫೈನ್ಡ್)	₹1550 (1540)
ಪಾಮೋಲಿನ್	₹1172 (1152)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹3000-3500
ಮಧ್ಯಮ	₹2500-3000
ಸಣ್ಣ	₹2000-2500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ
ಎಪಿ	10150	---	---
ಎಸಿ	4115	---	---
ಆರ್‌ಪಿ	5350	---	---
ಆರ್‌ಸಿ	3000	---	---

ಷೇರುಪೇಟೆ, ಅರ್ಥವ್ಯವಸ್ಥೆ ನಡುವೆ ಕೊಂಡಿ ಕಳಚಿದೆ: ಅಜಯ್ ತ್ಯಾಗಿ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಹಣಕಾಸು ಸ್ಥಿರತೆ ಮಂಡಳಿ (ಎಫ್‌ಎಸ್‌ಬಿ) 'ಹಣಕಾಸು ಮಾರುಕಟ್ಟೆಗಳು ಹಾಗೂ ನೈಜ ಅರ್ಥವ್ಯವಸ್ಥೆಯ ನಡುವೆ ಸಂಬಂಧವೇ ಇಲ್ಲದಂತಾಗಿದೆ' ಎಂದು ವ್ಯಕ್ತಪಡಿಸಿದ್ದ ಕಳವಳಕ್ಕೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷ ಅಜಯ್ ತ್ಯಾಗಿ ಅವರು ದನಿಗೂಡಿಸಿದ್ದಾರೆ.

ಕೋವಿಡ್‌–19 ಸಾಂಕ್ರಾಮಿಕ ಹರಡಲು ಆರಂಭಿಸಿದ ನಂತರ ಷೇರು ಮಾರುಕಟ್ಟೆಗಳು ಒಮ್ಮೆಗೇ ತೀವ್ರ ಕುಸಿತ ಕಂಡಿದ್ದು, ನಂತರ ಅತ್ಯಂತ ವೇಗವಾಗಿ ಚೇತರಿಕೆ ಕಂಡಿದ್ದು ಕಳೆದ ಮೂವತ್ತು ವರ್ಷಗಳಲ್ಲಿ ಕಾಣದಂಥದ್ದು ಎಂದು ತ್ಯಾಗಿ ಹೇಳಿದ್ದಾರೆ.

'ಸಾಮಾನ್ಯವಾಗಿ, ಷೇರು ಮಾರುಕಟ್ಟೆಗಳು ಅರ್ಥ ವ್ಯವಸ್ಥೆಯ ಆರೋಗ್ಯದ ಸೂಚಕಗಳೂ ಹೌದು.



ಅಜಯ್ ತ್ಯಾಗಿ

ಅರ್ಥ ವ್ಯವಸ್ಥೆ ಯಾವ ದಿಕ್ಕಿನಲ್ಲಿ ಸಾಗುತ್ತದೆಯೋ ಷೇರು ಮಾರುಕಟ್ಟೆ ಸೂಚ್ಯಂಕಗಳು ಕೂಡ ಅದೇ ದಿಕ್ಕಿನಲ್ಲಿ ಸಾಗುತ್ತವೆ. ಆದರೆ, ಸಾಂಕ್ರಾಮಿಕ ಎದುರಾದ ನಂತರದಲ್ಲಿ, ಹಣಕಾಸು ಮಾರುಕಟ್ಟೆಗಳು ಮತ್ತು ನೈಜ ಅರ್ಥ ವ್ಯವಸ್ಥೆಯ ನಡುವಿನ ಕಂದಕ ಹೆಚ್ಚುತ್ತಿರುವ ಬಗ್ಗೆ ಎಫ್‌ಎಸ್‌ಬಿ ಹಾಗೂ ಆರ್‌ಬಿಐ ಸೇರಿದಂತೆ ಹಲವು ಸಂಸ್ಥೆಗಳು ಕಳವಳ ವ್ಯಕ್ತಪಡಿಸಿವೆ' ಎಂದು ತ್ಯಾಗಿ ಹೇಳಿದರು.

'ಹಿಂದೆಂದೂ ಕಾಣದಂತಹ ಈ ಬಗೆಯ ಪರಿಸ್ಥಿತಿ ಭಾರತದಲ್ಲಿ ಮಾತ್ರ ಸೃಷ್ಟಿಯಾಗಿಲ್ಲ. ಜಾಗತಿಕ ಮಟ್ಟದಲ್ಲಿ ಹಲವು ಮಾರುಕಟ್ಟೆಗಳಲ್ಲಿ ಇಂತಹ ಸ್ಥಿತಿ ಕಂಡುಬಂದಿದೆ' ಎಂದು ಅವರು ಹೇಳಿದರು.

ಕೋವಿಡ್‌–19 ಹರಡಿದ ನಂತರದಲ್ಲಿ ಹಲವು ದೇಶಗಳು ಆರ್ಥಿಕತೆಗೆ ಉತ್ತೇಜನ ನೀಡುವ ಕ್ರಮಗಳನ್ನು ಕೈಗೊಂಡವು. ಇದು ಅರ್ಥ ವ್ಯವಸ್ಥೆಯಲ್ಲಿ ನಗದು ಚಲಾವಣೆ ಹೆಚ್ಚುವಂತೆ ಮಾಡಿತು. ಇದರಿಂದಾಗಿ ಷೇರು ಮಾರುಕಟ್ಟೆ ಸೂಚ್ಯಂಕಗಳು ಏರುಮುಖವಾಗಿವೆ ಎಂದು ಕೆಲವು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ವಿಸ್ಟ್ರಾನ್' ಪುನರಾರಂಭ: ಹೆಚ್ಚಿನ ಭದ್ರತೆ

ಪ್ರಜಾವಾಣಿ ವಾರ್ತೆ

ಕೋಲಾರ: ಆ್ಯಪಲ್ ಐ-ಫೋನ್ ತಯಾರಿಸುವ ನರಸಾಪುರ ಕೈಗಾರಿಕಾ ಪ್ರದೇಶದ ವಿಸ್ಟ್ರಾನ್ ಇನ್ಫೋಕಾಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಘಟಕ ವಾರದ ಹಿಂದೆ ಪುನರಾರಂಭವಾಗಿದ್ದು, ಬಿಗಿ ಭದ್ರತೆಯೊಂದಿಗೆ ತಯಾರಿಕಾ ಚಟುವಟಿಕೆ ಆರಂಭಿಸಿದೆ.

ಸಕಾಲಕ್ಕೆ ಸಂಬಳ ನೀಡುತ್ತಿಲ್ಲ ಎಂದು ಆರೋಪಿಸಿ ಕಾರ್ಮಿಕರು 2020ರ ಡಿ.12ರಂದು ವಿಸ್ಟ್ರಾನ್ ಕಾರ್ಖಾನೆಯ ಮೇಲೆ ಕಲ್ಲು ತೂರಾಟ ನಡೆಸಿ, ಬೆಂಕಿ ಹಚ್ಚಿದ್ದರು. ಘಟನೆಯ ಬಳಿಕ ಕಂಪನಿಯ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿತ್ತು.

ಕಾರ್ಮಿಕರ ದಾಳಿಯಲ್ಲಿ ಹಾನಿಗೊಂಡಿದ್ದ ಕಂಪನಿಯ ಉತ್ಪಾದನಾ ವಿಭಾಗದ ಯಂತ್ರೋಪಕರಣಗಳನ್ನು ಮರು ಜೋಡಣೆ ಮಾಡಲಾಗಿದೆ. ಮೊಬೈಲ್ ಮತ್ತು ಮೊಬೈಲ್ ಬಿಡಿ ಭಾಗಗಳ ಉತ್ಪಾದನೆ ಆರಂಭವಾಗಿದೆ. ಪ್ರತಿನಿತ್ಯ ಮೂರು ಪಾಳಿಗಳಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.



ಕೋಲಾರ ತಾಲ್ಲೂಕಿನ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ವಿಸ್ಟ್ರಾನ್ ಇನ್ಫೋಕಾಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೊರ ನೋಟ.

ಕಂಪನಿಗೆ ಈ ಹಿಂದೆ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ನಿಯೋಜಿಸಿದ್ದ ಕ್ರಿಯೇಟಿವ್ ಎಂಜಿನಿಯರ್ಸ್, ಕ್ವೆಸ್ ಕಾರ್ಪ್, ಇನ್ನೋವಾ ಸೋರ್ಸ್, ಅಡೆಕ್ಕೊ ಗ್ರೂಪ್, ನೀಡ್ಸ್ ಮ್ಯಾನ್ ಪವರ್ ಸಪೋರ್ಟ್ ಸರ್ವಿಸಸ್, ರ‍್ಯಾನ್‌ಸ್ಟ್ಯಾಂಡ್ ಏಜೆನ್ಸಿಗಳಿಂದಲೇ ಸಿಬ್ಬಂದಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ.

ಕೋಲಾರ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆರು ಸಾವಿರ ಮಂದಿಯನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಸ್ಥಳೀಯ ಪೊಲೀಸರು ಕಾರ್ಮಿಕರ ಪೂರ್ವಾಪರ ಪರಿಶೀಲಿಸಿ ನಡತೆ ಪ್ರಮಾಣಪತ್ರ ನೀಡಿದ ನಂತರ ನೇಮಕಾತಿ ಮಾಡಿಕೊಳ್ಳಲಾಗಿದೆ.

ಹೆಚ್ಚಿನ ಭದ್ರತೆ: 43 ಎಕರೆ ವಿಸ್ತಾರವಾಗಿರುವ ಘಟಕದಲ್ಲಿ ಹೆಜ್ಜೆ ಹೆಜ್ಜೆಗೂ ಖಾಸಗಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕಾರ್ಮಿಕರನ್ನು ಕರೆದೊಯ್ಯುವ ಕಂಪನಿಯ ಪ್ರತಿ ವಾಹನಕ್ಕೂ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗಿದೆ. ಅಲ್ಲದೇ, ಕಂಪನಿ ಆವರಣದಲ್ಲೂ ಭದ್ರತಾ ಸಿಬ್ಬಂದಿಯ ಸಂಖ್ಯೆ ಹೆಚ್ಚಿಸಲಾಗಿದೆ.

ಕಾರ್ಮಿಕರ ವೇತನದಲ್ಲಿ ಸ್ವಲ್ಪ ಹೆಚ್ಚಳ ಮಾಡಿರುವ ಕಂಪನಿ, ಕೆಲಸದ ಅವಧಿಯನ್ನು 12 ತಾಸಿನಿಂದ 8 ತಾಸಿಗೆ ಇಳಿಸಿದೆ. ಜತೆಗೆ ವಾರದ ರಜೆ ಸೌಲಭ್ಯ ಕಲ್ಪಿಸಲಾಗಿದೆ.

ಈ ಹಿಂದೆ ಕಂಪನಿಯಲ್ಲಿ ಗುತ್ತಿಗೆ ಮತ್ತು ಕಾಯಂ ಕಾರ್ಮಿಕರಿಗೆ ಒಂದೇ ಕ್ಯಾಂಟೀನ್ ಇತ್ತು. ಇದೀಗ ಗುತ್ತಿಗೆ ಮತ್ತು ಕಾಯಂ ಕಾರ್ಮಿಕರಿಗೆ ಪ್ರತ್ಯೇಕ ಕ್ಯಾಂಟೀನ್ ವ್ಯವಸ್ಥೆ ಮಾಡಲಾಗಿದೆ.

'ಪುನರಾರಂಭದ ಬಳಿಕ ಕಾರ್ಯ ಸ್ಥಳದಲ್ಲಿ ಸಾಕಷ್ಟು ಸುಧಾರಣೆ ಆಗಿವೆ. ಸಂಬಳ ಹೆಚ್ಚಿಸಲಾಗಿದೆ. ಕೆಲಸದ ಅವಧಿ ಕಡಿಮೆ ಮಾಡಿರುವುದರಿಂದ ಕಾರ್ಯ ಒತ್ತಡವಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿರುವ ಭದ್ರತಾ ಸಿಬ್ಬಂದಿಯು ಹೆಜ್ಜೆ ಹೆಜ್ಜೆಗೂ ಹಿಂಬಾಲಿಸಿ ಬರುತ್ತಾರೆ' ಎಂದು ಕಾರ್ಮಿಕರು 'ಪ್ರಜಾವಾಣಿ'ಗೆ ತಿಳಿಸಿದರು.

ಚಿನ್ನದ ಬೆಲೆಯಲ್ಲಿ ಇಳಿಕೆ

ನವದೆಹಲಿ (ಪಿಟಿಐ): 10 ಗ್ರಾಂ ಚಿನ್ನದ ಬೆಲೆ ಗುರುವಾರ ₹ 358ರಷ್ಟು ಇಳಿಕೆ ಆಗಿದ್ದು, ಇಲ್ಲಿನ ಚಿನಿವಾರ ಪೇಟೆಯಲ್ಲಿ ₹ 45,959ಕ್ಕೆ ಮಾರಾಟವಾಗಿದೆ. ಕೆ.ಜಿ. ಬೆಳ್ಳಿ ಬೆಲೆಯು ₹ 151ರಷ್ಟು ಹೆಚ್ಚಳ ಆಗಿ ₹ 69,159ಕ್ಕೆ ಮಾರಾಟವಾಗಿದೆ.



ಚಿನ್ನದ ಬೆಲೆಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ಇಳಿಕೆಯು ದೇಶಿ ಮಾರುಕಟ್ಟೆಯ ಮೇಲೆಯೂ ಪ್ರಭಾವ ಬೀರಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಸಿದ್ದಾಪುರ		ಸಾಗರ	
ಬಂಟ್ವಾಳ		ಬಿಳಿಗೋಟು	21699-28701	ಬಿಳಿಗೋಟು	19099-28899
ಕೋಕ	10000-22500	ಚಾಲಿ	34899-38869	ಚಾಲಿ	29299-33609
ಹೊಸತು	23500-41000	ಕೋಕ	19000-28312	ಕೋಕ	16219-31569
ಹಳತು	42500-51000	ಕೆಂಪುಗೋಟು	22089-29469	ಕೆಂಪುಗೋಟು	13109-33699
ಚಿತ್ರದುರ್ಗ		ರಾಶಿ	38689-42109	ರಾಶಿ	32099-43009
ಅಪಿ	42700-43106	ತಟ್ಟಿಬೆಟ್ಟೆ	30289-39099	ಸಿಪ್ಪೆಗೋಟು	7389-18909
ಬೆಟ್ಟೆ	33039-33499	**ಯಲ್ಲಾಪುರ**		**ಶಿವಮೊಗ್ಗ ಎಪಿಎಂಸಿ**	
ಕೆಂಪುಗೋಟು	29219-29679	ಅಪಿ	47170-47936	ಬೆಟ್ಟೆ	42200-44200
ರಾಶಿ	42229-42669	ಬಿಳಿಗೋಟು	21012-30212	ಗೊರಬಲು	16110-32269
ಕುಮಟಾ		ಕೋಕ	19312-28612	ರಾಶಿ	38309-42809
ಚಿಪ್ಪು	23109-29869	ಚಾಲಿ	31689-41211	ಸರಕು	46009-74200
ಕೋಕ	18099-28109	ಕೆಂಪುಗೋಟು	24899-34100	**ರಾಮನಗರ ರೇಷ್ಮೆ**	
ಹಳೆಚಾಲಿ	35269-41699	ರಾಶಿ	39991-46926	ಮಿಶ್ರತಳಿ (ಸಿ.ಬಿ)	288-401
ಹೊಸಚಾಲಿ	31924-36399	ತಟ್ಟಿಬೆಟ್ಟೆ	34969-39718	ದ್ವಿತಳಿ (ಬಿ.ವಿ)	338-510

ಎಪಿಎಂಸಿಗಳಲ್ಲಿ ತೆಂಗಿನಕಾಯಿ ದರ ಸ್ಥಿರ ಖಾಸಗಿ ವರ್ತಕರಿಂದ ₹40ಕ್ಕೆ ಖರೀದಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿಯ ತೆಂಗಿನ ಕಾಯಿಗೆ ಇದೀಗ ಖಾಸಗಿ ವಲಯದಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಆದರೆ, ಎಪಿಎಂಸಿಗಳಲ್ಲಿ ಮಾತ್ರ ದರ ಯಥಾಸ್ಥಿತಿಯಲ್ಲಿ ಮುಂದುವರಿದಿದೆ. ಮಂಗಳೂರು ಎಪಿಎಂಸಿಯಲ್ಲಿ ಗುರುವಾರ 1ನೇ ವರ್ಗದ ತೆಂಗಿನಕಾಯಿಗೆ ಗರಿಷ್ಠ ಬೆಲೆ ಟನ್‌ಗೆ ₹ 30 ಸಾವಿರವಿದ್ದರೆ, 2ನೇ ದರ್ಜೆಯ ಕಾಯಿಗೆ ₹ 25 ಸಾವಿರ ಬೆಲೆ ಇತ್ತು.

ಆದರೆ, ಖಾಸಗಿ ವರ್ತಕರು ನೇರವಾಗಿ ರೈತರಿಂದ ಖರೀದಿ ಮಾಡುತ್ತಿದ್ದು, ಕೆ.ಜಿ.ಗೆ ₹ 40ರ ದರದಲ್ಲಿ ಖರೀದಿಸುತ್ತಿದ್ದಾರೆ. ಚಿಲ್ಲರೆ ವ್ಯಾಪಾರಿಗಳು ₹50–₹55 ರಂತೆ ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಹೆಚ್ಚಿನ ರೈತರು ಖಾಸಗಿಯವರಿಗೆ ತೆಂಗಿನ ಕಾಯಿ ಮಾರಾಟ ಮಾಡಲು ಆಸಕ್ತಿ ತೋರುತ್ತಿದ್ದಾರೆ.

'ಬೇರೆ ಜಿಲ್ಲೆ ಹಾಗೂ ರಾಜ್ಯಗಳಿಂದ ಬರುತ್ತಿದ್ದ ಎಳನೀರು ಕಾಯಿಗಳೂ ಕಡಿಮೆಯಾಗಿದ್ದು, ಸ್ಥಳೀಯವಾಗಿ ಬೆಳೆಯುವ ಕಾಯಿಗಳನ್ನೇ ಎಳನೀರು ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದಾರೆ. ಅದರಲ್ಲೂ ಬಹುತೇಕ ರೈತರು ಎಳನೀರು ಕಾಯಿಯಲ್ಲೇ ಅಧಿಕ ಲಾಭ ಎಂಬ ಕಾರಣಕ್ಕೆ ಬಲಿಯುವ ಮುನ್ನವೇ ಮಾರಾಟ ಮಾಡುತ್ತಿದ್ದಾರೆ' ಎಂದು ಪುತ್ತೂರಿನ ರೈತ ಶಶಿಧರ್ ಹೇಳುತ್ತಾರೆ.

'ತೆಂಗಿನ ಎಣ್ಣೆಯ ಬಳಕೆಯೂ ಹೆಚ್ಚಾಗಿದ್ದರಿಂದ ಬಲಿತ ಕಾಯಿಗಳನ್ನು ಎಣ್ಣೆ ಮಾಡುವುದಕ್ಕೆ ಬಳಸಲಾಗುತ್ತಿದೆ. ಬಯಲು ಸೀಮೆಯಿಂದ ತೆಂಗಿನ ಕಾಯಿ ಪೂರೈಕೆ ಕಡಿಮೆಯಾಗಿದೆ. ಹೀಗಾಗಿ ಕರಾವಳಿಯಲ್ಲಿ ಬೆಲೆ ತುಸು ಹೆಚ್ಚಾಗಿದೆ' ಎನ್ನುವುದು ಸಗಟು ವ್ಯಾಪಾರಿ ಅಜೀಜ್ ಅಹ್ಮದ್ ಹೇಳುವ ಮಾತು.

ಹೊರರಾಜ್ಯಗಳಿಗೆ ಪೂರೈಕೆ: 'ಕರಾವಳಿಯ ತೆಂಗಿನಲ್ಲಿ ಎಣ್ಣೆಯ ಅಂಶ ಹೆಚ್ಚಿರುವುದರಿಂದ ಇಲ್ಲಿನ ಕಾಯಿಗಳನ್ನು ಹೊರಗಿನ ರಾಜ್ಯಗಳಿಗೆ ಪೂರೈಕೆ ಮಾಡಲಾಗುತ್ತಿದೆ' ಎನ್ನುತ್ತಾರೆ ರಾಜ್ಯ ರೈತ ಸಂಘ, ಹಸಿರು ಸೇನೆ ಸಂಘಟನಾ ಕಾರ್ಯದರ್ಶಿ ರವಿಕಿರಣ ಪುಣಚ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎರಡೇ ದಿನಗಳಲ್ಲಿ ಮುಗಿದ ಮೂರನೇ ಟೆಸ್ಟ್ ಪಂದ್ಯ: ಇಂಗ್ಲೆಂಡ್ ಎದುರಿನ ಸರಣಿಯಲ್ಲಿ 2–1ರ ಮುನ್ನಡೆ ಗಳಿಸಿದ ಭಾರತ ತಂಡ

ಅಶ್ವಿನ್–ಅಕ್ಷರ್ ದರ್ಬಾರ್: ರೂಟ್ ಬಳಗ ತತ್ತರ



ವಿಕೆಟ್ ಗಳಿಸಿದ ಅಕ್ಷರ್ ಪಟೇಲ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಅಹಮದಾಬಾದ್: ಎರಡು ದಿನಗಳ ಆಟದಲ್ಲಿ ಒಟ್ಟು 30 ವಿಕೆಟ್‌ಗಳ ಪತನ. ಅದರಲ್ಲಿ 28 ವಿಕೆಟ್ ಸ್ಪಿನ್ನರ್‌ಗಳ ಪಾಲು!

ಇದು ಗುರುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮುಕ್ತಾಯವಾದ ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಪಂದ್ಯದಲ್ಲಿ ಪಿಚ್ ವರ್ತಿಸಿದ ರೀತಿಗೆ ಸಾಕ್ಷಿ. ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಆಫ್ ಸ್ಪಿನ್ನರ್ ಆರ್. ಅಶ್ವಿನ್ ಅವರ ಸ್ಪಿನ್ ಮೋಡಿಯ ಮುಂದೆ ಇಂಗ್ಲೆಂಡ್ ತಂಡ 10 ವಿಕೆಟ್‌ಗಳಿಂದ ಸೋತಿತು. ಆತಿಥೇಯ ಬಳಗ ಎರಡನೇ ದಿನವೇ ಜಯಭೇರಿ ಮೊಳಗಿಸಿತು.

ಸ್ಥಳೀಯ ಹೀರೊ ಅಕ್ಷರ್ ಪಟೇಲ್ (32ಕ್ಕೆ5) ಮತ್ತು ಆಫ್‌ಸ್ಪಿನ್ನರ್ ಆರ್. ಅಶ್ವಿನ್ (48ಕ್ಕೆ4) ಅವರಿಬ್ಬರ ದಾಳಿಯ ಮುಂದೆ ಇಂಗ್ಲೆಂಡ್ ಬಳಗವು ದೂಳೀಪಟವಾಯಿತು. ವಿಶ್ವದ ಅತಿ ದೊಡ್ಡ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಹಗಲು–ರಾತ್ರಿ ಪಂದ್ಯದಲ್ಲಿ ಗೆದ್ದ ವಿರಾಟ್ ಕೊಹ್ಲಿ ಬಳಗ ನಾಲ್ಕು ಪಂದ್ಯಗಳ ಸರಣಿಯಲ್ಲಿ 2-1ರ ಮುನ್ನಡೆ ಸಾಧಿಸಿತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಸನಿಹ ಸಾಗಿತು.

ಬುಧವಾರ ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಅಕ್ಷರ್ ಪಟೇಲ್ ಮೋಡಿಯ ಮುಂದೆ ಮೊದಲ ಇನಿಂಗ್ಸ್‌ನಲ್ಲಿ 112 ರನ್‌ಗಳಿಗೆ ಆಲೌಟ್ ಆಗಿತ್ತು. ದಿನದಾಟದ ಕೊನೆಗೆ ಭಾರತ ತಂಡವು ಮೂರು ವಿಕೆಟ್ ನಷ್ಟಕ್ಕೆ 99 ರನ್ ಗಳಿಸಿತ್ತು. ಎರಡನೇ ದಿನದಾಟದಲ್ಲಿ ಇಂಗ್ಲೆಂಡ್‌ನ ಸಾಂದರ್ಭಿಕ ಬೌಲರ್, ನಾಯಕ ಜೋ ರೂಟ್ ಕೇವಲ ಎಂಟು ರನ್‌ಗಳನ್ನು ನೀಡಿ ಐದು ವಿಕೆಟ್ ಕಬಳಿಸಿದ್ದರಿಂದ ಭಾರತ ತಂಡವು 145 ರನ್‌ಗಳಿಗೆ ಆಲೌಟ್ ಆಯಿತು. ಕೇವಲ 33 ರನ್‌ಗಳ ಮುನ್ನಡೆ ಗಳಿಸಿತು.

ಮುಳುವಾದ ನೇರ ಎಸೆತಗಳು: ಮೊದಲ ದಿನದಿಂದಲೇ ದೂಳು ಚಿಮ್ಮುತ್ತಿದ್ದ ಪಿಚ್‌ನಲ್ಲಿ ಚೆಂಡು ಹೆಚ್ಚು ಎತ್ತರ ಪುಟಿಯುತ್ತಿರಲಿಲ್ಲ ಮತ್ತು ಮೊನಚಾದ ತಿರುವುಗಳನ್ನೂ ಪಡೆಯುತ್ತಿರಲಿಲ್ಲ. ಆದ್ದರಿಂದ ವಿರಾಟ್ ಕೊಹ್ಲಿ ಅವರು ಭಾರತದ ಮಧ್ಯಮವೇಗಿಗಳ ಕೈಗೆ ಚೆಂಡನ್ನೇ ಕೊಡಲಿಲ್ಲ.

ಎರಡನೇ ಇನಿಂಗ್ಸ್‌ನ ಮೊದಲ ಓವರ್ ಬೌಲಿಂಗ್ ಮಾಡಿದ ಅಕ್ಷರ್ ಮೊದಲ ಮತ್ತು ಮೂರನೇ ಎಸೆತದಲ್ಲಿ ಕ್ರಮವಾಗಿ ಜ್ಯಾಕ್ ಕ್ರಾಲಿ ಹಾಗೂ ಜಾನಿ ಬೆಸ್ಟೋ ವಿಕೆಟ್ ಉರುಳಿಸಿದರು. ಮೊದಲ ಇನಿಂಗ್ಸ್‌ನಲ್ಲಿ ಪ್ರಯೋಗಿಸಿದ್ದಂತಹ ನೇರ ಎಸೆತಗಳನ್ನೇ ದ್ವಿತೀಯ ಇನಿಂಗ್ಸ್‌ನಲ್ಲಿಯೂ ಹಾಕಿದರು. ಇನ್ನೊಂದು ತುದಿಯಿಂದ ಅಶ್ವಿನ್ ಕೂಡ ಅದೇ ತಂತ್ರ ಅನುಸರಿಸಿದರು.

ಒಂಬತ್ತನೇ ಓವರ್‌ನಲ್ಲಿ ಡ್ಯಾಮ್ ಸಿಬ್ಲಿ ಕಟ್ ಮಾಡಲು ಪ್ರಯತ್ನಿಸಿದ ಅಕ್ಷರ್ ಎಸೆತವು ವಿಕೆಟ್‌ಕೀಪರ್ ರಿಷಭ್ ಪಂತ್‌ಗೆ ಕ್ಯಾಚ್ ಆಯಿತು. ಈ ಹಂತದಲ್ಲಿ ನಾಯಕ ಜೋ ರೂಟ್ (19 ರನ್) ಮತ್ತು ಬೆನ್ ಸ್ಟೋಕ್ಸ್ (25 ರನ್) ಒಂದಿಷ್ಟು ದಿಟ್ಟತನ ತೋರುವ ಪ್ರಯತ್ನ ಮಾಡಿದರು. ಇಬ್ಬರಿಗೂ ಕೆಲಕಾಲ ಅದೃಷ್ಟವೂ ಜೊತೆಗೂಡಿತು.ಏಕೆಂದರೆ, ಇಬ್ಬರೂ ತಲಾ ಒಂದು ಬಾರಿ ಯುಡಿಆರ್‌ಎಸ್‌ನಲ್ಲಿ ಜೀವದಾನ ಪಡೆದರು.

ಆದರೂ ಅಶ್ವಿನ್ ಚಾಣಾಕ್ಷ ಸ್ಪಿನ್‌ಗೆ ಬೆನ್ ಸ್ಟೋಕ್ಸ್ ಎಲ್‌ಬಿ ಬಲೆಗೆ ಬಿದ್ದರು. 31 ರನ್‌ಗಳ ಜೊತೆಯಾಟವು ಮುರಿದುಬಿತ್ತು. ಜೋ ರೂಟ್ ಅವರ ವಿಕೆಟ್ ಅನ್ನು ಅಕ್ಷರ್ ಕಬಳಿಸಿದರು. ನಂತರ ಒಲಿ ಪೋಪ್ (12 ರನ್) ಬಿಟ್ಟರೆ ಉಳಿದವರಾರೂ ಹೆಚ್ಚು ಹೊತ್ತು ನಿಲ್ಲಲಿಲ್ಲ. 24ನೇ ಓವರ್‌ನಲ್ಲಿ ಜೋಫ್ರಾ ಆರ್ಚರ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ 400ನೇ ವಿಕೆಟ್ ಪಡೆದ ಸಾಧನೆ ಮಾಡಿದರು.

ಕೊನೆಯ ಬ್ಯಾಟ್ಸ್‌ಮನ್ ಜೇಮ್ಸ್ ಆ್ಯಂಡರ್ಸನ್ ಅವರ ವಿಕೆಟ್ ಅನ್ನು ಎಡಗೈ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ತಮ್ಮ ಬುಟ್ಟಿಗೆ ಹಾಕಿಕೊಂಡರು.

ಅಲ್ಪಮೊತ್ತದ ಗುರಿ ಬೆನ್ನತ್ತಿದ್ದ ಭಾರತವನ್ನು ರೋಹಿತ್ ಶರ್ಮಾ (ಔಟಾಗದೆ 25) ಮತ್ತು ಶುಭಮನ್ ಗಿಲ್ (ಔಟಾಗದೆ 15) ನಿರಾಯಾಸವಾಗಿ ಗೆಲುವಿನ ದಡ ಸೇರಿಸಿದರು. ವಿಜಯದ ಹೊಡೆತದಲ್ಲಿ ಸಿಕ್ಸರ್ ಬಾರಿಸಿದ ರೋಹಿತ್ ಮಿಂಚಿದರು.

ಮೊದಲ ಇನಿಂಗ್ಸ್‌ನಲ್ಲಿ ರೋಹಿತ್ (66 ರನ್) ಅರ್ಧಶತಕ ಗಳಿಸಿದರು.



ವಿರಾಟ್ ಕೊಹ್ಲಿ ಅಭಿಮಾನಿ – ರಾಯಿಟರ್ಸ್ ಚಿತ್ರ

ಪಿಚ್ ಚೆನ್ನಾಗಿದೆ; ಬ್ಯಾಟಿಂಗ್ ಉತ್ತಮವಾಗಿರಲಿಲ್ಲ: ಕೊಹ್ಲಿ

ಅಹಮದಾಬಾದ್: ಮೊಟೇರಾ ಕ್ರೀಡಾಂಗಣದ ಪಿಚ್ ಕುರಿತು ಕೆಲವು ಮಾಜಿ ಕ್ರಿಕೆಟಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಆದರೆ, ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ, ‘ಪಿಚ್ ಉತ್ತಮವಾಗಿಯೇ ಇದೆ. ಆದರೆ, ಬ್ಯಾಟ್ಸ್‌ಮನ್‌ಗಳು ಕೌಶಲಭರಿತ ಮತ್ತು ಉತ್ತಮ ದರ್ಜೆಯ ಆಟವಾಡಲಿಲ್ಲ’ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ನಾವು ಮೊದಲ ಇನಿಂಗ್ಸ್‌ನಲ್ಲಿ 100ಕ್ಕೆ ಮೂರು ವಿಕೆಟ್ ಕಳೆದುಕೊಂಡಿದ್ದೆವು. ಆದರೆ, 150ಕ್ಕೆ ಮೊತ್ತ ಮುಟ್ಟುವ ಮುನ್ನವೇ ಆಲೌಟ್ ಆದೆವು. ಇದು ಬ್ಯಾಟಿಂಗ್ ವಿಭಾಗದ ದೌರ್ಬಲ್ಯ. ಬ್ಯಾಟಿಂಗ್ ಮಾಡಲು ಈ ಪಿಚ್ ಉತ್ತಮವಾಗಿದೆ’ ಎಂದು ಕೊಹ್ಲಿ ಹೇಳಿದರು.

ರೂಟ್ ಅಭಿಪ್ರಾಯ: ಪಿಚ್ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನಿರ್ಧರಿಸಬೇಕು. ಆಟಗಾರರಲ್ಲ ಎಂದು ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಹೇಳಿದರು.

ಪಿಚ್ ಬಗ್ಗೆ ಯಾವುದೇ ಆಕ್ಷೇಪ ವ್ಯಕ್ತಪಡಿಸಲು ನಿರಾಕರಿಸಿದ ಅವರು, ‘ಇದು ಸವಾಲಿನ ಅಂಗಣವಾಗಿತ್ತು. ಉಭಯ ತಂಡಗಳ ಬ್ಯಾಟ್ಸ್‌ಮನ್‌ಗಳು ಅದಕ್ಕೆ ಹೊಂದಿಕೊಂಡು ಆಡಲಿಲ್ಲ’ ಎಂದರು.

ಟೆಸ್ಟ್‌ಗೆ ಸೂಕ್ತವಲ್ಲ: ಮೊಟೇರಾ ಪಿಚ್ ಟೆಸ್ಟ್ ಕ್ರಿಕೆಟ್‌ಗೆ ಸೂಕ್ತವಲ್ಲ ಎಂದು ಮಾಜಿ ಕ್ರಿಕೆಟಿಗ ವಿವಿಎಸ್ ಲಕ್ಷ್ಮಣ್ ಮತ್ತು ಹರಭಜನ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

ಆದರೆ ಇದಕ್ಕೆ ಪ್ರತಿಕ್ರಿಯಿಸಿರುವ ಸುನಿಲ್ ಗಾವಸ್ಕರ್, ‘ಬ್ಯಾಟ್ಸ್‌ಮನ್‌ಗಳು ಸ್ವಯಂ ಲೋಪಗಳಿಂದ ಔಟಾಗಿದ್ದಾರೆ. ಪಿಚ್ ನಲ್ಲಿ ಯಾವ ಕೆಡಕೂ ಇಲ್ಲ’ ಎಂದಿದ್ದಾರೆ.

ಸ್ಕೋರ್‌ಕಾರ್ಡ್

ಇಂಗ್ಲೆಂಡ್ (ಮೊದಲ ಇನಿಂಗ್ಸ್) 112 (48.4 ಓವರ್‌ಗಳಲ್ಲಿ)

ಭಾರತ (ಮೊದಲ ಇನಿಂಗ್ಸ್) 145 (53.2 ಓವರ್‌ಗಳಲ್ಲಿ) (ಬುಧವಾರ 33 ಓವರ್‌ಗಳಲ್ಲಿ 3ಕ್ಕೆ 99)

ರೋಹಿತ್ ಶರ್ಮಾ ಎಲ್‌ಬಿಡಬ್ಲ್ಯು ಬಿ ಜ್ಯಾಕ್ ಲೀಚ್	66
ಅಜಿಂಕ್ಯ ರಹಾನೆ ಎಲ್‌ಬಿಡಬ್ಲ್ಯು ಬಿ ಜ್ಯಾಕ್ ಲೀಚ್	7
ರಿಷಭ್ ಪಂತ್ ಸಿ ಬೆನ್ ಫೋಕ್ಸ್ ಬಿ ಜೋ ರೂಟ್	1
ಆರ್. ಅಶ್ವಿನ್ ಸಿ ಕ್ರಾಲಿ ಬಿ ಜೋ ರೂಟ್	17
ವಾಷಿಂಗ್ಟನ್ ಸುಂದರ್ ಬಿ ಜೋ ರೂಟ್	0
ಅಕ್ಷರ್ ಪಟೇಲ್ ಸಿ ಡಾಮ್ ಸಿಬ್ಲಿ ಬಿ ಜೋ ರೂಟ್	0
ಇಶಾಂತ್ ಶರ್ಮಾ ಔಟಾಗದೆ	10
ಜಸ್‌ಪ್ರೀತ್ ಬೂಮ್ರಾ ಎಲ್‌ಬಿಡಬ್ಲ್ಯು ಜೋ ರೂಟ್	1
ಇತರೆ (ಬೈ 2, ಲೆಗ್‌ಬೈ 2, ವೈಡ್ 1)	5

ವಿಕೆಟ್ ಪತನ: 4-114 (ಅಜಿಂಕ್ಯ ರಹಾನೆ, 38.2), 5-115 (ರೋಹಿತ್ ಶರ್ಮಾ, 40.1), 6-117 (ರಿಷಭ್ ಪಂತ್, 41.1), 7-125 (ವಾಷಿಂಗ್ಟನ್ ಸುಂದರ್, 45.1), 8-125 (ಅಕ್ಷರ್ ಪಟೇಲ್, 45.3), 9-134 (ಆರ್. ಅಶ್ವಿನ್, 49.2), 10-145 (ಜಸ್‌ಪ್ರೀತ್ ಬೂಮ್ರಾ, 53.2)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 13-8-20-0, ಸ್ಟುವರ್ಟ್ ಬ್ರಾಡ್ 6-1-16-0, ಜೊಫ್ರಾ ಆರ್ಚರ್ 5-2-24-1, ಜ್ಯಾಕ್ ಲೀಚ್ 20-2-54-4, ಬೆನ್ ಸ್ಟೋಕ್ಸ್ 3-0-19-0, ಜೋ ರೂಟ್ 6.2-3-8-5

ಇಂಗ್ಲೆಂಡ್ (ಎರಡನೇ ಇನಿಂಗ್ಸ್) 81 (30.4 ಓವರ್‌ಗಳಲ್ಲಿ)

ಜಾಕ್ ಕ್ರಾವ್ಲಿ ಬಿ ಅಕ್ಷರ್ ಪಟೇಲ್	0
ಡಾಮ್ ಸಿಬ್ಲಿ ಸಿ ರಿಷಭ್ ಪಂತ್ ಬಿ ಅಕ್ಷರ್ ಪಟೇಲ್	7
ಜಾನಿ ಬೆಸ್ಟೊ ಬಿ ಅಕ್ಷರ್ ಪಟೇಲ್	0
ಜೋ ರೂಟ್ ಎಲ್‌ಬಿಡಬ್ಲ್ಯು ಅಕ್ಷರ್ ಪಟೇಲ್	19
ಬೆನ್ ಸ್ಟೋಕ್ಸ್ ಎಲ್‌ಬಿಡಬ್ಲ್ಯು ಆರ್.ಅಶ್ವಿನ್	25
ಒಲಿ ಪೋಪ್ ಬಿ ಆರ್.ಅಶ್ವಿನ್	12
ಬೆನ್ ಫೋಕ್ಸ್ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	8
ಜೊಫ್ರಾ ಆರ್ಚರ್ ಎಲ್‌ಬಿಡಬ್ಲ್ಯು ಬಿ ಆರ್.ಅಶ್ವಿನ್	0
ಜ್ಯಾಕ್ ಲೀಚ್ ಸಿ ಅಜಿಂಕ್ಯ ರಹಾನೆ ಬಿ ಆರ್.ಅಶ್ವಿನ್	9
ಸ್ಟುವರ್ಟ್ ಬ್ರಾಡ್ ಔಟಾಗದೆ	1
ಜೇಮ್ಸ್ ಆ್ಯಂಡರ್ಸನ್ ಸಿ ರಿಷಭ್ ಪಂತ್ ಬಿ ವಾಷಿಂಗ್ಟನ್ ಸುಂದರ್	0

ವಿಕೆಟ್ ಪತನ: 1-0 (ಜ್ಯಾಕ್ ಕ್ರಾವ್ಲಿ, 0.1), 2-0 (ಜಾನಿ ಬೆಸ್ಟೊ, 0.3), 3-19 (ಡಾಮ್ ಸಿಬ್ಲಿ, 8.3), 4-50 (ಬೆನ್ ಸ್ಟೋಕ್ಸ್, 17.2), 5-56 (ಜೋ ರೂಟ್, 18.5), 6-66 (ಒಲಿ ಪೋಪ್, 21.6), 7-68 (ಜೊಫ್ರಾ ಆರ್ಚರ್, 23.2), 8-80 (ಬೆನ್ ಫೋಕ್ಸ್, 28.2), 9-80 (ಜಾಕ್ ಲೀಚ್, 29.4), 10-81 (ಜೇಮ್ಸ್ ಆ್ಯಂಡರ್ಸನ್, 30.4)

ಬೌಲಿಂಗ್: ಅಕ್ಷರ್ ಪಟೇಲ್ 15-0-32-5, ಆರ್. ಅಶ್ವಿನ್ 15-3-48-4, ವಾಷಿಂಗ್ಟನ್ ಸುಂದರ್ 0.4-0-1-1

ಭಾರತ (ಎರಡನೇ ಇನಿಂಗ್ಸ್) ವಿಕೆಟ್ ನಷ್ಟವಿಲ್ಲದೆ 49 (7.4 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಔಟಾಗದೆ	25
ಶುಭಮನ್ ಗಿಲ್ ಔಟಾಗದೆ	15
ಇತರೆ (ಬೈ 8, ಲೆಗ್‌ಬೈ 1)	9

ಬೌಲಿಂಗ್: ಜಾಕ್ ಲೀಚ್ 4-1-15-0, ಜೋ ರೂಟ್ 3.4-0-25-0

ಫಲಿತಾಂಶ: ಭಾರತಕ್ಕೆ 10 ವಿಕೆಟ್‌ಗಳ ಗೆಲುವು; 4 ಪಂದ್ಯಗಳ ಸರಣಿಯಲ್ಲಿ 2–1 ಮುನ್ನಡೆ

ಪಂದ್ಯಶ್ರೇಷ್ಠ: ಅಕ್ಷರ್ ಪಟೇಲ್

ಮುಂದಿನ ಪಂದ್ಯ: ಮಾರ್ಚ್ 4ರಿಂದ, ಅಹಮದಾಬಾದ್‌ನಲ್ಲಿ

ಮೂರನೇ ಅಂಪೈರ್ ವಿರುದ್ಧ ಇಂಗ್ಲೆಂಡ್ ಅಸಮಾಧಾನ

ಅಹಮದಾಬಾದ್: ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಮತ್ತು ಮುಖ್ಯ ಕೋಚ್ ಕ್ರಿಸ್ ಸಿಲ್ವರ್‌ವುಡ್ ಅವರು ಮೊಟೇರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೂರನೇ ಅಂಪೈರ್ ನೀಡಿದ ತೀರ್ಪು ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

’ಪಂದ್ಯದ ರೆಫರಿ ಜಾವಗಲ್ ಶ್ರೀನಾಥ್ ಅವರೊಂದಿಗೆ ಈ ಕುರಿತು ನಾಯಕ ಮತ್ತು ಕೋಚ್ ಚರ್ಚಿಸಿದ್ದಾರೆ‘ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಪ್ರಕಟಣೆಯಲ್ಲಿ ತಿಳಿಸಿದೆ.

’ಮೂರನೇ ಅಂಪೈರ್ ನೀಡುವ ತೀರ್ಪುಗಳಲ್ಲಿ ಸ್ಥಿರತೆ ಇರಲಿಲ್ಲ. ಈ ಪಿಚ್‌ನಲ್ಲಿ ಫೀಲ್ಡ್ ಅಂಪೈರ್‌ಗಳಿಗೆ ತೀರ್ಮಾನ ತೆಗೆದುಕೊಳ್ಳಲು ಇದ್ದ ಸವಾಲುಗಳು ಅರಿವು ಇದೆ ಎಂದು ರೂಟ್ ಮತ್ತು ಸಿಲ್ವರ್ ವುಡ್ ರೆಫರಿಗೆ ತಿಳಿಸಿದ್ದಾರೆ‘ ಎಂದು ಹೇಳಲಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದ ಇಂಗ್ಲೆಂಡ್ ಆರಂಭಿಕ ಬ್ಯಾಟ್ಸ್‌ಮನ್ ಜ್ಯಾಕ್ ಕ್ರಾಲಿ ಕೂಡ ಬುಧವಾರ ರಾತ್ರಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ್ದರು.

’ನಾವು ಬ್ಯಾಟಿಂಗ್ ಮಾಡುವಾಗ ಮರುಪರಿಶೀಲನೆ ಮನವಿಗಳಲ್ಲಿ ಮೂರನೇ ಅಂಪೈರ್ ಐದಾರು ಆಯಾಮಗಳಲ್ಲಿ ಪರಿಶೀಲಿಸುತ್ತಿದ್ದರು. ಆದರೆ, ಅದೇ ನಮ್ಮ ಫೀಲ್ಡಿಂಗ್ ಇದ್ದಾಗ ಕೇಳಿದ ಮನವಿಗಳಲ್ಲಿ ಒಂದೇ ಆಯಾಮದಲ್ಲಿ ಪರಿಶೀಲನೆ ನಡೆಯುತ್ತಿತ್ತು. ಇದರಿಂದ ನಮಗೆ ಹತಾಶೆಯಾಗಿದೆ. ಔಟ್ ಅಥವಾ ನಾಟೌಟ್ ಬಗ್ಗೆ ನಾನು ಹೇಳುವುದಿಲ್ಲ. ಆದರೆ, ಪರಿಶೀಲನೆ ಮಾಡುವ ಪ್ರಕ್ರಿಯೆ ಒಂದೇ ತೆರನಾಗಿರಬೇಕು‘ ಎಂದು ಕ್ರಾಲಿ ಹೇಳಿದ್ದರು.

ಭಾರತದ ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಕ್ಯಾಚ್ ಪಡೆದ ಕುರಿತು ಬೆನ್ ಸ್ಟೋಕ್ಸ್ ಅರ್ಪಿಸಿದ್ದ ಮನವಿ ಮತ್ತು ರೋಹಿತ್ ಶರ್ಮಾ ಅವರನ್ನು ಸ್ಟಂಪಿಂಗ್ ಮಾಡಿದ್ದ ವಿಕೆಟ್‌ಕೀಪರ್ ಬೆನ್ ಫೋಕ್ಸ್ ಮನವಿಗಳಲ್ಲಿ ಮೂರನೇ ಅಂಪೈರ್ ಸಿ. ಶಂಸುದ್ದೀನ್ ನಾಟೌಟ್ ನೀಡಿದ್ದರು. ಈ ಎರಡೂ ತೀರ್ಪುಗಳ ಬಗ್ಗೆಯೂ ಇಂಗ್ಲೆಂಡ್ ಅಸಮಾಧಾನ ವ್ಯಕ್ತಪಡಿಸಿದೆ.

ಡಬ್ಲ್ಯುಟಿಸಿ ಫೈನಲ್: ಭಾರತಕ್ಕೆ ಅವಕಾಶ, ಇಂಗ್ಲೆಂಡ್‌ಗೆ ನಿರಾಶೆ

ಅಹಮದಾಬಾದ್: ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪ್ರವೇಶದ ಹೊಸ್ತಿಲಿಗೆ ಬಂದು ನಿಂತಿದೆ. ಆದರೆ ಇಂಗ್ಲೆಂಡ್ ತಂಡದ ಕನಸು ಕಮರಿದೆ.



ಜೋ ರೂಟ್

ಜೂನ್‌ನಲ್ಲಿ ಲಾರ್ಡ್ಸ್‌ನಲ್ಲಿ ಫೈನಲ್ ಪಂದ್ಯ ನಡೆಯಲಿದೆ. ನ್ಯೂಜಿಲೆಂಡ್ ತಂಡವು ಈಗಾಗಲೇ ಅರ್ಹತೆ ಗಳಿಸಿದೆ.

ಇಂಗ್ಲೆಂಡ್ ಎದುರಿನ ಸರಣಿಯ ಎರಡು ಪಂದ್ಯಗಳನ್ನು ಗೆದ್ದಿರುವ ಭಾರತ ತಂಡವು ಶೇ 71 ಪಾಯಿಂಟ್‌ಗಳ ಆಧಾರದಲ್ಲಿ ಡಬ್ಲುಟಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಶೇ 64 ಅಂಕ ಗಳಿಸಿರುವ ಇಂಗ್ಲೆಂಡ್ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

’ಭಾರತದ ಎದುರು ಮೂರನೇ ಟೆಸ್ಟ್‌ನಲ್ಲಿ ಸೋತ ನಂತರ ಇಂಗ್ಲೆಂಡ್ ತಂಡವು ಡಬ್ಲ್ಯುಟಿಸಿ ಫೈನಲ್ ಪ್ರವೇಶದ ಅವಕಾಶಗಳು ಕ್ಷೀಣಿಸಿವೆ’ ಎಂದು ಐಸಿಸಿ ತಿಳಿಸಿದೆ.

ಸರಣಿಯಲ್ಲಿ ಉಳಿದಿರುವ ಇನ್ನೊಂದು ಪಂದ್ಯದಲ್ಲಿ ಭಾರತವು ಡ್ರಾ ಅಥವಾ ಗೆಲುವು ಸಾಧಿಸಬೇಕು. ಒಂದೊಮ್ಮೆ ಸೋತರೆ, ಸದ್ಯ ಮೂರನೇ ಸ್ಥಾನದಲ್ಲಿರುವ ಆಸ್ಟ್ರೇಲಿಯಾ ತಂಡಕ್ಕೆ (ಶೇ 69.2) ಮತ್ತೊಂದು ಅವಕಾಶ ಲಭಿಸಲಿದೆ.

ಐಎಸ್‌ಎಲ್: ಬಿಎಫ್‌ಸಿಗೆ ಸೋಲು

ವಾಸ್ಕೊ, ಗೋವಾ: ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಲೀಗ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ 2–3ರಲ್ಲಿ ಜೆಮ್ಶೆಡ್‌ಪುರ ಎಫ್‌ಸಿಗೆ ಮಣಿಯಿತು. ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ವಿರುದ್ಧ ನಾರ್ತ್ ಈಸ್ಟ್ ಯುನೈಟೆಡ್ ತಂಡ ಸೆಣಸಲಿದೆ.

ಚೆನ್ನೈ ರೇಸ್

‘ಏಂಜಲಿನೊ’ ಗೆಲ್ಲುವ ನಿರೀಕ್ಷೆ

ಲೀಡಿಂಗ್ ಓನರ್ ಪ್ಲೇಟ್ ಶುಕ್ರವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ‘ಏಂಜಲಿನೊ’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ವೀಟ್ ಹೋಮ್ 1, ತ್ರಿ ಆಫ್ ಎ ಕೈಂಡ್ 3, ಮೆರ್ರಿ ವಿನ್ 7
2ನೇ ರೇಸ್: ಒನ್ ಲೈಫ್ 4, ಹದಾರ್ 2, ವೆಲ್‌ಕಮ್ ವಿನ್ನರ್ 5
3ನೇ ರೇಸ್: ಸಾಂಗ್ ಆಫ್ ಗ್ಲೋರಿ 4, ನಗಡ 2, ಒಬೆರಾನ್ 3
4ನೇ ರೇಸ್: ಡೆಸಿಸಿವ್ 4, ಗ್ಯಾಂಟನ್, ಲೇಡಿ ಅಸ್ಟಾಟ್ 3
5ನೇ ರೇಸ್: ಮೈ ಟ್ರಯಂಪ್ 8, ಆಫ್ ಶೋರ್ ಬ್ರೀಝ್ 9, ಕೂಪ್ ಡೆ ಎಟಾಯ್ಸ್ 3
6ನೇ ರೇಸ್: ಏಂಜಲಿನೊ 1, ರೋಮನ್ ಸೆನೆಟರ್ 13, ನೆಕ್ಸ್‌ಬೆಟ್ 14
7ನೇ ರೇಸ್: ರಾಯಲ್ ಡ್ರೀಮ್ಸ್ 5, ಗ್ಲೋರಿಯಸ್ ಸನ್‌ಶೈನ್ 4, ಫೇರ್‌ವೆಲ್ 2
8ನೇ ರೇಸ್: ಅಟಕಾಮ 1, ಫ್ಯಾಬ್ಯುಲಸ್ ಶೋ 7, ಎಕ್ಸೈಟೆಟ್ ಸ್ಟಾರ್ 2

ಉತ್ತಮ ಬೆಟ್: ಅಟಕಾಮ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	4,5,6	7,8,9

ಪೃಥ್ವಿ ದಾಖಲೆ

ಜೈಪುರ(ಪಿಟಿಐ): ಮುಂಬೈ ತಂಡದ ಬ್ಯಾಟ್ಸ್‌ಮನ್ ಪೃಥ್ವಿ ಶಾ ಗುರುವಾರ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿ ವೈಯಕ್ತಿಕ ಗರಿಷ್ಠ ಸ್ಕೋರ್ ಗಳಿಸಿದ ಆಟಗಾರನಾದರು.

ಪುದುಚೇರಿ ಎದುರಿನ ಪಂದ್ಯದಲ್ಲಿ ಈ ಸಾಧನೆ ಮಾಡಿದ ಪೃಥ್ವಿ (ಅಜೇಯ 227; 152ಎಸೆತ, 31ಬೌಂಡರಿ, 5ಸಿಕ್ಸರ್) ಟೂರ್ನಿಯಲ್ಲಿ ದ್ವಿಶತಕ ಗಳಿಸಿದ ನಾಲ್ಕನೇ ಬ್ಯಾಟ್ಸ್‌ಮನ್. ಕೇರಳದ ಸಂಜು ಸ್ಯಾಮ್ಸನ್ 2019ರಲ್ಲಿ ಗಳಿಸಿದ್ದ ಅಜೇಯ 212 ರನ್‌ಗಳು ಇದುವರೆಗಿನ ಶ್ರೇಷ್ಠ ದಾಖಲೆಯಾಗಿತ್ತು. ಲಿಸ್ಟ್ ಎ ಮಾದರಿಯಲ್ಲಿ ಇದು ಪೃಥ್ವಿಯ ಮೊದಲ ದ್ವಿಶತಕವಾಗಿದೆ. ಗರಿಷ್ಠ ವೈಯಕ್ತಿಕ ಸ್ಕೋರ್ ಮಾಡಿದ ನಾಯಕನೆಂಬ ಹೆಗ್ಗಳಿಕೆಯೂ ಅವರದ್ದಾಯಿತು.

ಸೂರ್ಯ ಕುಮಾರ್ ಯಾದವ್ (133; 58ಎ, 22ಬೌಂ, 4ಸಿ) ಶತಕ ಗಳಿಸಿದರು. ಮುಂಬೈ ತಂಡವು 233 ರನ್‌ಗಳಿಂದ ಜಯಿಸಿತು.

ಒಟ್ಟಾರೆ ಲಿಸ್ಟ್ ಎ ಮಾದರಿಯಲ್ಲಿ ಇಂಗ್ಲೆಂಡ್‌ನ ಅಲಿ ಬ್ರೌನ್ (268 ರನ್) ಗರಿಷ್ಠ ವೈಯಕ್ತಿಕ ಸ್ಕೋರ್ ಗಳಿಸಿದ ದಾಖಲೆ ಹೊಂದಿದ್ದಾರೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕ–ಕೇರಳ ಹಣಾಹಣಿ ಇಂದು

ಸಮರ್ಥ್ –ರಾಬಿನ್ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಲದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನಲ್ಲಿ ಅತ್ಯಂತ ಕುತೂಹಲ ಕೆರಳಿಸುವ ನಿರೀಕ್ಷೆ ಇರುವ ಪಂದ್ಯವು ಶುಕ್ರವಾರ ನಡೆಯಲಿದೆ.

ಹಾಲಿ ಚಾಂಪಿಯನ್ ಕರ್ನಾಟಕ ತಂಡದ ನಾಯಕ ಆರ್. ಸಮರ್ಥ್ ಈಗ ಕೇರಳ ತಂಡವನ್ನು ಎದುರಿಸಬೇಕಿದೆ. ಸಚಿನ್ ಬೇಬಿ ನಾಯಕತ್ವದ ಕೇರಳ ತಂಡದಲ್ಲಿರುವ ಕನ್ನಡಿಗ ರಾಬಿನ್ ಉತ್ತಪ್ಪ ಅವರೇ ಸಮರ್ಥ್ ಬಳಗಕ್ಕೆ ದೊಡ್ಡ ಸವಾಲಾಗುವ ಸಾಧ್ಯತೆ ಇದೆ.

ಕೆಲವು ವರ್ಷಗಳ ಹಿಂದೆ ಕರ್ನಾಟಕ ತಂಡದಲ್ಲಿ ಸಮರ್ಥ್ ಮತ್ತು ರಾಬಿನ್ ಜೊತೆಗೆ ಆಡಿದವರು. ಇದೀಗ ತಮ್ಮ ತವರಿನಂಗಳ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿದ್ದಾರೆ.

ಈ ಟೂರ್ನಿಯಲ್ಲಿ ರಾಬಿನ್ ಎರಡು ಶತಕ ಬಾರಿಸಿದ್ದಾರೆ. ಒಟ್ಟು 288 ರನ್‌ಗಳನ್ನು ಪೇರಿಸಿದ್ದಾರೆ. ಕೇರಳ ತಂಡವು ಪಾಯಿಂಟ್ಸ್ ಪಟ್ಟಿಯ ಅಗ್ರಸ್ಥಾನದಲ್ಲಿದೆ. ಆಡಿರುವ ಮೂರು ಪಂದ್ಯಗಳಲ್ಲಿಯೂ ಜಯಿಸಿದೆ. ಬಲಗೈ ಬ್ಯಾಟ್ಸ್‌ಮನ್ ಸಮರ್ಥ್ ಖಾತೆಯಲ್ಲಿ 221 ರನ್‌ಗಳಿವೆ. ಅದರಲ್ಲಿ ಒಂದು ಶತಕ ಮತ್ತು ಅರ್ಧಶತಕ ಇದೆ. ತಂಡವು ಮೂರು ಪಂದ್ಯಗಳಲ್ಲಿ ಎರಡರಲ್ಲಿ ಗೆದ್ದು, ಒಂದರಲ್ಲಿ ಸೋತಿದೆ. ಕೇರಳ ತಂಡವನ್ನು ಮಣಿಸಿದರೆ ಅಗ್ರಸ್ಥಾನಕ್ಕೇರುವ ಅವಕಾಶ ಆತಿಥೇಯರಿಗೆ ಲಭಿಸಲಿದೆ. ಒಡಿಶಾ ಎದುರು ಶತಕ ಹೊಡೆದಿರುವ ದೇವದತ್ತ ಪಡಿಕ್ಕಲ್, ಉತ್ತಮ ಲಯದಲ್ಲಿರುವ ಕೆ.ವಿ. ಸಿದ್ಧಾರ್ಥ್, ಲಯ ಕಂಡುಕೊಳ್ಳಲು ಪರದಾಡುತ್ತಿರುವ ಕರುಣ್ ನಾಯರ್ ಅವರ ಮುಂದೆ ಕೇರಳದ ಎಸ್. ಶ್ರೀಶಾಂತ್ ಅವರನ್ನು ಎದುರಿಸುವ ಸವಾಲಿದೆ. ನಿಧೀಶ್, ಸಚಿನ್ ಕೂಡ ಉತ್ತಮವಾಗಿ ಬೌಲಿಂಗ್ ಮಾಡುತ್ತಿದ್ದಾರೆ.



ರಾಬಿನ್ ಉತ್ತಪ್ಪ

ಬ್ಯಾಟಿಂಗ್‌ನಲ್ಲಿ ರಾಬಿನ್ ಜೊತೆಗೆ ವಿಷ್ಣು ವಿನೋದ್, ಸಂಜು ಸ್ಯಾಮ್ಸನ್, ಮೊಹಮ್ಮದ್ ಅಜರುದ್ದೀನ್ ಮತ್ತು ವತ್ಸಲ್ ಗೋವಿಂದ್ ಅವರನ್ನು ಕಟ್ಟಿಹಾಕುವ ಸವಾಲು ಆತಿಥೇಯ ಬೌಲರ್‌ಗಳಾದ ಅಭಿಮನ್ಯು ಮಿಥುನ್ ಬಳಗದ ಮುಂದೆ ಇದೆ. ಒಟ್ಟಿನಲ್ಲಿ ಈ ಪಂದ್ಯವು ರೋಚಕವಾಗುವ ಎಲ್ಲ ಲಕ್ಷಣಗಳೂ ಇವೆ.

ತಂಡಗಳು: ಕರ್ನಾಟಕ: ಆರ್. ಸಮರ್ಥ್ (ನಾಯಕ), ದೇವದತ್ತ ಪಡಿಕ್ಕಲ್, ಕೆ.ವಿ. ಸಿದ್ಧಾರ್ಥ್, ಕರುಣ್ ನಾಯರ್, ಅನಿರುದ್ಧ ಜೋಶಿ, ಅಭಿಮನ್ಯು ಮಿಥುನ್, ಜೆ. ಸುಚಿತ್, ಬಿ.ಆರ್. ಶರತ್ (ವಿಕೆಟ್‌ಕೀಪರ್), ಶ್ರೇಯಸ್ ಗೋಪಾಲ್, ವೈಶಾಖ ವಿಜಯಕುಮಾರ್, ಪ್ರಸಿದ್ಧಕೃಷ್ಣ, ರೋನಿತ್ ಮೋರೆ, ಡೇಗಾ ನಿಶ್ಚಲ್, ರೋಹನ್ ಕದಂ, ಆದಿತ್ಯ ಸೋಮಣ್ಣ, ಎಂ.ಬಿ. ದರ್ಶನ್, ನಿಕಿನ್ ಜೋಸ್, ಶಿವಕುಮಾರ್ ರಕ್ಷಿತ್, ಕೆ.ಎಲ್. ಶ್ರೀಜಿತ್, ಮನೋಜ್ ಎಸ್. ಭಾಂಡಗೆ, ಶುಭಾಂಗ್ ಹೆಗಡೆ.

ಕೇರಳ: ಸಚಿನ್ ಬೇಬಿ (ನಾಯಕ), ರಾಬಿನ್ ಉತ್ತಪ್ಪ, ವಿಷ್ಣು ವಿನೋದ್, ಮೊಹಮ್ಮದ್ ಅಜರುದ್ದೀನ್, ವತ್ಸಲ್ ಗೋವಿಂದ್, ಕಳ್ಳಿಪರಂಬಿಲ್ ರೋಜಿತ್, ಜಲಜ್ ಸಕ್ಸೆನಾ, ಎಂ.ಡಿ. ನಿಧೀಶ್, ಎಸ್. ಶ್ರೀಶಾಂತ್, ಎನ್.ಪಿ. ಬಾಸಿಲ್, ವಿನೂಪ್ ಮನೋಹರನ್, ಅಕ್ಷಯ್ ಚಂದ್ರನ್, ಸಲ್ಮಾನ್ ನೈಜರ್, ರೋಹನ್ ಕುನ್‌ಉಮ್ಮೆ, ಸಿಜೊಮನ್ ಜೋಸೆಫ್, ಸುದೇಷ್ಣ ಮಿಥುನ್.

ಪಂದ್ಯ ಆರಂಭ: ಬೆಳಿಗ್ಗೆ 9

ಮಿಲಿಟರಿ ಖಾತೆಗಳಿಗೆ ಫೇಸ್‌ಬುಕ್ ನಿರ್ಬಂಧ

ಯಾಂಗೂನ್: ಮ್ಯಾನ್ಮಾರ್ ಮಿಲಿಟರಿಗೆ ಸಂಬಂಧಿಸಿದ ಎಲ್ಲಾ ಖಾತೆಗಳನ್ನು ಮತ್ತು ಮಿಲಿಟರಿ ನಿಯಂತ್ರಿತ ಕಂಪನಿಗಳ ಜಾಹೀರಾತುಗಳನ್ನು ನಿಷೇಧಿಸುವುದಾಗಿ ಫೇಸ್‌ಬುಕ್ ಗುರುವಾರ ತಿಳಿಸಿದೆ. ಫೆಬ್ರುವರಿ 1 ರಂದು ಸೇನೆಯು ಚುನಾಯಿತ ಸರ್ಕಾರದ ವಿರುದ್ಧ ದಂಗೆ ಎದ್ದು, ಅಧಿಕಾರವನ್ನು ವಶಕ್ಕೆ ಪಡೆಯಿತು.

‘ಮ್ಯಾನ್ಮಾರ್‌ನಲ್ಲಿ ತಲೆದೋರಿರುವ ಬಿಕ್ಕಟ್ಟನ್ನು ‘ತುರ್ತುಪರಿಸ್ಥಿತಿ’ ಎಂದು ಪರಿಗಣಿಸಿ, ಸಂಸ್ಥೆಯು ಈ ಕ್ರಮವನ್ನು ಕೈಗೊಳ್ಳುತ್ತಿದೆ. ಮ್ಯಾನ್ಮಾರ್‌ನಲ್ಲಿ ಹಿಂಸಾಚಾರ ನಡೆದ ಸಂದರ್ಭದಲ್ಲೇ ಮಿಲಿಟರಿ ಆಧಾರಿತ ಖಾತೆಗಳ ಮೇಲೆ ನಿರ್ಬಂಧ ಹೇರುವುದಾಗಿ ನಿರ್ಧರಿಸಲಾಗಿತ್ತು’ ಎಂದು ಫೇಸ್‌ಬುಕ್ ಹೇಳಿಕೆ ಬಿಡುಗಡೆ ಮಾಡಿದೆ.

‘ದಂಗೆಯ ಆರಂಭದಲ್ಲೇ ಮಿಲಿಟರಿಗೆ ಸಂಬಂಧಿಸಿದ ಕೆಲ ಖಾತೆಗಳು ಮತ್ತು ಸೇನಾ ನಿಯಂತ್ರಿತ ಟಿವಿಯ ಪ್ರಸಾರವನ್ನು ನಿರ್ಬಂಧಿಸಿದ್ದೆವು’ ಎಂದು ಫೇಸ್‌ಬುಕ್ ಹೇಳಿದೆ. ಫೇಸ್‌ಬುಕ್ ಮಾತ್ರವಲ್ಲದೇ ಇನ್‌ಸ್ಟಾಗ್ರಾಮ್‌ನಲ್ಲೂ ಈ ನಿರ್ಬಂಧ ಹೇರಲಾಗಿದೆ.

ವಿವೇಕಮೂರ್ತಿ ನಾಮನಿರ್ದೇಶನ ಅನುಮೋದನೆ: ವಿಚಾರಣೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಸರ್ಜನ್ ಜನರಲ್ ಹುದ್ದೆಗೆ ಭಾರತೀಯ ಅಮೆರಿಕನ್ ವೈದ್ಯ ಡಾ.ವಿವೇಕ್ ಮೂರ್ತಿ ಅವರ ನಾಮನಿರ್ದೇಶನವನ್ನು ಅನುಮೋದಿಸುವ ಸಂಬಂಧ ಸೆನೆಟ್‌ನ ಸಮಿತಿ ವಿಚಾರಣೆ ನಡೆಸಲಿದೆ.

ವೈದ್ಯಕೀಯ ಸೇವೆಗೆ ಸಂಬಂಧಿಸಿದಂತೆ ಇದು ಅಮೆರಿಕದ ಅತ್ಯುನ್ನತ ಹುದ್ದೆಯಾಗಿದ್ದು, ಅಧ್ಯಕ್ಷ ಜೋ ಬೈಡನ್ ಅವರು ಡಾ.ಮೂರ್ತಿ ಅವರನ್ನು ಈ ಹುದ್ದೆಗೆ ನಾಮನಿರ್ದೇಶನ ಮಾಡಿದ್ದಾರೆ.

ಆರೋಗ್ಯ, ಶಿಕ್ಷಣ, ಕಾರ್ಮಿಕ ಹಾಗೂ ಪಿಂಚಣಿಗೆ ಸಂಬಂಧಿಸಿದ ಸೆನೆಟ್‌ನ ಸಮಿತಿಯು ಈ ವಿಚಾರಣೆ ನಡೆಸಲಿದ್ದು, ಅಮೆರಿಕದಲ್ಲಿ ಕೋವಿಡ್‌ನಿಂದಾದ ಪ್ರಾಣಹಾನಿ, ಪಿಡುಗು ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮೂರ್ತಿ ಅವರು ತಮ್ಮ ಯೋಜನೆಗಳನ್ನು ಸಮಿತಿ ಮುಂದೆ ಪ್ರಸ್ತುತಪಡಿಸಲಿದ್ದಾರೆ.



ಡಾ.ವಿವೇಕ ಮೂರ್ತಿ

‘ಕೋವಿಡ್‌ನಿಂದ ದೇಶ ಭಾರಿ ನೋವನ್ನು ಅನುಭವಿಸಿದೆ. ಐದು ಲಕ್ಷಕ್ಕೂ ಅಧಿಕ ಜನರು ಕೊರೊನಾ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಭಾರತದಲ್ಲಿರುವ ನನ್ನ ಕುಟುಂಬದ ಏಳು ಜನ ಸದಸ್ಯರನ್ನು ಕಳೆದುಕೊಂಡಿದ್ದೇನೆ’ ಎಂಬುದನ್ನು ಸಂಸತ್‌ನ ಸಮಿತಿ ಗಮನಕ್ಕೆ ತರುವ ಮೂಲಕ ಮೂರ್ತಿ ಅವರು ಕೋವಿಡ್‌ನ ಭೀಕರತೆಯನ್ನು ವಿವರಿಸುವರು. ಸಂಸತ್ ಸಮಿತಿ ಮುಂದೆ ತಾವು ಪ್ರಸ್ತುತಪಡಿಸಲು ಮೂರ್ತಿ ಅವರು ಸಿದ್ಧಪಡಿಸಿರುವ ದಾಖಲೆಗಳನ್ನು ಉಲ್ಲೇಖಿಸಿ ಎಬಿಸಿ ನ್ಯೂಸ್ ಸುದ್ದಿಸಂಸ್ಥೆ ಮಾಡಿರುವ ವರದಿಯಲ್ಲಿ ಈ ವಿಷಯವನ್ನು ವಿವರಿಸಲಾಗಿದೆ.

‘ಅಮೆರಿಕದ ಸರ್ಜನ್ ಜನರಲ್ ಹುದ್ದೆಗೆ ನೇಮಕಗೊಂಡರೆ, ಕೋವಿಡ್ ಪಿಡುಗನ್ನು ನಿರ್ಮೂಲನೆ ಮಾಡುವುದು ನನ್ನ ಮೊದಲ ಆದ್ಯತೆಯಾಗಲಿದೆ. ದೇಶದ ವಿವಿಧ ಇಲಾಖೆಗಳ ಅಧಿಕಾರಿಗಳು, ಶಾಲಾ–ಕಾಲೇಜುಗಳು, ವಿಶ್ವವಿದ್ಯಾಲಗಳು, ವರ್ತಕ ಸಮೂಹ, ಆರೋಗ್ಯ ಕಾರ್ಯಕರ್ತರೊಂದಿಗೆ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಿರುವೆ’ ಎಂಬ ಅಂಶವನ್ನು ಸಹ ಅವರು ಸಮಿತಿ ಮುಂದಿಡುವರು ಎಂದು ವರದಿ ತಿಳಿಸಿದೆ.

ಕ್ಷಮೆಯಾಚಿಸಿದ ಪಾಕ್ ಸಂಸದ

ಕರಾಚಿ (ಪಿಟಿಐ): ‘ಪಾಕಿಸ್ತಾನದ ಅಲ್ಪಸಂಖ್ಯಾತ ಹಿಂದೂ ಸಮುದಾಯಕ್ಕೆ ಅಗೌರವ ತೋರುವ ರೀತಿಯಲ್ಲಿ ಟ್ವೀಟ್ ಮಾಡಿದ್ದ ಪಾಕಿಸ್ತಾನದ ಸಂಸದ ಅಮೀರ್ ಲಿಯಾಕತ್ ಹುಸೇನ್ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಪಾಕಿಸ್ತಾನದ ಹಲವು ಸಂಘಟನೆಗಳು ಒತ್ತಾಯಿಸಿವೆ. ಇದರ ಬೆನ್ನಲ್ಲೇ ಕ್ಷಮೆಯಾಚಿಸಿರುವ ಸಂಸದ, ಟ್ವೀಟ್ ಡಿಲೀಟ್ ಮಾಡಿದ್ದಾರೆ.

ಪಾಕಿಸ್ತಾನದ ಆಡಳಿತಾರೂಢ ಪಕ್ಷ ಪಾಕಿಸ್ತಾನ ತೆಹ್ರೀಕ್ ಎ ಇನ್ಸಾಫ್(ಪಿಟಿಐ) ಸಂಸದ ಅಮೀರ್ ಲಿಯಾಕತ್ ಹುಸೇನ್, ಹಿಂದೂ ದೇವತೆಯ ಚಿತ್ರವನ್ನು ಬಳಸಿ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಪುತ್ರಿ ಮತ್ತು ವಿರೋಧ ಪಕ್ಷದ ನಾಯಕಿ ಮರಿಯಂ ನವಾಜ್ ಅವರನ್ನು ಅಪಹಾಸ್ಯ ಮಾಡಿದ್ದರು.

ಇದಕ್ಕೆ ಹಿಂದೂ ಸಮುದಾಯದವರು ಮತ್ತು ಹಲವು ರಾಜಕೀಯ ನಾಯಕರು ವಿರೋಧ ವ್ಯಕ್ತಪಡಿಸಿದ್ದಾರೆ.

‘ಇದೊಂದು ನಾಚಿಗೇಡಿನ ಕೃತ್ಯ. ಈ ಟ್ವೀಟ್ ಅನ್ನು ಆದಷ್ಟು ಬೇಗ ಡಿಲೀಟ್ ಮಾಡಿ, ಇಲ್ಲದಿದ್ದರೆ ಧರ್ಮ ನಿಂದನೆ ಕಾಯ್ದೆಯಡಿ ಕ್ರಮಕೈಗೊಳ್ಳಲು ಒತ್ತಾಯಿಸುತ್ತೇವೆ. ಅಲ್ಲದೆ ದೇಶದಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತೇವೆ’ ಎಂದು ಪಾಕಿಸ್ತಾನಿ ಹಿಂದೂ ಕೌನ್ಸಿಲ್‌ನ ಮುಖ್ಯಸ್ಥ ರಮೇಶ್ ಕುಮಾರ್ ವಕ್ವಾಣಿ ಅವರು ಟ್ವೀಟ್ ಮಾಡಿದ್ದರು.

ಇದರ ಬೆನ್ನಲ್ಲೇ ಟ್ವಿಟರ್‌ನಲ್ಲಿ ಕ್ಷಮೆಯಾಚಿಸಿರುವ ಹುಸೇನ್, ‘ಹಿಂದೂ ಸಮುದಾಯದವರ ಭಾವನೆಗೆ ಧಕ್ಕೆಯನ್ನುಂಟು ಮಾಡಿದ್ದಕ್ಕೆ ಕ್ಷಮೆಯಾಚಿಸುತ್ತೇನೆ. ನಾನು ಎಲ್ಲಾ ಧರ್ಮಗಳನ್ನು ಗೌರವಿಸುತ್ತೇನೆ. ಇದನ್ನು ನನಗೆ ನನ್ನ ಧರ್ಮ ಕಲಿಸಿಕೊಟ್ಟಿದೆ’ ಎಂದು ಹೇಳಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಪಾಕ್ ವಿರುದ್ಧ ಭಾರತ ಪರೋಕ್ಷ ಟೀಕೆ

ಉಗ್ರರ ದುಷ್ಕೃತ್ಯಕ್ಕೆ ಪ್ರತಿದಾಳಿ ಅನಿವಾರ್ಯ

ವಿಶ್ವಸಂಸ್ಥೆ (ಪಿಟಿಐ): ನೆರೆಯ ರಾಷ್ಟ್ರವೊಂದರಲ್ಲಿ ಸಕ್ರಿಯವಾಗಿರುವ ಸಂಘಟನೆಯಿಂದ ತನ್ನ ಮೇಲೆ ವಿಧ್ವಂಸಕ ದಾಳಿ ಸನ್ನಿಹಿತ ಎಂಬುದು ಗೊತ್ತಾದಾಗ ದೇಶವೊಂದು ದುರಂತ ತಪ್ಪಿಸಲು ಪ್ರತಿ ದಾಳಿ ನಡೆಸಬೇಕಾಗುತ್ತದೆ ಎಂದು ಭಾರತ ವಿಶ್ವಸಂಸ್ಥೆಯಲ್ಲಿ ಹೇಳಿದೆ.

ಭದ್ರತೆಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ಭದ್ರತಾ ಮಂಡಳಿಯ ಸದಸ್ಯ ರಾಷ್ಟ್ರವಾದ ಮೆಕ್ಸಿಕೊ ಆಯೋಜಿಸಿದ್ದ ಔಪಚಾರಿಕ ಸಭೆಯಲ್ಲಿ ಮಾತನಾಡಿದ ವಿಶ್ವಸಂಸ್ಥೆಯಲ್ಲಿ ಭಾರತದ ಉಪ ಕಾಯಂ ಪ್ರತಿನಿಧಿ ಕೆ.ನಾಗರಾಜ ನಾಯ್ಡು, ಪಾಕಿಸ್ತಾನದ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಪುಲ್ವಾಮಾದಲ್ಲಿ ನಡೆದ ಭಯೋತ್ಪಾದಕ ಕೃತ್ಯ, ಗಡಿಯಾಚೆ ನಡೆಯುತ್ತಿರುವ ಉಗ್ರರ ಚಟುವಟಿಕೆಗಳನ್ನು ಪ್ರಸ್ತಾಪಿಸಿದ ಅವರು, ‘ನೆರೆಯ ರಾಷ್ಟ್ರವೊಂದರ ನೆಲದಿಂದ ನಮ್ಮ ಮೇಲೆ ಉಗ್ರ ಸಂಘಟನೆಗಳು ದಾಳಿ ನಡೆಸುತ್ತಿವೆ. ಆ ದೇಶದ ಸಾರ್ವಭೌಮತೆಯನ್ನು ತಮ್ಮ ದುಷ್ಕೃತ್ಯಗಳಿಗೆ ಗುರಾಣಿಯನ್ನಾಗಿ ಬಳಸಿಕೊಳ್ಳುತ್ತಿವೆ’ ಎಂದೂ ಹೇಳಿದರು.

‘ಸಂದರ್ಭಕ್ಕೆ ತಕ್ಕಂತೆ ತನ್ನ ರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವುದು ಒಂದು ದೇಶದ ಪರಮಾಧಿಕಾರವಾಗಿದೆ’ ಎಂದು ಹೇಳುವ ಮೂಲಕ ಅವರು ಭಾರತ ಕೈಗೊಂಡ ಉಗ್ರರ ನಿಗ್ರಹ ಕಾರ್ಯಾಚರಣೆಗಳನ್ನು ಸಮರ್ಥಿಸಿಕೊಂಡರು.

ಸಲಿಂಗ ಮದುವೆಗೆ ಕೇಂದ್ರದ ವಿರೋಧ

ನವದೆಹಲಿ: ಸಲಿಂಗ ವಿವಾಹದ ನೋಂದಣಿಗೆ ಅವಕಾಶ ಕೋರಿ ದೆಹಲಿ ಹೈಕೋರ್ಟ್‌ಗೆ ಸಲ್ಲಿಸಲಾಗಿರುವ ಅರ್ಜಿಯನ್ನು ಕೇಂದ್ರ ಸರ್ಕಾರವು ವಿರೋಧಿಸಿದೆ. ಸಲಿಂಗ ವಿವಾಹವನ್ನು ನಿಷೇಧಿಸುವುದರಿಂದ ಮೂಲಭೂತ ಹಕ್ಕಿನ ಉಲ್ಲಂಘನೆ ಆಗುವುದಿಲ್ಲ. ‘ಮದುವೆ’ ಎಂಬುದು ಎರಡು ವ್ಯಕ್ತಿಗಳ ನಡುವೆ ನಡೆಯುವ ಸಾಮಾಜಿಕವಾಗಿ ಮಾನ್ಯತೆ ಪಡೆದ ಸಮ್ಮಿಲನ. ಇದಕ್ಕೆ ವೈಯಕ್ತಿಕ ಕಾನೂನು ಅಥವಾ ಇತರೆ ಕಾನೂನಿನ ಬೆಂಬಲ ಇದೆ ಎಂದು ಕೇಂದ್ರವು ವಾದಿಸಿದೆ. ಭಿನ್ನ ಲಿಂಗದ ವ್ಯಕ್ತಿಗಳ ನಡುವಣ ಮದುವೆಗೆ ಮಾತ್ರ ಕಾನೂನುಬದ್ಧ ಮಾನ್ಯತೆ ನೀಡಿಕೆಯಲ್ಲಿ ಸರ್ಕಾರದ ನ್ಯಾಯಬದ್ಧ ಹಿತಾಸಕ್ತಿ ಅಡಗಿದೆ ಎಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

‘ಮದುವೆ ಎಂಬ ಸಂಸ್ಥೆಗೆ ದೇಶದ ಎಲ್ಲ ಭಾಗಗಳಲ್ಲಿ ಪಾವಿತ್ರ್ಯ ಇದೆ. ನಮ್ಮ ದೇಶದಲ್ಲಿ, ಹೆಣ್ಣು ಮತ್ತು ಗಂಡಿನ ನಡುವಣ ಮದುವೆಯ ಬಂಧಕ್ಕೆ ಸಾಂವಿಧಾನಿಕ ಮಾನ್ಯತೆ ಇರುವುದರ ಜತೆಗೆ, ಪದ್ಧತಿಗಳು, ವಿಧಿ ವಿಧಾನಗಳು, ಸಾಂಸ್ಕೃತಿಕ ನಿಯಮಗಳು ಮತ್ತು ಸಾಮಾಜಿಕ ಮೌಲ್ಯದ ಬಲ ಇದೆ’ ಎಂದು ಕೇಂದ್ರವು ಹೇಳಿದೆ. ಭಾರತದ ಕುಟುಂಬದ ಪರಿಕಲ್ಪನೆಯು ಸಲಿಂಗ ವ್ಯಕ್ತಿಗಳು ಒಟ್ಟಾಗಿ ಬದುಕುವುದು ಮತ್ತು ಲೈಂಗಿಕ ಸಂಬಂಧವನ್ನು ಹೊಂದುವುದಕ್ಕಿಂತ ಭಿನ್ನವಾದುದು. ಭಾರತದ ಕೌಟುಂಬಿಕ ವ್ಯವಸ್ಥೆಯಲ್ಲಿ ಗಂಡ, ಹೆಂಡತಿ ಮತ್ತು ಮಕ್ಕಳು ಎಂಬುದು ಭಿನ್ನ ಪರಿಕಲ್ಪನೆ ಎಂದು ಸರ್ಕಾರ ವಾದಿಸಿದೆ.

‘ಚೀನಾಕ್ಕೆ ಭೂಪ್ರದೇಶ ಬಿಟ್ಟುಕೊಡುವುದಿಲ್ಲ’

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಗಡಿ ಪ್ರದೇಶದಲ್ಲಿ ಉಭಯ ಸೇನೆಗಳನ್ನು ವಾಪಸ್ ಕರೆಸಿಕೊಳ್ಳುವ ಮಾತುಕತೆ ಭಾಗವಾಗಿ ದೇಶದ ಯಾವುದೇ ಭೂಪ್ರದೇಶವನ್ನು ಚೀನಾಕ್ಕೆ ಬಿಟ್ಟುಕೊಡುವುದಿಲ್ಲ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಸ್ಪಷ್ಟಪಡಿಸಿದೆ.

ಮಾತುಕತೆ ಪ್ರಕಾರವೇ ಯಾವುದೇ ಅಹಿತಕರ ಬದಲಾವಣೆ ನಡೆಯದಂತೆ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ನಿಗಾವಹಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

ವಿದೇಶಾಂಗ ಸಚಿವಾಲಯದ ವಕ್ತಾರ ಅನುರಾಗ್ ಶ್ರೀವಾಸ್ತವ, ’ಎಲ್‌ಎಸಿ ಕುರಿತು ಭಾರತದ ನಿಲುವಿನಲ್ಲಿ ಬದಲಾವಣೆಯಿಲ್ಲ. ಸೇನಾ ಮಾತುಕತೆಯ ಒಪ್ಪಂದದ ಭಾಗವಾಗಿ, ಭಾರತ–ಚೀನಾ ಪಡೆಗಳು ಪೂರ್ವ ಲಡಾಖ್ ಗಡಿ ಪ್ರದೇಶದಿಂದ ಸೇನೆಯನ್ನು ಹಿಂಪಡೆದುಕೊಳ್ಳುವ ಪ್ರಕ್ರಿಯೆ ಬಗ್ಗೆ ತಪ್ಪಾಗಿ ಅರ್ಥೈಸಬಾರದು‘ ಎಂದು ಹೇಳಿದ್ದಾರೆ.

ಚೀನಾದ ಪ್ರಚಾರ ವಿರೋಧಿ ಕಾಯ್ದೆ ಮಂಡನೆ

ವಾಷಿಂಗ್ಟನ್ (ಪಿಟಿಐ): ತನ್ನ ನೆಲದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯ ಹಾಗೂ ಇತರ ವಿಷಯಗಳ ಕುರಿತು ಜಗತ್ತಿಗೆ ಚೀನಾ ತಪ್ಪು ಮಾಹಿತಿ ನೀಡುವುದನ್ನು ತಡೆದು, ಅಗತ್ಯ ಕಂಡು ಬಂದಲ್ಲಿ ಆ ದೇಶದ ವಿರುದ್ಧ ನಿರ್ಬಂಧ ಹೇರಲು ಅನುವು ಮಾಡಿಕೊಡುವ ‘ಚೀನಾ ಪ್ರಚಾರ ವಿರೋಧಿ ಕಾಯ್ದೆ’ ಎಂಬ ಮಸೂದೆಯನ್ನು ಅಮೆರಿಕದ ಸಂಸತ್‌ನಲ್ಲಿ ಮಂಡಿಸಲಾಗಿದೆ.

ರಿಪಬ್ಲಿಕನ್ ಸ್ಟಡಿ ಕಮಿಟಿ ಅಧ್ಯಕ್ಷ, ಸಂಸದ ಜಿಮ್ ಬ್ಯಾಂಕ್ಸ್ ಹಾಗೂ ಸೆನೆಟ್ ಸದಸ್ಯ ಟಾಮ್ ಕಾಟನ್ ಅವರು ಈ ಸಂಬಂಧದ ಮಸೂದೆಯನ್ನು ಮಂಡಿಸಿದರು.

ರಿಪಬ್ಲಿಕನ್ ಸ್ಟಡಿ ಕಮಿಟಿಯ ನ್ಯಾಷನಲ್ ಸೆಕ್ಯುರಿಟಿ ಸ್ಟ್ರಾಟಜಿ ಅಧ್ಯಯನ ನಡೆಸಿ, ಮಾಡಿರುವ ಶಿಫಾರಸಿನ ಆಧಾರದಲ್ಲಿ ಈ ಮಸೂದೆಯನ್ನು ಸಿದ್ಧಪಡಿಸಲಾಗಿದೆ.

ಚೀನಾದ ಕಮ್ಯುನಿಸ್ಟ್ ಪಾರ್ಟಿಯ (ಸಿಪಿಸಿ) ಸಾಗರೋತ್ತರ ವಿದ್ಯಮಾನ ನೋಡಿಕೊಳ್ಳುವ ಅಂಗಸಂಸ್ಥೆಯಾದ ಯುನೈಟೆಡ್ ಫ್ರಂಟ್ ವರ್ಕ್ ಡಿಪಾರ್ಟ್‌ಮೆಂಟ್ (ಯುಎಫ್‌ಡಬ್ಲ್ಯು-ಡಿ), ಚೀನಾ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಕೈಗೊಂಡು, ಅಭಿಪ್ರಾಯ ರೂಪಿಸುವ ಕಾರ್ಯ ಮಾಡುತ್ತದೆ. ‘ಚೀನಾದಲ್ಲಿ ಉಯಿಘರ್ ಮುಸ್ಲಿಮರ ಹತ್ಯೆ, ಕ್ರೈಸ್ತರ ವಿರುದ್ಧ ನಡೆಯುತ್ತಿರುವ ದೌರ್ಜನ್ಯದಲ್ಲಿ ಯುಎಫ್‌ಡಬ್ಲ್ಯುಡಿ ಶಾಮೀಲಾಗಿದೆ. ಆದರೆ, ಈ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಇದೇ ರೀತಿಯ ದೌರ್ಜನ್ಯವನ್ನು ಜಗತ್ತಿನ ಇತರೆಡೆ ವಿಸ್ತರಿಸುವುದೇ ಇದರ ಗುರಿಯಾಗಿದೆ’ ಎಂದು ಬ್ಯಾಂಕ್ಸ್ ಆರೋಪಿಸಿದ್ದಾರೆ.

ಈ ಕಾಯ್ದೆ ಜಾರಿಯಾದರೆ, ಯುಎಫ್‌ಡಬ್ಲ್ಯುಡಿ ಮೇಲೆ ನಿರ್ಬಂಧ ಹೇರಲು ಸಾಧ್ಯವಾಗಲಿದೆ.